‘ಪ್ರಪಂಚದಲ್ಲಿಯೇ ಅತಿ ದೊಡ್ಡ ಸಾಮಾಜಿಕ ಸುರಕ್ಷಾ ಯೋಜನೆ’

ಎಂಬ ಹೆಗ್ಗಳಿಕೆಗೆ ಪಾತ್ರವಾದ ‘ಚಿಂತೆಯಿಂದ ಮುಕ್ತವಾಗಿಸುವ’

# ಇ.ಎಸ್.ಐ. ಮಾರ್ಗದರ್ಶಿ

**ಲೇಖಕರು**

**ಎಚ್.ಎನ್. ಯಾದವಾಡ**

ನಿವೃತ್ತ ಸಹ ನಿರ್ದೇಶಕರು

ಕಾರ್ಮಿಕ ಹಾಗೂ ಉದ್ಯೋಗ ಇಲಾಖೆ, ಭಾರತ ಸರ್ಕಾರ

NIRUTA
Publications

**ESI Margadarshi**
by H.N. Yadawad


ISBN : 978-93-84262-49-5
First Edition : 2018
Size : 1/8 Demmy
Price : Rs. 125/-
Copies : 1000
Paper : N.S. Maplitho 70 GSM
Pages : 84
Rights : Author
ಪ್ರಥಮ ಮುದ್ರಣ : ೨೦೧೮
ಆಕಾರ : ೧/೮ ಡೆಮಿ
ಪುಟಗಳು : ೮೪
ಕಾಗದ : ಎನ್.ಎಸ್. ಮ್ಯಾಪ್ಲಿತೊ ೭೦ ಜಿ.ಎಸ್.ಎಂ.
ಹಕ್ಕುಗಳು : ಕೃತಿಕಾರನವು
ಬೆಲೆ : ರೂ. ೧೨೫/-
ಮುಖಪುಟ ವಿನ್ಯಾಸ : ನಿರಾತಂಕ

ಪ್ರಕಾಶಕರು : **ನಿರುತ ಪಬ್ಲಿಕೇಷನ್ಸ್,** ನಂ. ೩೨೬, ೧ನೇ ಮಹಡಿ, ಸಿಂಡಿಕೇಟ್ ಬ್ಯಾಂಕ್ ಎದುರು, ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ, ಬೆಂಗಳೂರು-೫೬೦೦೫೬. ದೂ : ೦೮೦-೨೩೨೧೩೭೧೦, ಮೊ: ೯೯೮೦೦೬೬೮೯೦
Email: ramesha.mh@gmail.com, nirutapublications@gmail.com
www.socialworkfootprints.org, www.niratanka.org

ಮುದ್ರಣ : **ನಿರುತ ಪಬ್ಲಿಕೇಷನ್ಸ್,** ನಂ. ೩೨೬, ೧ನೇ ಮಹಡಿ, ಸಿಂಡಿಕೇಟ್ ಬ್ಯಾಂಕ್ ಎದುರು, ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ, ಬೆಂಗಳೂರು-೫೬೦೦೫೬. ದೂ : ೦೮೦-೨೩೨೧೩೭೧೦, ಮೊ: ೯೯೮೦೦೬೬೮೯೦
Email: ramesha.mh@gmail.com, nirutapublications@gmail.com
www.socialworkfootprints.org, www.niratanka.org

# ಮುನ್ನುಡಿ

ಪ್ರಪಂಚದಲ್ಲಿಯೇ ಅತೀ ದೊಡ್ಡ ಸಾಮಾಜಿಕ ಸುರಕ್ಷಾ ಯೋಜನೆಯಾದ ಇ.ಎಸ್.ಐ ಯೋಜನೆಯ ಕುರಿತಾದ ಮಾಹಿತಿಗಳ ಜೊತೆಗೆ ಕಾರ್ಮಿಕರ ಆಶೋತ್ತರಗಳನ್ನು ಗಮನದಲ್ಲಿರಿಸಿಕೊಂಡು ಲೇಖಕರು ಈ ಕಿರು ಹೊತ್ತಿಗೆಯನ್ನು ಪ್ರಶ್ನೋತ್ತರ ರೂಪದಲ್ಲಿ ರಚಿಸಿದ್ದಾರೆ. ಇದು ಸಮಯ–ಸಂದರ್ಭ ಔಚಿತ್ಯಗಳಿಗೆ ಅನುಸಾರವಾಗಿ ಇ. ಎಸ್. ಐ ಅಧಿನಿಯಮದ ಕಾನೂನು, ನಿಯಮ, ಹಿತಲಾಭ ಮತ್ತು ಫಲಾನುಭವಗಳ ಇತಿ–ಮಿತಿಗಳನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಈ ಪುಸ್ತಕದ ಲೇಖಕರೇ ಹೇಳುವಂತೆ ಇ.ಎಸ್.ಐ ಕಾನೂನಿನ ಫಲಾನುಭವ, ಸೌಲಭ್ಯ ಹಾಗೂ ಹಿತಲಾಭಗಳು ಜನರಿಗೆ ಅರ್ಥವಾಗದೇ ಗೊಂದಲಕ್ಕೆ ಈಡಾಗಲು ಕಾರಣವಾಗಿದೆ. ದೇಶದ ವಿವಿಧ ಭಾಷೆಗಳಲ್ಲಿ ಇ.ಎಸ್.ಐ ಯೋಜನೆಯ ಫಲಾನುಭವಗಳನ್ನು ಮುದ್ರಿಸಿ ವಿತರಿಸಲಾಗಿದೆಯಾದರೂ ಕನ್ನಡದಲ್ಲಿ ಸರಳವಾದ ಪ್ರಶ್ನೋತ್ತರ ಮಾದರಿಯಲ್ಲಿ ಇ.ಎಸ್.ಐ ಯೋಜನೆಯ ಕುರಿತಾದ ಮಾಹಿತಿಯನ್ನು ನೀಡಿರುವುದು ಅತ್ಯಂತ ಸೂಕ್ತವಾಗಿದೆ.

ಹಿರಿಯರೂ ಹಾಗೂ ಈ ಕಿರು ಹೊತ್ತಿಗೆಯ ಲೇಖಕರಾದ ಶ್ರೀ ಎಚ್.ಎನ್. ಯಾದವಾಡರವರು ಇ.ಎಸ್.ಐ ಇಲಾಖೆಯಲ್ಲಿ ಹಲವಾರು ವರ್ಷ ಸೇವೆ ಸಲ್ಲಿಸಿದ ಅಪಾರ ಅನುಭವ ಮತ್ತು ಜ್ಞಾನದ ಆಧಾರದ ಮೇಲೆ ಉಪಯುಕ್ತವಾಗಿ ಬರೆದಿದ್ದಾರೆ. ಇದರಿಂದ ಲಕ್ಷೋಪಲಕ್ಷ ಕಾರ್ಮಿಕ ಸಿಬ್ಬಂದಿಗಳಿಗೆ ಅನುಕೂಲವಾಗುವುದರಲ್ಲಿ ಸಂಶಯವಿಲ್ಲ. ಇದರಿಂದ ಲೇಖಕರ ಶ್ರಮ ಖಂಡಿತ ಸಾರ್ಥಕವಾಗುತ್ತದೆ. ದೇಶದ ಪ್ರಗತಿಗೆ ದುಡಿಯುತ್ತಿರುವ ಸಮಸ್ತ ಕಾರ್ಮಿಕ ಬಂಧುಗಳಿಗೆ ಈ ಪುಸ್ತಕದಿಂದ ಖಂಡಿತ ಲಾಭವಾಗುತ್ತದೆ. ಪ್ರತಿ ತಿಂಗಳೂ ಕಾರ್ಮಿಕ ತನ್ನ ಸಂಬಳದ

ಇ.ಎಸ್.ಐ ವಂತಿಗೆಗೆ ಪ್ರತಿಫಲವಾಗಿ ಸೌಲಭ್ಯಗಳನ್ನು ಪಡೆಯಲು ಈ ಕಿರುಹೊತ್ತಿಗೆ ಮಾರ್ಗದರ್ಶಿ ರೂಪದಲ್ಲಿ ಸಹಾಯ ಮಾಡುತ್ತದೆ.

ದೊಡ್ಡ ಕಾರ್ಖಾನೆ, ಸಣ್ಣ ಕಾರ್ಖಾನೆ, ಮಾರಾಟ–ಮಳಿಗೆ, ಉಪಹಾರ ಗೃಹ, ವಸತಿ ಗೃಹ, ಮುದ್ರಣಾಲಯ, ಸಾರಿಗೆ ಸಂಸ್ಥೆ, ಸಿನಿಮಾ ಮಂದಿರ, ಆರೋಗ್ಯ ಸಂಸ್ಥೆ, ಶಿಕ್ಷಣ ಸಂಸ್ಥೆ ಮತ್ತು ಗುಡಿ ಕೈಗಾರಿಕೆ ಇತ್ಯಾದಿ ಅನೇಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಈ ಕಿರುಪುಸ್ತಕವು ರೆಡಿ 'ರೆಕನರ್' ರೀತಿಯಲ್ಲಿ ಪ್ರಯೋಜನಕ್ಕೆ ಬರುತ್ತದೆ. ಕಾರ್ಖಾನೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾನವ ಸಂಪನ್ಮೂಲ ಅಧಿಕಾರಿಗಳು ಮತ್ತು ಕಾರ್ಮಿಕ ಕಲ್ಯಾಣ ಅಧಿಕಾರಿಗಳಿಗೂ ಈ ಕಿರು ಹೊತ್ತಿಗೆಯು ತತ್‌ಕ್ಷಣದ ಅಗತ್ಯವನ್ನು ನಿರ್ವಹಿಸಲು ಸಹಕಾರಿಯಾಗುತ್ತದೆ. ಇಎಸ್‌ಐ ವಿಮಾದಾರರು ಮನೆಯಲ್ಲಿ ಇದನ್ನು ಇಟ್ಟುಕೊಂಡು ಸಮಯ ಸಂದರ್ಭಗಳಲ್ಲಿ ಪುಸ್ತಕದ ಪ್ರಯೋಜನ ಪಡೆಯಬಹುದಾಗಿದೆ.

ಇಂತಹ ಕೃತಿ ರಚಿಸಿರುವ ಹಿರಿಯರಾದ ಶ್ರೀ ಎಚ್.ಎನ್. ಯಾದವಾಡರವರಿಗೆ ಸಮಸ್ತ ಓದುಗರ ಮತ್ತು ಫಲಾನುಭವಿಗಳ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ ಇಂತಹ ಉಪಯುಕ್ತ ಕೃತಿಯನ್ನು ಪ್ರಕಟಿಸಿದ ನಿರುತ ಪಬ್ಲಿಕೇಷನ್ಸ್ ನ ಗೆಳೆಯ ಶ್ರೀ ಎಂ.ಹೆಚ್. ರಮೇಶರವರಿಗೆ ನನ್ನ ವಂದನಾಪೂರ್ವಕ ಅಭಿನಂದನೆಗಳು ಮತ್ತು ನಮನಗಳು.

ಮೈಸೂರು–570006
ದಿನಾಂಕ : 19–08–2018

**ಡಾ. ಆರ್. ಶಿವಪ್ಪ**
ಅಧ್ಯಕ್ಷರು
ಸಮಾಜಕಾರ್ಯ ಅಧ್ಯಯನ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು–570006

# ಪುಸ್ತಕವನ್ನು ಓದಲಾರಂಭಿಸುವುದಕ್ಕೆ ಮೊದಲು ಒಂದು ಮಾತು

ಭವ್ಯ ಭಾರತದ ಕಾರ್ಮಿಕ ಬಂಧುಗಳು ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರುಗಳನ್ನು ಚಿಂತೆಯಿಂದ ಮುಕ್ತಗೊಳಿಸುವ ಹಾಗೂ ಪ್ರಪಂಚದಲ್ಲಿಯೇ ಅತೀ ದೊಡ್ಡ ಸಾಮಾಜಿಕ ಸುರಕ್ಷಾ ಯೋಜನೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಇ.ಎಸ್.ಐ. ಯೋಜನೆಯ ಕನ್ನಡದ ಪ್ರಪ್ರಥಮ ಈ ಕಿರುಹೊತ್ತಿಗೆಯು ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿದೆ. ಕಾರ್ಮಿಕರ ಆಶೋತ್ತರಗಳನ್ನು ಗಮನದಲ್ಲಿ ಇರಿಸಿಕೊಂಡು ಸಮಯ-ಸಂದರ್ಭ ಔಚಿತ್ಯಗಳಿಗೆ ಅನುಸಾರವಾಗಿ ಇ ಎಸ್ ಐ ಅಧಿನಿಯಮದ ಕಾನೂನು, ನಿಯಮ ಹಿತಲಾಭ ಹಾಗೂ ಫಲಾನುಭವದ ಇತಿ ಮಿತಿಗಳಲ್ಲಿ ಆವಧಿಕವಾಗಿ ಸಂಶೋಧನೆ, ಪರಿವರ್ತನೆ, ಬದಲಾವಣೆ ಹಾಗೂ ಪರಿಷ್ಕರಣೆಯ ಕಾರ್ಯ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಆದುದರಿಂದ ಈ ಕಿರುಹೊತ್ತಿಗೆಯನ್ನು ವೈದ್ಯಕೀಯ ಹಾಗೂ ನಗದು ಫಲಾನುಭವಗಳಿಗೆ ಸಂಬಂಧಪಟ್ಟಂತೆ ಯಾವುದೇ ಸಂದರ್ಭದಲ್ಲಿ ಕಾನೂನಿನ ದಾಖಲೆಯೆಂದು ಪರಿಗಣಿಸಲಾಗದು. ಇದು ಇ.ಎಸ್.ಐ ಯೋಜನೆಯ ಹೊರ ಆವರಣದ ರೂಪ ರೇಖೆಯನ್ನು ಪರಿಚಯಿಸುವ 'ಮಾರ್ಗದರ್ಶಿ' ಮಾತ್ರ ಎಂಬುದನ್ನು ಪಾಠಕ ಬಂಧುಗಳು ನೆನಪಿನಲ್ಲಿರಿಸಿಕೊಳ್ಳಬೇಕು.

–ಲೇಖಕರು.

***"ನೀವು ಯಾವುದಾದರೊಂದು ಕಾರ್ಯವನ್ನು ಕೈಗೆತ್ತಿಕೊಳ್ಳುವ ಪೂರ್ವದಲ್ಲಿ ಅತ್ಯಂತ ಬಡವ ಹಾಗೂ ನಿಶ್ಶಕ್ತ ವ್ಯಕ್ತಿಯ ಮುಖಚರ್ಯೆಯನ್ನು ನೆನೆಸಿಕೊಂಡು ಯೋಚಿಸಿ, ಅದರಿಂದ ಅವನಿಗೇನಾದರೂ ಅನುಕೂಲವಾಗಲಿದೆಯೇ ಎಂದು"***

***– ಮಹಾತ್ಮ ಗಾಂಧೀಜೀ.***

# ಲೇಖಕರ ಲೇಖನಿಯಿಂದ



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಗರೀಕರೆ ಪ್ರಭುಗಳು. ಜನರಿಂದ, ಜನರಿಗಾಗಿ ಹಾಗೂ ಜನರಿಗೋಸ್ಕರ ಇರುವ ವ್ಯವಸ್ಥೆಯಲ್ಲಿ ಆಡಳಿತದ ಚುಕ್ಕಾಣಿ ಜನರ ಕೈಯಲ್ಲಿಯೇ ಇದೆ. ಗ್ರಾಮ ಪಂಚಾಯಿತಿಯಿಂದ ಸಂಸತ್ತಿನವರೆಗೆ ದೇಶದ ಸಾಮಾನ್ಯ ನಾಗರೀಕರ ಭಾವನೆ ಹಾಗೂ ಅಭಿಮತದ ಪ್ರತಿನಿಧಿಯಾಗಿ ಜನಪ್ರತಿನಿಧಿಗಳು ಶಾಸಕಾಂಗದ ಅಂಗವಾಗಿ ಕಾರ್ಯನಿರ್ವಹಿಸುತ್ತಿದ್ದರೆ. ಸುಗಮ ಆಡಳಿತಕ್ಕಾಗಿ ಕಾನೂನು – ನೀತಿ – ನಿಯಮಗಳನ್ನು ಸಿದ್ಧಪಡಿಸಿ ಸಾರ್ವಜನಿಕ ಹಿತಾಸಕ್ತಿಗಳನ್ನು ಗಮನದಲ್ಲಿ ಇರಿಸಿಕೊಂಡು ಕಾರ್ಯಾಂಗದ ಮುಖಾಂತರ ಅವುಗಳಿಗೆ ಚಾಲನೆ ಕೊಟ್ಟು ಕಾರ್ಯರೂಪಕ್ಕೆ ತರಲಾಗುತ್ತದೆ. ಈ ಕಾರ್ಯವನ್ನು ಸರಕಾರಿ, ಅರೆಸರಕಾರಿ, ನಿಗಮ ಮಂಡಳಿಯ ಕಚೇರಿಯ ಮುಖಾಂತರ ಯೋಜನೆಗಳಿಗೆ ಚಾಲನೆ ನೀಡಲಾಗುತ್ತದೆ ಅದು ಎಲ್ಲರಿಗೂ ತಲುಪಲಿ ಎನ್ನುವ ಘನ ಉದ್ದೇಶದೊಂದಿಗೆ ಅದಕ್ಕೆ ಪೂರಕವಾಗಿ ಯೋಜನೆಯ ಸ್ವರೂಪವನ್ನು ಮುದ್ರಿಸಿ ಸಾರ್ವಜನಿಕರಿಗೆ ವಿತರಿಸಲಾಗುತ್ತದೆ. ದೇಶದ ಬಹುಪಾಲು ಎಲ್ಲ ಇಲಾಖೆಗಳ ಕಾರ್ಯ ಯೋಜನೆ ಹಾಗೂ ಫಲಾನುಭವಗಳ ತಿರುಳನ್ನು ಸಹಾಯಕ ಸಾಹಿತ್ಯದ ರೂಪದಲ್ಲಿ ಸಿದ್ಧಪಡಿಸಿ ಸಾರ್ವಜನಿಕರ ಗಮನಕ್ಕೆ ತರಲಾಗುತ್ತದೆ. ಇದು ಅವಶ್ಯಕವೂ ಕೂಡ.

ಖೇದಕರ ಸಂಗತಿಯಂದರೆ, ಭಾರತ ಸ್ವಾತಂತ್ರ್ಯಾ ನಂತರ ಏಳು ದಶಕಗಳು ಕಳೆದರೂ ಸರ್ಕಾರದ ಯೋಜನೆ ಕಾನೂನು ನಿಯಮಗಳು ದೇಶದ ಬಹುಪಾಲು ಜನರಿಗೆ ತಿಳಿದೇ ಇಲ್ಲ ! ಇದಕ್ಕೆ ಕಾರಣವೂ ಇಲ್ಲದೆ ಇಲ್ಲ. ಆಯಾ ಇಲಾಖೆಗಳ ಸಹಾಯಕ ಸಾಹಿತ್ಯವನ್ನು ಪರಕೀಯ ಭಾಷೆಯಾದ ಇಂಗ್ಲೀಷಿನಲ್ಲಿಯೇ ರಚಿಸಿ ವಿತರಿಸಲಾಗುತ್ತಿದೆ. ಅಲ್ಪ ಸ್ವಲ್ಪ ಪ್ರಾಂತೀಯ ಭಾಷೆಗಳಿಗೆ ತರ್ಜುಮೆಗೊಂಡರೂ ಭಾಷಾ ಶೈಲಿ ಹಾಗೂ ಬಳಸಲ್ಪಟ್ಟ ಶಬ್ದಗಳು ಜನ ಸಾಮಾನ್ಯರ ತಿಳುವಳಿಕೆಯಿಂದ ಬಹುದೂರ ನಿಲ್ಲುವುದರಿಂದ ಕಾನೂನು–ಫಲಾನುಭವ–ಸೌಲಭ್ಯ–ಹಿತಲಾಭಗಳು ಅರ್ಥವಾಗದೇ ಜನ ಸಾಮಾನ್ಯರು ಏನನ್ನೂ ಮಾಡುವ ಹಾಗೂ ಮಾಡದೇ ಇರುವ ಗೊಂದಲಕ್ಕೆ ಈಡಾಗಿದ್ದಾರೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಕವಿ ಮುದ್ದಣ ಹೇಳುವಂತೆ "ನೀರಿಳಿಯದ ಗಂಟಲಲಿ ಕಡುಬಂ ತುರುಕಿದಂತಾಯಿತು" ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಸರ್ಕಾರಗಳು ಯೋಜನೆಗಳಿಗಾಗಿ ಮಂಜೂರು ಮಾಡುವ ಕೋಟಿ–ಕೋಟಿ ಹಣ ಅಪವ್ಯಯವಾಗುತ್ತಿದೆ. ನಿಖರವಾಗಿ ತಲುಪಬೇಕಾದ ಜನರಿಗೆ ತಲುಪುತ್ತಿಲ್ಲ. ಕೇಂದ್ರ ಸರ್ಕಾರದ ಬಹುಪಾಲು ಎಲ್ಲ ಇಲಾಖೆಗಳ ಸ್ಥಿತಿ ಹೀಗೆಯೇ ಇರುವಾಗ ಭಾರತ ಸರ್ಕಾರ ಕಾರ್ಮಿಕ ಹಾಗೂ ಉದ್ಯೋಗ ಇಲಾಖೆಯ ನೌಕರರ ರಾಜ್ಯ ವಿಮಾ ನಿಗಮವೂ ಇದರಿಂದ ಹೊರತಾಗಿಲ್ಲ ಎಂದು ಬೇರೆ ಹೇಳಬೇಕಾದುದಿಲ್ಲ.

ಇ.ಎಸ್.ಐ ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಕಾರ್ಖಾನೆ, ಮಾರಾಟಮಳಿಗೆ, ವಸತಿ ಗೃಹ, ಸಿನಿಮಾ ಮಂದಿರ, ಮುದ್ರಣ ಕಾರ್ಯಾಲಯ, ಉಪಹಾರ ಗೃಹ, ಸಾರಿಗೆ ಸಂಸ್ಥೆ, ಖಾಸಗಿ ಆಸ್ಪತ್ರೆಯೂ ಸೇರಿದಂತೆ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಸಿಕ ರೂಪಾಯಿ 21000=00 ರೂಪಾಯಿ. ವೇತನ ಪಡೆಯುತ್ತಿರುವ ಸಿಬ್ಬಂದಿ ಹಾಗೂ ನೌಕರರು ಇ.ಎಸ್.ಐ ವ್ಯಾಪ್ತಿಗೆ ಒಳಪಡುತ್ತಾರೆ. ಅಂತಹ ಘಟಕಗಳನ್ನು ಅಧಿನಿಯಮದಡಿಯಲ್ಲಿ ನೋಂದಾಯಿಸುವುದು

ಕಡ್ಡಾಯವಾಗಿದೆ. ಮಾಲೀಕರು ಹಾಗೂ ನೌಕರರು ಪ್ರತಿ ತಿಂಗಳು ಇ.ಎಸ್.ಐ ಇಲಾಖೆಗೆ ನಿಗದಿತ ವಂತಿಗೆಯನ್ನು ಸಲ್ಲಿಸಬೇಕು. ಇದೊಂದು ಸಂವೈಧಾನಿಕ ಕರ್ತವ್ಯವಾದುದರಿಂದ ಆಡಳಿತ ಮಂಡಳಿ ಹಾಗೂ ನೌಕರ ಇಬ್ಬರೂ ಕಾನೂನಿನ್ವಯ ವಂತಿಗೆಯನ್ನು ಸಲ್ಲಿಸಬೇಕು. ಈ ವಂತಿಗೆ ಸಲ್ಲಿಸಿದುದಕ್ಕೆ ಪ್ರತಿಫಲವಾಗಿ ಆಡಳಿತ ಮಂಡಳಿ ಅಥವಾ ಮಾಲೀಕರು ನೌಕರರು ಹಾಗೂ ವಿಮಾದಾರರು ಹತ್ತು ಹಲವು ಫಲಾನುಭವ ಹಾಗೂ ಹಿತಲಾಭಗಳಿಗೆ ಅರ್ಹರಾಗುತ್ತಾರೆ. ಆದರೆ, ಹಿತಲಾಭ ಹಾಗೂ ಫಲಾನುಭವಗಳ ತಿರುಳು ಬಹುಪಾಲು ಜನರಿಗೆ ತಿಳಿದೇ ಇಲ್ಲ ! ಹೌದು, ಬಹುಪಾಲು ಮಾಲೀಕರು ಹಾಗೂ ನೌಕರರಿಗೆ ಈ ಕುರಿತಾಗಿ ಅರಿವೇ ಇಲ್ಲ. ಅರಿವೇ ಗುರುವಾದುದರಿಂದ ಮಾರ್ಗದರ್ಶನದ ಕೊರತೆಯಿಂದಾಗಿ ಫಲಾನುಭವದಿಂದ ವಂಚಿತರಾಗುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಇಲಾಖೆಯು ವಿತರಿಸುವ ಸಹಾಯಕ ಸಾಹಿತ್ಯ ಇಂಗ್ಲೀಷ ಹಾಗೂ ಅಲ್ಪ ಸ್ವಲ್ಪ ರಾಜ ಭಾಷೆ ಹಿಂದಿಯಲ್ಲಿ ಇರುವುದೇ ಆಗಿದೆ. ಕನ್ನಡ ನಾಡಿನ ಫಲಾನುಭವಿಗಳಿಗೆ ಅವರ ನೆಲದ ಭಾಷೆಯಲ್ಲಿ ಸಹಾಯಕ ಸಾಹಿತ್ಯದ ತಿರುಳನ್ನು ಉಣಬಡಿಸಬೇಕಲ್ಲವೆ? ಇದು ಅನಿವಾರ್ಯ ಮತ್ತು ಅವಶ್ಯಕ ಕೂಡ. ಯಾವುದೊಂದು ವಿಷಯ ಮನುಷ್ಯನಿಗೆ ಮನದಟ್ಟಾಗಬೇಕೆಂದರೆ, ಅವನ ಮಾತೃಭಾಷೆಯಲ್ಲಿಯೇ ತಿಳಿಸಬೇಕು ಇದು ಮನೋ ವಿಜ್ಞಾನಿಗಳು ಹಾಗೂ ಶಿಕ್ಷಣ ತಜ್ಞರ ಒಟ್ಟಾಭಿಪ್ರಾಯ. ಇಲ್ಲದಿದ್ದರೆ ವಿಷಯ ಅವರಿಗೆ ಮನದಟ್ಟಾಗದು. ಭಾಷೆ ಕೇವಲ ಸಂವಹನದ ಮಾಧ್ಯಮವಲ್ಲ. ಭಾಷೆಗೆ ತನ್ನದೇ ಆದ ಆತ್ಮವಿದೆ. ಆ ಪರಮಾತ್ಮ ಪ್ರಪಂಚದಲ್ಲಿ ಪ್ರತಿಯೊಬ್ಬರಿಗೂ ಮಾತೃ ಭಾಷೆಯಲ್ಲಿಯೇ ಸಿಕ್ಕುತ್ತದೆ. ಹೀಗಾಗಿ ಅವನಿಗೆ ಅವನದೇ ಆದ ತಾಯಿ ಭಾಷೆಯುಲ್ಲಿ ಭಾವನಾತ್ಮಕವಾಗಿ ಅದನ್ನು ಅವನಿಗೆ ತಿಳಿಸಿಕೊಡಬೇಕು. ಈ ಕಿರು ಹೊತ್ತಿಗೆಯ ರಚನೆಯ ಮುಖ್ಯ ಉದ್ದೇಶವೂ ಇದುವೇ ಆಗಿದೆ. ಇನ್ನೊಂದು ಪ್ರಮುಖ ಅಂಶವೆಂದರೆ ಫಲಾನುಭವಗಳ ಪಟ್ಟಿಯನ್ನು ಸಿದ್ಧಪಡಿಸಿ ಫಲಾನುಭವಿಗಳಿಗೆ ನೀಡಿದರೆ ಸಾಲದು. ಓದುಗರಿಗೆ ಕೇವಲ ಸಾರವನ್ನು ನೀಡದೇ ಸಾಹಿತ್ಯಿಕ ಭಾಷೆಯ ಸ್ಪರ್ಶದಿಂದ ಭಾವನಾತ್ಮಕ

ಶೈಲಿಯೊಂದಿಗೆ ಮಾಲೀಕರು, ನೌಕರರು, ಹಾಗೂ ನೌಕರರ ಕುಟುಂಬದ ಅವಲಂಬಿತ ಸದಸ್ಯರುಗಳಿಗೆ ಫಲಾನುಭವಗಳನ್ನು ಪ್ರಶ್ನೋತ್ತರದ ಮುಖಾಂತರ ನೀಡುವ ಪ್ರಯತ್ನ ಇದಾಗಿದೆ. ಭಾವನಾತ್ಮಕ ಎಂದಾಕ್ಷಣ ಇಲ್ಲಿ ತಥ್ಯ ಹಾಗೂ ಅಂಕಿ ಅಂಶಗಳಿಗೆ ಆದ್ಯತೆಯನ್ನೇ ನೀಡಲಾಗಿಲ್ಲ ಕೇವಲ ಕಲ್ಪನಾ ಪ್ರಪಂಚದಲ್ಲಿ ವಿಹರಿಸಲಾಗಿದೆ ಎಂಬ ಭಾವನೆಯೂ ಬೇಡ. ವಿಷಯವನ್ನು ಆಸಕ್ತಿಯಿಂದ ಓದಿ ಮನನ ಮಾಡಿಕೊಳ್ಳಲಿ ಎಂಬುವುದೇ ನಮ್ಮ ಮನೋಭಿಲಾಷೆ. ಅಂದರೆ, ರಸವತ್ತಾದ ಭಾಷಾ ಶೈಲಿಯೊಂದಿಗೆ ತಥ್ಯವನ್ನು ಪ್ರಸ್ತುತ ಪಡಿಸಲಾಗಿದೆ. ಸಾಮಾನ್ಯತಃ ಇ.ಎಸ್.ಐ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳ ಆಡಳಿತ ಮಂಡಳಿ ಹಾಗೂ ಆಯಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ನೌಕರರ ಮನ-ಮಸ್ತಿಷ್ಕದಲ್ಲಿ ಮೂಡುವ ಪ್ರಶ್ನೆ ಹಾಗೂ ಕೌತುಕಗಳನ್ನು ಗಮನದಲ್ಲಿರಿಸಿಕೊಂಡು ವಿಷಯವನ್ನು ವಿಸ್ತರಿಸಿಕೊಳ್ಳುತ್ತಾ ಸಾಗಲಾಗಿದೆ. ಈ ನಮ್ಮ ಪ್ರಯತ್ನ ಓದುಗರಿಗೆ ಹಿಡಿಸೀತು ಎಂಬುದೇ ನಮ್ಮ ಭಾವನೆ.

ಶ್ರೀ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ಬಾಗಲಕೋಟದಲ್ಲಿ ನಾನು ಸಂಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸಲಾರಂಭಿಸಿದ ಮೇಲೆ ನೌಕರರ ರಾಜ್ಯ ವಿಮಾ ನಿಗಮದ ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಬಂಧುಗಳು ಭಾರತ ಸರ್ಕಾರ ಕಾರ್ಮಿಕ ಹಾಗೂ ಉದ್ಯೋಗ ಇಲಾಖೆಯ ಇ.ಎಸ್.ಐ ಯೋಜನೆ ನೀಡುತ್ತಿರುವ ವೈದ್ಯಕೀಯ ಹಾಗೂ ನಗದು ಫಲಾನುಭವಗಳನ್ನು ಕುರಿತಾಗಿ ನನ್ನನ್ನು ಕೇಳಿದಾಗ ನನಗೆ ತಿಳಿದದ್ದನ್ನು ಹೇಳುತ್ತಾ ಸಾಗುತಲಿದ್ದೆ. ಹಿತಲಾಭಗಳ ತಿಳುವಳಿಕೆ ಇಲ್ಲದ ಹಲವು ವಿಮಾದಾರ ಬಂಧುಗಳು ಸರ್ಕಾರದ ಸೌಲಭ್ಯಗಳ ಬಗ್ಗೆ ತಿಳುವಳಿಕೆ ಇಲ್ಲದುದರಿಂದ ಫಲಾನುಭವಗಳಿಂದ ವಂಚಿತರಾಗುತ್ತಿರುವ ಗಂಭೀರ ವಿಷಯವೂ ನನ್ನ ಗಮನಕ್ಕೆ ಬಂತು. ಪ್ರತಿ ತಿಂಗಳು ತಮ್ಮ ದುಡಿಮೆಯ ಕೆಲವು ಅಂಶವನ್ನು ಇ.ಎಸ್.ಐ ಇಲಾಖೆಗೆ ವಂತಿಗೆಯ ರೂಪದಲ್ಲಿ ಸಲ್ಲಿಸಿ

ಹಿತಲಾಭಗಳಿಂದ ವಂಚಿತರಾಗುತ್ತಿರುವ ವಿಷಯ ಕುರಿತು ಯೋಚಿಸಿ ಹಣ್ಣಾದೆ. ಕೊನೆಗೆ ಇದಕ್ಕೊಂದು ಪರಿಹಾರ ಕಂಡುಕೊಳ್ಳುವ ವಿಷಯದಲ್ಲಿ ದೃಢ ನಿರ್ಧಾರಕ್ಕೆ ಬಂದೆ. ಕನ್ನಡ ನಾಡಿನ ವಿಮಾದಾರ ಬಂಧುಗಳಿಗೆ ಅವರ ನೆಲದ ಭಾಷೆ ಅಂದರೆ, ಕನ್ನಡದಲ್ಲಿ ರಚಿಸಿ ಅವರಿಗೆ ಸಮರ್ಪಿಸಬೇಕು ಎಂಬ ವಿಚಾರವನ್ನು ಆಡಳಿತಾಧಿಕಾರಿಯಾಗಿದ್ದ ಶ್ರೀಮಾನ ಎಂ.ಎಂ.ಜಿಗಜಿನ್ನಿ ಸಾಹೇಬರಲ್ಲಿ ನನ್ನ ಅಭಿಲಾಷೆಯನ್ನು ವ್ಯಕ್ತಪಡಿಸಿದಾಗ ಹಿರಿಯರಾದ ಅವರು ಸಂತೋಷ ಹಾಗೂ ಅಭಿಮಾನಪೂರ್ವಕವಾಗಿ 'ಇದೊಂದು ತುಂಬ ಒಳ್ಳೆಯ ಕೆಲಸ. ನೀವು ಮೂಲತಃ ಒಬ್ಬ ಲೇಖಕರು ಅಲ್ಲದೆ ಇ.ಎಸ್.ಐ ಇಲಾಖೆಯಲ್ಲಿಯೇ ಹಲವಾರು ವರ್ಷ ಸೇವೆ ಸಲ್ಲಿಸಿದ ಅನುಭವ ನಿಮ್ಮದು. ನೀವು ಚೆನ್ನಾಗಿ ಬರೀತೀರಿ. ಇದರಿಂದ ಸಾವಿರಾರು ಸಿಬ್ಬಂದಿಗೆ ಅನುಕೂಲವಾಗುತ್ತದೆ. ಬರೆಯಿರಿ' ಅಂತ ತಮ್ಮ ಬೆಂಬಲ ವ್ಯಕ್ತ ಪಡಿಸಿದರು. ಸೇವಾ ನಿವೃತ್ತಿಯ ನಂತರ ದಿನ ಪತ್ರಿಕೆ ಓದಿ ಮುಂಜಾನೆ-ಸಾಯಂಕಾಲ ವಾಯು ವಿಹಾರ ಮಾಡುವುದನ್ನೇ ಪ್ರಮುಖ ಉದ್ಯೋಗ ಎಂಬಂತೆ ಕಾಲಹರಣ ಮಾಡುತ್ತಿದ್ದ ನನ್ನನ್ನು ನೇಪಥ್ಯದಿಂದ ಮುಖ್ಯವಾಹಿನಿಗೆ ತಂದು ಸಮಾಜಕ್ಕೆ ಅಳಿಲು ಸೇವೆ ಸಲ್ಲಿಸುವುದಕ್ಕಾಗಿ ಸಂಘ ರೂಪದ ಹೆಮ್ಮರದ ನೆರಳಿಗೆ ಕರೆಸಿಕೊಂಡು ಉಪಕರಿಸಿದ ಕಾರ್ಯಾಧ್ಯಕ್ಷ ಹಾಗೂ ಶಾಸಕರೂ ಆದ ಸನ್ಮಾನ್ಯ ಡಾ. ವೀರಣ್ಣ ಚರಂತಿಮಠ ಸಾಹೇಬರಿಗೆ ನಾನು ಚಿರಋಣಿ. ಎಲ್ಲದಕ್ಕೂ ಎಲ್ಲರಿಗೂ ಮುಂದೆ-ಮುಂದೆ ಸಾಗಲು ಹಸನ್ಮುಖರಾಗಿ ಹರಸಿ ಹಾರೈಸುವ ಹಿರಿಯ ಚೇತನ ಎನ್.ಜಿ. ಕರೂರ ಸಾಹೇಬರ ಪ್ರೋತ್ಸಾಹ ಹಾಗೂ ಪ್ರೇರಣೆಗಳು ಕೂಡಾ ಕೃತಿ ರಚನೆಗೆ ತಾಯಿ ಬೇರು.

ಇ.ಎಸ್.ಐ ಫಲಾನುಭವದ ವಿಷಯವನ್ನು ಕಾರ್ಮಿಕ ಬಂಧುಗಳಿಗೆ ಸರಳ -ಸುಗಮ -ಸುಲಲಿತ ಭಾಷೆಯಲ್ಲಿ ತಿಳಿಸುವದರ ಜೊತೆಗೆ ಸಾಮಾನ್ಯತಃ ವಿಮಾದಾರ ಬಂಧುವಿನ ಮನಸ್ಸಿನಲ್ಲಿ ಏಳುವ ಸಹಜ ಹಾಗೂ ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಿಸುವುದರ ಮುಖಾಂತರ ವಿಷಯ ವಸ್ತುವನ್ನು ವಿಸ್ತರಿಸಲಾಗಿದೆ. ಏನು ? ಹೇಗೆ? ಎಲ್ಲಿ? ಎಂಬ

ಕುತೂಹಲಗಳಿಗೆ ಪರಿಹಾರ ಸೂಚಿಸುವ ಉದ್ದೇಶದಿಂದ ಪ್ರಶ್ನೆ ಹಾಗೂ ಅದಕ್ಕೆ ಉತ್ತರಗಳನ್ನು ಹೆಣೆಯಲಾಗಿದೆ. ಓದುಗರಿಗೆ ಈ ಪ್ರಯತ್ನ ಇಷ್ಟವಾದುದಾರೆ ನನ್ನ ಶ್ರಮ ಸಾರ್ಥಕ ಎಂದುಕೊಳ್ಳುತ್ತೇನೆ. ಪುಸ್ತಕವನ್ನು ಕಾರ್ಮಿಕ ಬಂಧುಗಳ ಕರ ತಾವರೆಗೆ ತಲುಪಿಸಬೇಕೆಂಬ ನನ್ನ ಹುಮ್ಮಸ್ಸಿಗೆ ನೆರವಾದವರು ನಿರುತ ಪಬ್ಲಿಕೇಷನ್ಸ್‌ನ ಮಾಲೀಕರಾದ ಶ್ರೀಯುತ ರಮೇಶ ಎಂ.ಎಚ್. ಅವರು. ಪುಸ್ತಕವನ್ನು ಸಕಾಲದಲ್ಲಿ ಸುಂದರವಾಗಿ ಮುದ್ರಿಸಿ ಸಹಕರಿಸಿದ ಅವರ ಹೃದಯ ವೈಶಾಲ್ಯತೆಗೆ ಚಿರಋಣಿ ನಾನು. ಗುಡಿಗೆ ಕಳಶಪ್ರಾಯದಂತೆ ಪುಸ್ತಕಕ್ಕೆ ಮುನ್ನುಡಿ ವಿಶೇಷ ಕಳೆ ನೀಡುತ್ತದೆ. ಕಳಶಪ್ರಾಯವಾದ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ ಮೈಸೂರು ವಿಶ್ವವಿದ್ಯಾಲಯದ ಸಮಾಜಕಾರ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಆರ್. ಶಿವಪ್ಪನವರಿಗೆ ಹೃದಯಪೂರ್ವಕ ನಮನಗಳು. ಕಿರುಹೊತ್ತಿಗೆಯಲ್ಲಿ ವಿವರಿಸಲಾದ ವಿವರಗಳನ್ನು ಮೀರಿ ಯಾವುದಾದರೂ ಪ್ರಶ್ನೆ, ಶಂಕೆ, ಕುತೂಹಲಗಳೇನಾದರೂ ಓದುಗರಾದ ತಮ್ಮ ಮನಃಪಟಲದಲ್ಲಿದ್ದರೆ ದಯವಿಟ್ಟು ನಮ್ಮ ಗಮನಕ್ಕೆ ತರಬೇಕು. ಅದನ್ನೆ ಆಧಾರವಾಗಿಟ್ಟುಕೊಂಡು ಮುನ್ನಡೆಯಲಿಚ್ಛಿಸುವ ನಮ್ಮ ಕಾರ್ಯಕ್ಕೆ ಪ್ರೇರಣೆ ದೊರೆವುದೂ ಅಲ್ಲದೇ ನಮ್ಮ ಮುಂದಿನ ಗ್ರಂಥರಚನೆಗೆ ಚಾಲನೆ ನೀಡಲು ಅನುಕೂಲವಾಗುವುದು ಎಂಬ ಅಭಯದೊಂದಿಗೆ ದೇಶದ ಪ್ರಗತಿಗೆ ಸದಾ ದುಡಿಯುತ್ತಿರುವ ದೇಶದ ಸಮಸ್ತ ಕಾರ್ಮಿಕರ ಬೆವರು ಹನಿಗಳಿಗೆ ಈ ಕಿರು ಹೊತ್ತಿಗೆ ಹೃದಯಪೂರ್ವಕವಾಗಿ ಸಮರ್ಪಣೆ.

ಬಾಗಲಕೋಟೆ–587103
ದಿನಾಂಕ : 19–08–2018

**ಎಚ್.ಎನ್. ಯಾದವಾಡ**
"ರಾಜ ಮಹಲ", ನಂ. 02,
ಸೆಕ್ಟರ್ ನಂ. 03, ನವನಗರ,
ಬಾಗಲಕೋಟ–587103

# ಪ್ರಸ್ತಾವನೆ

ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದಾಗಿ ಜಗತ್ತಿನಾದ್ಯಂತ ಬೃಹತ್ ಪ್ರಮಾಣದಲ್ಲಿ ಕಾರ್ಖಾನೆಗಳು ಸ್ಥಾಪನೆಗೊಂಡವು. ಕೇವಲ ಬೆರಳೆಣಿಕೆಯಷ್ಟು ಜನ ಕೆಲಸ ಮಾಡುವ ಗುಡಿ ಕೈಗಾರಿಕೆಗಳಿಗೆ ಸೀಮಿತವಾಗಿದ್ದ ಉದ್ದಿಮೆಗಳು ಸಾವಿರಾರು ಕಾರ್ಮಿಕರು ಕಾರ್ಯನಿರ್ವಹಿಸುವ ಕಾರ್ಖಾನೆಗಳಾಗಿ ಪರಿವರ್ತನೆಗೊಂಡವು. ಯಂತ್ರಗಳ ಜೊತೆಗೆ ಹಗಲಿರುಳು ದುಡಿಯುವ ಲಕ್ಷ-ಲಕ್ಷ ಜನರು ತಮ್ಮ ಜೀವನವನ್ನು ತಾವು ದುಡಿಯುತ್ತಿರುವ ಉದ್ದಿಮೆಗಳ ಮಾಲೀಕರಿಗಾಗಿ ಮೀಸಲಿಟ್ಟರು. ಜಗತ್ತಿನಾದ್ಯಂತ ನಡೆದ ಈ ವಿದ್ಯಮಾನ ಭಾರತಕ್ಕೂ ಹೊರತಾಗಿರಲಿಲ್ಲ. ಅನಾಯಾಸವಾಗಿ ಕಾರ್ಮಿಕರ ಕುಟುಂಬದ ಸಂಪೂರ್ಣ ಜವಾಬ್ದಾರಿ ಆಯಾ ಉದ್ದಿಮೆಗಳ ಆಡಳಿತ ಮಂಡಳಿಗೆ ಸೇರಿತು. ಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಗಾಯಗೊಂಡರೆ ಅಥವಾ ದುರ್ದೈವದಿಂದ ಮರಣವನ್ನಪ್ಪಿದರೆ ಆಡಳಿತ ಮಂಡಳಿ ಸ್ವಲ್ಪ ಹಣಕಾಸು ನೆರವು ನೀಡಿ ತಮ್ಮ ಜವಾಬ್ದಾರಿಯಿಂದ ಮುಕ್ತವಾಗುತ್ತಿದ್ದುದು ಸಾಮಾನ್ಯವಾಗಿತ್ತು. ಇಂತಹ ಹೃದಯ ವಿದ್ರಾವಕ ಸಾವಿರಾರು ಘಟನೆಗಳು ಸರ್ಕಾರದ ಗಮನಕ್ಕೆ ಬಂದವು. ಆಯಾ ಕುಟುಂಬದ ಸ್ಥಿತಿ ಚಿಂತಾಜನಕವಾಗುತ್ತಿರುವ ಸೂಕ್ಷ್ಮ ವಿಷಯವನ್ನು ಕೇಂದ್ರ ಬಿಂದುವಾಗಿ ಯೋಚಿಸಿದ ಸರ್ಕಾರ ಸಾವಿರಾರು ಕಾರ್ಮಿಕರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರುಗಳ ಹಿತರಕ್ಷಣೆಗಾಗಿ ನೌಕರರ ರಾಜ್ಯ ವಿಮಾ ನಿಗಮ ಎಂಬ ಸಾಮಾಜಿಕ ಸುರಕ್ಷಾ ಯೋಜನೆಯೊಂದನ್ನು ಜಾರಿಗೆ ತರಲಾಯಿತು. ಸ್ವತಂತ್ರ ಭಾರತದ ಮೊಟ್ಟ ಮೊದಲ ಅಧಿನಿಯಮ 1948 ಲೋಕಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ಪಡೆದು ಜಾರಿಯಾಗಿದುದಕ್ಕೆ ಇತಿಹಾಸ ಸಾಕ್ಷಿಯಾಯಿತು.

ಸ್ವತಂತ್ರ ಭಾರತದ ಪ್ರಥಮ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರುರವರು 1952 ಫೆಬ್ರವರಿ 24 ರಂದು ಉತ್ತರ ಪ್ರದೇಶದ ಕಾನಪೂರದಲ್ಲಿ ಕಾರ್ಮಿಕರ ಜೀವನದಲ್ಲಿ ಬೆಳಕು ಚೆಲ್ಲುವ ಹಾಗೂ ಅವರ ಜೀವನ ಪಥವನ್ನು ಪ್ರಶಸ್ತಗೊಳಿಸುವ ಘನ ಉದ್ದೇಶಿತ ಇ.ಎಸ್.ಐ ಯೋಜನೆಗೆ 'ಪಂಚ ದೀಪ' ಬೆಳಗಿಸಿ ಚಾಲನೆ ನೀಡಲಾಯಿತು. ದೇಶದ ಆರ್ಥಿಕ ಪ್ರಗತಿಗೆ ಬೆನ್ನೆಲುಬಾಗಿರುವ ಕಾರ್ಮಿಕ ಬಂಧುಗಳಿಗೆ ಗೌರವ ಸಲ್ಲಿಸುವುದಕ್ಕಾಗಿ ಪಂಡಿತ ಜವಹರಲಾಲ ನೆಹರುರವರು ದೇಶದ ಪ್ರಥಮ ಕಾರ್ಮಿಕ ವಿಮಾದಾರರಾಗಿ ತಮ್ಮನ್ನು ತಾವು ನೋಂದಾಯಿಸಿಕೊಂಡರು. ದೇಶದ ಕೋಟಿ-ಕೋಟಿ ಕಾರ್ಮಿಕರಿಗೆ ಗೌರವ ಸಲ್ಲಿಸಿದುದು ಕೈಗಾರಿಕಾ ಇತಿಹಾಸದಲ್ಲಿ ಮೈಲುಗಲ್ಲಾಯಿತು. ಪ್ರಥಮ ಹಂತವಾಗಿ ಉತ್ತರ ಪ್ರದೇಶದ ಕಾನಪೂರ ಹಾಗೂ ದಿಲ್ಲಿಯಲ್ಲಿರುವ ಕಾರ್ಖಾನೆಗಳನ್ನು ಇ.ಎಸ್.ಐ ವ್ಯಾಪ್ತಿಗೆ ಒಳಪಡಿಸಲಾಯಿತು. ಕಾರ್ಮಿಕರಿಗಾಗಿ ಆರಂಭಿಸಲಾದ ಈ ಮಹತ್ವಾಕಾಂಕ್ಷಿ ಯೋಜನೆ ಆರು ದಶಕಗಳನ್ನು ಕಳೆದು ಏಳನೆಯ ದಶಕಕ್ಕೆ ಕಾಲಿರಿಸಿದ ಈ ಸಾಮಾಜಿಕ ಸುರಕ್ಷಾ ಯೋಜನೆಯ ಸಿಂಹಾಲೋಕನ ಮಾಡಿದಾಗ ಯೋಜನೆಯ ರೆಂಬೆ ಕೊಂಬೆಗಳು ಎಷ್ಟೊಂದು ವಿಶಾಲವಾಗಿ ಹರಡಿಕೊಂಡಿವೆ ಎಂದರೆ, ಮೊದಲು ಕೇವಲ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗಾಗಿ ಸೀಮಿತವಾಗಿದ್ದ ಈ ಯೋಜನೆಯು ಇಂದು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಭೌಗೋಳಿಕವಾಗಿ ಬಹುಪಾಲು ಇಡೀ ದೇಶದಲ್ಲಿ ವಿಸ್ತಾಪಿಸಲ್ಪಟ್ಟ ಕಾರ್ಖಾನೆ, ಮಾರಾಟ ಮಳಿಗೆ, ಸಿನಿಮಾ ಮಂದಿರ, ವಸತಿ ಗೃಹ, ಮುದ್ರಣಾಲಯ, ಕಟ್ಟಡ ನಿರ್ಮಾಣ, ಸಾರಿಗೆ ಸಂಸ್ಥೆಗಳೂ ಸೇರಿದಂತೆ ಖಾಸಗಿ ವೈದ್ಯಕೀಯ ಸಂಸ್ಥೆ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಟಿತ ವಲಯದ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳಿಗೂ ಈ ಯೋಜನೆಯನ್ನು ವಿಸ್ತರಿಸಲಾಗಿದೆ. ದಿನಾಂಕ: 01-05-2016 ರಿಂದ ಅನ್ವಯವಾಗುವಂತೆ ಭೌಗೋಳಿಕವಾಗಿ ಸಂಪೂರ್ಣ ಕರ್ನಾಟಕ ರಾಜ್ಯವನ್ನು ಇ.ಎಸ್.ಐ.

ವ್ಯಾಪ್ತಿಗೆ ತರಲಾಗಿದೆ. ಅಂದರೆ, ಕಾರ್ಮಿಕ ದಿನಾಚರಣೆಯ ಪುನೀತ ದಿನದಂದು ಇ.ಎಸ್.ಐ ಯೋಜನೆಯುನ್ನು ಇಡೀ ರಾಜ್ಯಕ್ಕೆ ಜಾರಿಗೊಳಿಸಲಾಗಿದೆ. ಹಾಗೆಯೇ ದಿನಾಂಕ:– 01–01–2017 ರಿಂದ ಅನ್ವಯವಾಗುವಂತೆ ಆಯಾ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಸಿಕ 21000=00 ರೂಪಾಯಿ ಸಂಬಳ ಪಡೆಯುತ್ತಿರುವ ನೌಕರರು ವಿಮಾದಾರರಾಗಿ. ಇ.ಎಸ್.ಐ ಇಲಾಖೆಯು ಫಲಾನುಭವಕ್ಕೆ ಅರ್ಹರಾಗಿದ್ದಾರೆ. ಆಡಳಿತ ಮಂಡಳಿ ನೌಕರರ ಸಂಬಳದ ಶೇಕಡ 4.75% ಹಾಗೂ ನೌಕರರ ವಂತಿಗೆ ಶೇಕಡ 1.75% ಒಟ್ಟು 6.5% ವಂತಿಗೆಯನ್ನು ಪ್ರತಿ ತಿಂಗಳು ದಿನಾಂಕ 15ರ ಒಳಗಾಗಿ ಆನ್‌ಲೈನ್ ಮುಖಾಂತರ ಇ.ಎಸ್.ಐ. ಇಲಾಖೆಗೆ ಸಂದಾಯ ಮಾಡಬೇಕು. ವಂತಿಗೆಯನ್ನು ಸಂದಾಯ ಮಾಡುವ ಸಂಪೂರ್ಣ ಜವಾಬ್ದಾರಿ ಕಾರ್ಖಾನೆ ಮುಂತಾದ ಘಟಕ–ಸಂಸ್ಥೆಯ ಆಡಳಿತ ಮಂಡಳಿಗೆ ಸೇರಿದುದು. ಇ.ಎಸ್.ಐ ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಸಿಬ್ಬಂದಿಯಿಂದ ಘೋಷಣಾ ಪತ್ರ ಭರ್ತಿ ಮಾಡಿಕೊಟ್ಟ ತಕ್ಷಣದಿಂದಲೇ ಆಡಳಿತ ಮಂಡಳಿ ಹಾಗೂ ಫಲಾನುಭವಿಗಳಾದ ವಿಮಾದಾರರು ಹಲವು ಜವಾಬ್ದಾರಿಗಳಿಂದ ಮುಕ್ತರಾಗಿ ನಿರಾಳ ಜೀವನ ನಡೆಸಲು ಅನುಕೂಲವಾಗುತ್ತದೆ. ಕಾರಣ, ಈರ್ವರ ಹಿತರಕ್ಷಣೆಯ ಜವಾಬ್ದಾರಿ ಇ.ಎಸ್.ಐ ಇಲಾಖೆಗೆ ವರ್ಗಾವಣೆಯಾಗುತ್ತದೆ. ಹೀಗಾಗಿ ಮುಷ್ಠಿಯಷ್ಟು ಬೀಜ ಚೆಲ್ಲಿ ರಾಶಿ–ರಾಶಿ ಬೆಳೆಯನ್ನು ಬೆಳೆದು ಕೊಡುವ ಅಭಯವನ್ನು ಇ.ಎಸ್.ಐ ಇಲಾಖೆ ನೀಡುತ್ತದೆ.

ಭಾರತ ಸರ್ಕಾರದ ಬಹು ಆಯಾಮಿ ಮಹತ್ವಾಕಾಂಕ್ಷಿಯ ಈ ಯೋಜನೆಯ ಪ್ರಮುಖ ಕೇಂದ್ರ ಬಿಂದು ವಿಮಾದಾರ. ಆದುದರಿಂದಲೇ ಇ.ಎಸ್.ಐ ಇಲಾಖೆ ಅವರನ್ನು ಗೌರವಾನ್ವಿತರು ಎಂದು ಬಣ್ಣಿಸಿದೆ. ನಗದು ಹಾಗೂ ವೈದ್ಯಕೀಯ ಹಿತಲಾಭ ನೀಡುವ ಇ.ಎಸ್.ಐ

ಫಲಾನುಭವಿಗಳಾದ ನೌಕರರನ್ನು ಸುಖಕರ ಜೀವನ ಯಾಪನ ಮಾಡಲು ದೇಶದ ತುಂಬೆಲ್ಲಾ ಹರಡಿರುವ 150 ಆಸ್ಪತ್ರೆ 1403 ಚಿಕಿತ್ಸಾಲಯಗಳೂ ಸೇರಿದಂತೆ ಸಾವಿರಾರು ಖಾಸಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ನಗದು ರಹಿತ ಶುಶ್ರೂಷೆ ವ್ಯವಸ್ಥೆಯೊಂದಿಗೆ ವಿಮಾದಾರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ವೈದ್ಯಕೀಯ ಸೇವೆಯನ್ನು ನೀಡಲಾಗುತ್ತಿದೆ. ನಗದು ಫಲಾನುಭವ ನೀಡಲು ದೇಶದ ಉದ್ದಗಲಕ್ಕೆ 627 ಶಾಖಾ ಕಛೇರಿ ಹಾಗೂ 177 ಬಟವಾಡೆ ಕೇಂದ್ರಗಳ ಮುಖಾಂತರ ಕಾರ್ಯಾನಿರ್ವಹಿಸಲಾಗುತ್ತಿದೆ. ನೆನಪಿರಲಿ, ದಿನವೊಂದಕ್ಕೆ ರೂಪಾಯಿ–137=00 ಸಂಬಳ ಪಡೆಯುತ್ತಿರುವ ನೌಕರರಿಂದ ಯಾವುದೇ ವಂತಿಗೆಯನ್ನು ಪಡೆದುಕೊಳ್ಳದೇ ಅಂತಹ ವಿಮಾದಾರ ಹಾಗೂ ಅವನ ಅವಲಂಬಿತ ಕುಟುಂಬದ ಸದಸ್ಯರುಗಳಿಗೆ ಯಾವುದೇ ತಾರತ್ಯಮ್ಯವಿಲ್ಲದೇ ಸಂಪೂರ್ಣ ವೈದ್ಯಕೀಯ ಹಾಗೂ ನಗದು ಫಲಾನುಭವ ನೀಡುತ್ತಿರುವ ಹಾಗೂ ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಸಾಮಾಜಿಕ ಸುರಕ್ಷಾ ಸಂಸ್ಥೆ ಎಂಬ ಹೆಗ್ಗಳಿಕೆ ಭಾರತ ಸರಕಾರ ಕಾರ್ಮಿಕ ಹಾಗೂ ಉದ್ಯೋಗ ಮಂತ್ರಾಲಯದ ಇ.ಎಸ್.ಐ ಇಲಾಖೆಗೆ ಸಲ್ಲುತ್ತದೆ. ನೌಕರರ ಹಿತ ರಕ್ಷಣೆಯ ಹೊಣೆ ಹೊತ್ತ ಈ ನಿಗಮ ಅವರನ್ನು ಚಿಂತೆಯಿಂದ ಮುಕ್ತಗೊಳಿಸುವ ಅಭಯದೊಂದಿಗೆ ಅವರ ಕಷ್ಟ–ಕಾರ್ಪಣ್ಯದಲ್ಲಿ ನೆರವಾಗುವ ಹಲವು ಹನ್ನೊಂದು ಫಲಾನುಭವ ನೀಡುವ ಕಾರ್ಯಯೋಜನೆಯ ಮುಖಾಂತರ ಅವರ ಬಾಳಿಗೆ ಬೆಳಕು ನೀಡುತ್ತಿದೆ.

## ಇ.ಎಸ್.ಐ. ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಘಟಕಗಳ ಆಡಳಿತ ಮಂಡಳಿಯು ಪ್ರಮುಖವಾಗಿ ಗಮನಿಸಬೇಕಾದ ಮುಖ್ಯಾಂಶಗಳು.

* ಇ.ಎಸ್.ಐ. ಅಧಿನಿಯಮ ಅನ್ವಯವಾದ 15 ದಿನದ ಒಳಗಾಗಿ ಸಂಬಂಧಪಟ್ಟ ಸಂಸ್ಥೆಯನ್ನು ಆನ್‌ಲೈನ್ ಮುಖಾಂತರ ನೋಂದಾಯಿಸಿಕೊಳ್ಳಬೇಕು.
* ಮಾಸಿಕ 21,000=00 ರೂಪಾಯಿಯವರೆಗೆ ಸಂಬಳ ಪಡೆಯುತ್ತಿರುವ ಸಿಬ್ಬಂದಿಯನ್ನು ಅವರು ಕೆಲಸಕ್ಕೆ ಸೇರಿದ 10 ದಿನಗಳ ಒಳಗಾಗಿ ಘೋಷಣಾ ಪತ್ರ ಭರ್ತಿ ಮಾಡಿ ಆನ್‌ಲೈನ್ ಮುಖಾಂತರ ದ್ವಿ ಪ್ರತಿಯಲ್ಲಿ ಇ-ಪೆಹಚಾನ ಕಾರ್ಡ್ ಜಾರಿಗೊಳಿಸಬೇಕು. ಕಚೇರಿಯ ದಾಖಲೆಯಾಗಿ ಸುಲಭ ಸಂದರ್ಭಕ್ಕಾಗಿ ಒಂದು ಪ್ರತಿಯನ್ನು ಕಚೇರಿಯಲ್ಲಿ ಇರಿಸಿಕೊಂಡಿರಬೇಕು.
* ಆಡಳಿತ ಮಂಡಳಿಯು ನೌಕರರ ಸಂಬಳದ 4.75% ನ್ನು ತನ್ನ ಪಾಲಿನ ಹಾಗೂ ನೌಕರರ 1.75% ನ್ನು ಎರಡೂ ಸೇರಿ ಒಟ್ಟು 6.5% ವಂತಿಗೆಯನ್ನು ಆನ್‌ಲೈನ್ ಮುಖಾಂತರ ಆಯಾ ತಿಂಗಳ ಮುಂದಿನ ತಿಂಗಳು 15 ನೆಯ ತಾರೀಖಿನ ಒಳಗಾಗಿ ಸಂದಾಯ ಮಾಡಬೇಕು ವಿಳಂಬವಾದರೆ, ಮುಂದೊಮ್ಮೆ ಬಡ್ಡಿ ಸಮೇತ ದಂಡವನ್ನು ಸಂದಾಯ ಮಾಡಬೇಕಾಗುತ್ತದೆ.
* ಆಡಳಿತ ಮಂಡಳಿಯು ತನ್ನ ಕಚೇರಿಯಲ್ಲಿ ಒಂದು ದುರ್ಘಟನಾ ರಿಜಿಸ್ಟರನ್ನು ಅನುರಕ್ಷಿಸಬೇಕು. ಕಾರ್ಯ ಕ್ಷೇತ್ರವೂ ಸೇರಿದಂತೆ

ಮನೆಯಿಂದ ಬರುವಾಗ ಹಾಗೂ ಕೆಲಸದಿಂದ ಮನೆಗೆ ಮರಳುವಾಗ ದುರ್ದೈವದಿಂದ ದುರ್ಘಟನೆ ನಡೆದರೆ, ಅದರ ವಿವರಗಳನ್ನು ಅನುರಕ್ಷಿತ ರಿಜಿಸ್ಟರ್‌ನಲ್ಲಿ ನಮೂದಿಸಿ ದುರ್ಘಟನೆಯ ವಿವರವನ್ನು ಸಂಬಂಧಪಟ್ಟ ಇಎಸ್ಐ ಶಾಖಾ ಕಚೇರಿ ಹಾಗೂ ಅದರ ಒಂದು ಪ್ರತಿಯನ್ನು ಮಾಹಿತಿಗಾಗಿ ಸಂಬಂಧಪಟ್ಟ ಇ.ಎಸ್.ಐ. ಚಿಕಿತ್ಸಾಲಯಕ್ಕೆ ಕಳುಹಿಸಿ ಕೊಡಬೇಕು.

* ಆಡಳಿತ ಮಂಡಳಿಯು ತನ್ನ ಸಿಬ್ಬಂದಿಯ ಹಾಜರಿ ಪುಸ್ತಕ, ಸಂಬಳ ಬಟವಾಡೆಯ ವಿವರಗಳೂ ಸೇರಿದಂತೆ ತನ್ನೆಲ್ಲ ಹಣಕಾಸಿನ ವಿವರಗಳ ದಾಖಲೆಗಳನ್ನು ಇ.ಎಸ್.ಐ. ಇಲಾಖೆಯ ಅಧಿಕಾರಿಗಳು ಪರಿವೀಕ್ಷಣೆಗೆ ಬಂದಾಗ ಪ್ರಸ್ತುತಪಡಿಸಿ ಸಹಕರಿಸಬೇಕು.
* ಆಡಳಿತ ಮಂಡಳಿಯು ತನಗಾಗಿ ನೀಡಿದ ಕೋಡ್ ನಂಬರನ್ನು ನಮೂದಿಸಿಯೇ ಇ.ಎಸ್.ಐ. ಕಚೇರಿಗಳೊಂದಿಗೆ ಪತ್ರ ವ್ಯವಹಾರ ಮಾಡಬೇಕು.
* ಇ.ಎಸ್.ಐ. ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆಯು ಅಕಸ್ಮಾತ ನಿಂತು ಹೋದರೆ, ದಾಖಲೆಗಳೊಂದಿಗೆ 7 ದಿನಗಳ ಒಳಗಾಗಿ ಸಂಬಂಧಪಟ್ಟ ಶಾಖಾ ಕಚೇರಿ ಹಾಗೂ ಪ್ರಾದೇಶಿಕ ಕಚೇರಿಗೆ ಅದರ ಸೂಚನೆ ನೀಡಬೇಕು. ಇಲ್ಲದೇ ಹೋದರೆ ಮುಂದೊಮ್ಮೆ ಹಿಂದಿನ ಬಾಕಿ ವಸೂಲಿಗಾಗಿ ಸೋಕಾಸ್ ನೋಟೀಸ್ ಜಾರಿಯಾಗುವ ಸಂಭವವಿದೆ.
* ಇ.ಎಸ್.ಐ. ಅಧಿನಿಯಮದಡಿ ನೋಂದಾಯಿಸಲ್ಪಟ್ಟ ಸಂಸ್ಥೆಯ ಆಡಳಿತ ಮಂಡಳಿಯು ಕಾರ್ಯಕಾರಿ ಮಂಡಳಿ ಬದಲಾವಣೆಯಾದರೆ, ಸಂಸ್ಥೆಯ ಕಚೇರಿ ಸ್ಥಳಾಂತರಗೊಂಡರೆ, ಉತ್ಪಾದನೆಯ ಪ್ರಕೃತಿ ಹಾಗೂ ಕಾರ್ಯಚಟುವಟಿಕೆಯಲ್ಲಿ ಪರಿವರ್ತನೆಯಾದರೆ ತಕ್ಷಣವೇ ಅದರ ಸೂಚನೆಯನ್ನು ಸಂಬಂಧಪಟ್ಟ ಇ.ಎಸ್.ಐ. ಕಚೇರಿಗೆ ಸೂಚಿಸಬೇಕು.

* ಇ.ಎಸ್.ಐ. ಅಧಿನಿಯಮದಡಿ ನೋಂದಾಯಿಸಲ್ಪಟ್ಟ ಸಂಸ್ಥೆಯು ಬೇರೆಯವರಿಗೆ ಮಾರಾಟವಾದರೆ, ದೇಣಿಗೆಯ ರೂಪದಲ್ಲಿ ಅನ್ಯತ್ರ ಹಸ್ತಾಂತರಗೊಂಡರೆ, ಮಾಲೀಕತ್ವದಲ್ಲಿ ಬದಲಾವಣೆಯಾದರೆ ಅದರ ವಿವರವನ್ನು ಇ.ಎಸ್.ಐ ಕಚೇರಿಗೆ ಸೂಚಿಸಬೇಕು. ಕಾರಣ, ಮುಂದಿನ ಎಲ್ಲ ಆಗು-ಹೋಗುಗಳಿಗೆ ಮುಂದಿನ ಮಾಲೀಕರೆ ಜವಾಬ್ದಾರರಾಗಿರುತ್ತಾರೆ. ಹಿಂದಿನ ಮಾಲೀಕರ ಹೆಸರನ್ನು ಹೇಳಿ ಜವಾಬ್ದಾರಿಯಿಂದ ನುಣುಚಿಕೊಳ್ಳಲಾಗದು.
* ಇ.ಎಸ್.ಐ. ವೈದ್ಯಾಧಿಕಾರಿಗಳ ಶಿಫಾರಸಿನ ಅವಧಿಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹಾಗೂ ಹೆರಿಗೆಯ ರಜೆಯ ಮೇಲಿರುವ ಮಹಿಳಾ ವಿಮಾದಾರರನ್ನು ಕೆಲಸದಿಂದ ತೆಗೆದು ಹಾಕುವ ಅಥವಾ ಅವರ ಸಂಬಳವನ್ನು ಕಡಿತಗೊಳಿಸುವ ಕಾರ್ಯವನ್ನು ಮಾಡಲಾಗದು. ಇದು ಕಾನೂನಿಗೆ ವಿರೋಧವಾದ ಅಂಶವೆಂದು ಪರಿಗಣಿಸಲಾಗುವುದು.
* ಇ.ಎಸ್.ಐ. ವ್ಯಾಪ್ತಿಗೆ ಒಳಪಟ್ಟ ವಿಮಾದಾರರ ವಂತಿಗೆಯ ಭಾಗವನ್ನು ಮಾತ್ರ ಅವರ ಸಂಬಳದಿಂದ ಕಡಿತಗೊಳಿಸಬೇಕೇ ವಿನಃ ಆಡಳಿತ ಮಂಡಳಿಯು ತನ್ನ ಪಾಲಿನ ವಂತಿಗೆಯ ಭಾಗವನ್ನು ನೌಕರರ ಸಂಬಳದಿಂದ ಪ್ರತ್ಯಕ್ಷ ಅಥವಾ ಪರೋಕ್ಷ ರೂಪದಲ್ಲಿ ಕಡಿತಗೊಳಿಸಲಾಗದು.
* ವಿಮಾದಾರರು ಹಾಗೂ ಆಡಳಿತ ಮಂಡಳಿಯವರ ಅನುಕೂಲಕ್ಕಾಗಿ ಇ.ಎಸ್.ಐ. ಟೋಲ್ ಫ್ರೀ ಸಂಖ್ಯೆ : 1800 11 2526 ದೂರವಾಣಿ ಸಂಖ್ಯೆ : 011-23234092/93/98, ಇ.ಮೇಲ್ : jd-pgoesic.nic.in/esic-hqrse esic.in ಹಾಗೂ ವೆಬ್‌ಸೈಟ್ : www.esic.nic.in/www.esic.in ನ್ನು ಬಳಸಬಹುದು.

# ಇ.ಎಸ್.ಐ ಫಲಾನುಭವಗಳ ಪಕ್ಷಿನೋಟ

ಭಾರತ ಸರ್ಕಾರ ಕಾರ್ಮಿಕ ಹಾಗೂ ಉದ್ಯೋಗ ಇಲಾಖೆಯ ನೌಕರರ ರಾಜ್ಯ ವಿಮಾ ನಿಗಮದ ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಘಟಕಗಳ ಆಡಳಿತ ಮಂಡಳಿ ಹಾಗೂ ಕಾರ್ಮಿಕರ ಹಿತಾಸಕ್ತಿಯನ್ನೊಳಗೊಂಡ, ಪ್ರಪಂಚದಲ್ಲಿಯೇ ಅತಿದೊಡ್ಡ ಸಾಮಾಜಿಕ ಸುರಕ್ಷಾ ಯೋಜನೆಯು ವೈದ್ಯಕೀಯ ಹಾಗೂ ನಗದು ಹಿತಲಾಭಗಳನ್ನು ಫಲಾನುಭವದ ರೂಪದಲ್ಲಿ ಕಾರ್ಮಿಕರಿಗಾಗಿ ನೀಡಲಾಗುತ್ತದೆ. ಅಧಿನಿಯಮದಡಿ ನೋಂದಾಯಿಸಿದ ತಕ್ಷಣದಿಂದಲೇ ನೌಕರರ ಸಂಬಳದ ಶೇಕಡ 4.75% ಆಡಳಿತ ಮಂಡಳಿಯಿಂದ ಹಾಗೂ 1.75% ನೌಕರರಿಂದ ಇ.ಎಸ್.ಐ. ಇಲಾಖೆಗೆ ಹಣ ಸಂದಾಯ ಮಾಡಲಾಗುತ್ತದೆ ಇದಕ್ಕೆ ಪ್ರತಿಫಲವಾಗಿ ಇ.ಎಸ್.ಐ. ನಿಂದ ನಮಗೇನು ಲಾಭ? ಎನ್ನುವ ಸಾಮಾನ್ಯ ಪ್ರಶ್ನೆಯನ್ನೇ ಕೇಂದ್ರಬಿಂದುವಾಗಿಟ್ಟುಕೊಂಡು ಪ್ರಶ್ನೋತ್ತರದ ಮುಖಾಂತರ ಹಲವು ಹನ್ನೊಂದು ಕುತೂಹಲ, ಕೌತುಕ, ಶಂಕೆ, ಪ್ರಶ್ನೆ ಹಾಗೂ ಸಂಶಯಗಳಿಗೆ ಉತ್ತರಗಳನ್ನು ವಿವರಿಸುತ್ತಾ ಸಾಗುವ ಪ್ರಯತ್ನ ನಮ್ಮದಾಗಿದೆ. ಅಮಾಯಕ ವಿಮಾದಾರನೊಬ್ಬನನ್ನು ಸೃಷ್ಟಿಸಿಕೊಂಡು ಅವನಿಗೆ ವಿವರಿಸುತ್ತಾ ಸಾಗುವ ಈ ಪ್ರಶ್ನೋತ್ತರ ಮಾಲಿಕೆಯ ಫಲಾನುಭವಗಳ ಸಂಕ್ಷಿಪ್ತ ವಿವರ.

**ಪ್ರಶ್ನೆ: ಇ.ಎಸ್.ಐ ಅಧಿನಿಯಮ 1948 ರ ಅಡಿಯಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವೆ ?**

**ಉತ್ತರ:** ಇದಕ್ಕೆ ಸರಳ ಹಾಗೂ ನೇರ ಉತ್ತರ ಹೌದು. ದಿನಾಂಕ : 01–05–2016 ರಿಂದ ಭೌಗೋಳಿಕವಾಗಿ ಸಂಪೂರ್ಣ ಕರ್ನಾಟಕ ರಾಜ್ಯದಲ್ಲಿರುವ 10 ಅಥವಾ ಅದಕ್ಕಿಂತ ಅಧಿಕ ಸಂಖ್ಯೆಯ ನೌಕರರು ಕಾರ್ಯನಿರ್ವಹಿಸುತ್ತಿರುವ ಸಂಘಟಿತ ವಲಯದ ಕಾರ್ಖಾನೆ, ಮಾರಾಟ

ಮಳಿಗೆ, ವಸತಿಗೃಹ, ಉಪಹಾರ ಮಂದಿರ, ಮುದ್ರಣ ಕಾರ್ಯಾಲಯ, ಸಿನಿಮಾ ಮಂದಿರ, ಆಸ್ಪತ್ರೆ, ಸಾರಿಗೆ ಸಂಸ್ಥೆ, ಕಟ್ಟಡ ನಿರ್ಮಾಣ ಹಾಗೂ ಖಾಸಗಿ ವೈದ್ಯಕೀಯ ಸಂಸ್ಥೆ ಮತ್ತು ಶಿಕ್ಷಣ ಸಂಸ್ಥೆಗಳು ನೌಕರರ ರಾಜ್ಯ ವಿಮಾ ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯ. ಇದು ಸಂವೈಧಾನಿಕ ಕಾನೂನು, ಆದುದರಿಂದ ಆಯ್ಕೆಯ ಪ್ರಶ್ನೆಯೇ ಇಲ್ಲಿ  ಬರುವುದಿಲ್ಲ.

**ಪ್ರಶ್ನೆ: ನೋಂದಣಿಗಾಗಿ ಯಾರನ್ನು ಸಂಪರ್ಕಿಸಬೇಕು? ನೋಂದಣಿಗಾಗಿ ನಿಗದಿತ ಶುಲ್ಕವೆಷ್ಟು?**

**ಉತ್ತರ:** ಸಂಘಟಿತ ವಲಯದ ಘಟಕದ ಮುಖ್ಯಸ್ಥರು, ಮಾಲೀಕರು ಹಾಗೂ ಆಡಳಿತ ಮಂಡಳಿಯು ಯಾವುದೇ ಕಚೇರಿಗೆ ಅಲೆಯುವ ಅವಶ್ಯಕತೆಯೇ ಇಲ್ಲ. ಆನ್‌ಲೈನ್ ಮುಖಾಂತರ ಪ್ರಾರೂಪ 1 ನ್ನು ಭರ್ತಿ ಮಾಡಿದರೆ, ಕ್ಷಣಾರ್ಧದಲ್ಲಿ ಆಯಾ ಪ್ರದೇಶದ ಇ.ಎಸ್.ಐ ಪ್ರಾದೇಶಿಕ ಅಥವಾ ಉಪಪ್ರಾದೇಶಿಕ ಕಾರ್ಯಾಲಯದಿಂದ 17 ಅಂಕಿಗಳ ಕೋಡ್ ನಂಬರ್ ಸಹಿತ ನೋಂದಣಿಯ ಪ್ರಮಾಣ ಪತ್ರ ನಿಮ್ಮ ಕೈಸೇರುವುದು. ಇದು ನಿಃಶುಲ್ಕ.

**ಪ್ರಶ್ನೆ: ನೋಂದಣಿಯ ನಂತರ ಏನು ಮಾಡಬೇಕು ? ಅಂದರೆ, ಮುಂದಿನ ಕಾರ್ಯವೇನು ?**

**ಉತ್ತರ:** ಮುಂದಿನ ಕೆಲಸ ಇನ್ನೂ ಸುಲಭ ! ಸಂಬಂಧಪಟ್ಟ ಸಂಸ್ಥೆ ಅಥವಾ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಾಂಕ – 01/01/ 2017 ರಿಂದ ಅನ್ವಯುವಾಗುವಂತೆ ಮಾಸಿಕ 21000=00 ರೂಪಾಯಿಯವರೆಗೆ ವೇತನ ಪಡೆಯುವ ನೌಕರರನ್ನು ಈ ವ್ಯಾಪ್ತಿಗೆ ತರಬೇಕು. ಅವರ ಕುಟುಂಬದ ಪಿ:2 ಆಕಾರದ ಫೋಟೋ ಪಡೆದು ಅದಕ್ಕೆ ಅಂಟಿಸಿ ಹಾಗೂ ಅವರಿಂದ ಅವರ ಅವಲಂಬಿತ ಕುಟುಂಬದ ಸದಸ್ಯರುಗಳ ವಿವರ ಪಡೆದು ಆನ್‌ಲೈನ್ ಮುಖಾಂತರ ದ್ವಿಪ್ರತಿಯಲ್ಲಿ ಇ: ಪೆಹಚಾನ ಕಾರ್ಡ್ ವಿತರಿಸಬೇಕು.

**ಪ್ರಶ್ನೆ: ಸಂಸ್ಥೆಯ ಖಾಯಂ ನೌಕರರು ಈ ವ್ಯಾಪ್ತಿಗೆ ಬರುತ್ತಾರೆ ಎಂದಾಯಿತು**?

**ಉತ್ತರ:** ಊಂ ಹೂಂ, ಅದು ಹಾಗಲ್ಲ. ಎಲ್ಲ ತೆರನಾದ ಅಂದರೆ, ದಿನಗೂಲಿ, ಮಾಸಿಕ ಆಧಾರಿತ ಗುತ್ತಿಗೆ ನೌಕರರು, ಅರೆಕಾಲಿಕ ಹಾಗೂ ಖಾಯಂ ನೌಕರರೂ ಸೇರಿದಂತೆ ಪ್ರಶಿಕ್ಷಣಾರ್ಥಿಗಳು ಕೂಡ ಈ ವ್ಯಾಪ್ತಿಗೆ ಬರುತ್ತಾರೆ. ಇದರ ವ್ಯಾಪ್ತಿ ಎಷ್ಟೊಂದು ವಿಸ್ತಾರವಾಗಿದೆ ಎಂದರೆ ಗಂಟೆಯ ದುರಸ್ತಿಕಾರ್ಯಕ್ಕೆ ಯಾರನ್ನಾದರೂ ನೇಮಿಸಿ ಸಂಬಳ ನೀಡಿದರೆ, ಅವರಿಗೂ ಇ.ಎಸ್.ಐ ಅನ್ವಯವಾಗುತ್ತದೆ ಎನ್ನುವುದನ್ನು ಮರೆಯಬಾರದು. ಒಟ್ಟಾರೆ ಹೇಳಬೇಕೆಂದರೆ ಸಂಬಳ, ಕೂಲಿ, ಗೌರವಧನ ಏನೇ ಹೆಸರಿನಿಂದ ಬಟವಾಡೆ ಮಾಡಿದ ಹಣಕ್ಕೆ ಇ.ಎಸ್.ಐ. ವಂತಿಗೆಯನ್ನು ಸಲ್ಲಿಸಬೇಕು ಇದು ಕಡ್ಡಾಯ.

**ಪ್ರಶ್ನೆ: ನೌಕರರೂ ವಂತಿಗೆಯನ್ನು ಸಲ್ಲಿಸಬೇಕೆ** ?

**ಉತ್ತರ:** ಹೌದು, ಕೇವಲ ನೌಕರರು ಮಾತ್ರವಲ್ಲ ಆಡಳಿತ ಮಂಡಳಿ ಅಥವಾ ಮಾಲೀಕರು ಕೂಡಾ ಇ.ಎಸ್.ಐ ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಸಿದ ನಂತರ ಪ್ರತಿ ತಿಂಗಳು ಇ.ಎಸ್.ಐ ಇಲಾಖೆಗೆ ವಂತಿಗೆಯನ್ನು ಸಲ್ಲಿಸಬೇಕಾಗುತ್ತದೆ.

**ಪ್ರಶ್ನೆ: ವಂತಿಗೆಯ ಪ್ರಮಾಣವೆಷ್ಟು** ?

**ಉತ್ತರ:** ಇ.ಎಸ್.ಐ ವ್ಯಾಪ್ತಿಗೆ ಒಳಪಟ್ಟ ನೌಕರರ ಸಂಬಳದ ಶೇಕಡಾ 4.75 % ಮಾಲೀಕರು ಹಾಗೂ ನೌಕರರ 1.75% ರೂಪಾಯಿಯನ್ನು ಆನ್‌ಲೈನ್ ಮುಖಾಂತರ ತಿಂಗಳು ಕಳೆದು ಮುಂದಿನ ತಿಂಗಳು 15 ನೆಯ ತಾರೀಖಿನ ಒಳಗಾಗಿ ವಂತಿಗೆಯ ಹಣವನ್ನು ಕಟ್ಟಬೇಕು.

**ಪ್ರಶ್ನೆ: ವಂತಿಗೆ ಹಣವನ್ನು ಮಾಲೀಕರು ಹಾಗೂ ನೌಕರರು ಬೇರೆ ಬೇರೆಯಾಗಿ ಕಟ್ಟಬೇಕೆ** ?

**ಉತ್ತರ:** ವಂತಿಗೆಯ ಹಣವನ್ನು ಸಂಪೂರ್ಣ 6.5% ಹಣವನ್ನು ಆಡಳಿತ ಮಂಡಳಿಯೇ ಕಟ್ಟಬೇಕು. ಇದರ ಸಂಪೂರ್ಣ ಜವಾಬ್ದಾರಿ

ಮಾಲೀಕರದ್ದೇ ಆಗಿರುತ್ತದೆ. ನೆನಪಿರಲಿ, ದಿನವೊಂದಕ್ಕೆ 137=00 ರೂಪಾಯಿ ಸಂಬಳ ಪಡೆಯುತ್ತಿರುವ ನೌಕರರು ತಮ್ಮ ವಂತಿಗೆಯ ಪಾಲನ್ನು ಕಟ್ಟಬೇಕಾದುದಿಲ್ಲ. ಆದರೆ, ಮಾಲೀಕರು ಮಾತ್ರ ತಮ್ಮ ಪಾಲಿನ ಶೇಕಡಾ 4.75 ರೂಪಾಯಿ ವಂತಿಗೆಯನ್ನು ಸಂದಾಯ ಮಾಡಬೇಕು.

**ಪ್ರಶ್ನೆ: ಪ್ರತಿದಿನ ರೂಪಾಯಿ 137=00 ಸಂಬಳ ಪಡೆಯುತ್ತಿರುವ ನೌಕರರಿಗೆ ಫಲಾನುಭವದಲ್ಲಿ ಇತಿ ಮಿತಿಗಳುಂಟೆ? ಯಾಕೆಂದರೆ ಅವರು ತಮ್ಮ ಪಾಲಿನ ವಂತಿಗೆಯನ್ನು ಸಲ್ಲಿಸುವುದಿಲ್ಲವಲ್ಲ ?**

**ಉತ್ತರ:** ಯಾವುದೇ ಇತಿಮಿತಿಗಳಿಲ್ಲ ಅಂದರೆ, ಅವರಿಗೂ ಸಾಮಾನ್ಯ ವಿಮಾದಾರರಂತೆ ಇ.ಎಸ್.ಐ ಇಲಾಖೆಯಿಂದ ಎಲ್ಲಾ ಸೌಲಭ್ಯ, ಫಲಾನುಭವ ಹಾಗೂ ಹಿತಲಾಭಗಳು ದೊರಕುತ್ತವೆ ಎನ್ನುವುದನ್ನು ಇಲ್ಲಿ ಗಮನಿಸಬೇಕು. ಕಡಿಮೆ ಸಂಬಳದಿಂದ ನೌಕರ ವರ್ಗಕ್ಕೆ ಭಾರವಾಗಬಾರದೆಂಬುದೇ ಇದರ ಮೂಲ ಉದ್ದೇಶ.

**ಪ್ರಶ್ನೆ: ಇ.ಎಸ್.ಐ ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಲ್ಪಟ್ಟ ಘಟಕದಲ್ಲಿ ನೌಕರರ ಸಂಖ್ಯೆ 10 ಇದ್ದದು ಇದ್ದಕ್ಕಿದ್ದಂತೆ ಕಡಿಮೆಯಾದ ತಕ್ಷಣ ನೊಂದಣಿ ರದ್ದಾಗುತ್ತದೆಯೆ ?**

**ಉತ್ತರ:** ಇಲ್ಲ , ಒಂದು ಸಾರಿ ನೋಂದಣಿಯಾದ ಮೇಲೆ ನೌಕರರ ಸಂಖ್ಯೆ ಕಡಿಮೆಯಾಗಲಿ ಅಥವಾ ಅವರ ಮಾಸಿಕ ವೇತನದ ಮಿತಿ 21000=00 ರೂಪಾಯಿಗಿಂತ ಅಧಿಕವಾಗಲಿ ನೋಂದಣಿ ಮುಂದುವರಿಯುತ್ತದೆ. ಅರ್ಥಾತ್, ಒಮ್ಮೆ ನೋಂದಣಿಯಾದರೆ ಶಾಶ್ವತ ನೋಂದಣಿಯಾದಂತೆಯೇ ಸರಿ.

**ಪ್ರಶ್ನೆ: ಅಂದರೆ, ನೋಂದಣಿಯು ಯಾವುದೇ ಸಂದರ್ಭದಲ್ಲಿ ರದ್ದಾಗುವುದಿಲ್ಲ ಎಂದಾಯಿತು ಅಲ್ಲವೇ ?**

**ಉತ್ತರ:** ಹಾಗೇನು ಇಲ್ಲ. ನೋಂದಾಯಿತ ಘಟಕವೊಂದು ಯಾವುದೋ ಕಾರಣದಿಂದ ಶಾಶ್ವತವಾಗಿ ಮುಚ್ಚಿಹೋದರೆ ಮಾತ್ರ

ನೋಂದಾವಣಿ ರದ್ದಾಗುವುದು. ಅದಕ್ಕಾಗಿ ದಾಖಲೆಗಳನ್ನು ಒದಗಿಸಿ ನೋಂದಣಿಯನ್ನು ರದ್ದುಪಡಿಸಲು ಇ.ಎಸ್.ಐ ಇಲಾಖೆಗೆ ಘಟಕ ಅಥವಾ ಸಂಸ್ಥೆ ಮುಚ್ಚಿಹೋದ 7 ದಿನಗಳ ಒಳಗಾಗಿ ಸೂಚನೆ ನೀಡಬೇಕು.

**ಪ್ರಶ್ನೆ: ಸಂಘಟಿತ ವಲಯದ ಘಟಕವೊಂದು ಇ.ಎಸ್.ಐ ವ್ಯಾಪ್ತಿಯಿಂದ ಹೊರಗೆ ಉಳಿಯಲು ಸಾಧ್ಯವಿದೆಯೇ ? ಅಂದರೆ, ವ್ಯಾಪ್ತಿಯಿಂದ ಹೊರಗೆ ಹೋಗಲು ಅವಕಾಶವಿದೆಯೇ?**

**ಉತ್ತರ:** ಸಾಧ್ಯವಿದೆ, ಘಟಕದ ಆಡಳಿತ ಮಂಡಳಿಯು ಇ.ಎಸ್.ಐ ಗೆ ಸಮನಾದ ಅಥವಾ ಅದಕ್ಕಿಂತಲೂ ಉತ್ತಮವಾದ ಫಲಾನುಭವ ಹಾಗೂ ಹಿತಲಾಭಗಳನ್ನು ತನ್ನ ನೌಕರರಿಗೆ ಒದಗಿಸುತ್ತಿದ್ದು ಅದರ ಸಂಪೂರ್ಣ ವಿವರವನ್ನು ಸರ್ಕಾರಕ್ಕೆ ಒದಗಿಸಿ ಇ.ಎಸ್.ಐ ವ್ಯಾಪ್ತಿಯಿಂದ ಹೊರಗೆ ಉಳಿಯಲು ಅವಕಾಶವಿದೆ. ಉದಾಹರಣೆಗೆ: ಹಿಂದೊಮ್ಮೆ ಕರ್ನಾಟಕ ಸರ್ಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಇ.ಎಸ್.ಐ ವ್ಯಾಪ್ತಿಯಲ್ಲಿತ್ತು. ಕಾಲಾನಂತರ ಆ ಸಂಸ್ಥೆಯು ತನ್ನ ನೌಕರರಿಗೆ ಉತ್ತಮ ಸೌಲಭ್ಯ ಹಾಗೂ ಫಲಾನುಭವಗಳನ್ನು ಕೊಡುವುದಾಗಿ ದಾಖಲೆಯೊಂದಿಗೆ ಸರ್ಕಾರಕ್ಕೆ ದಾಖಲೆಗಳನ್ನು ಪ್ರಸ್ತುತಪಡಿಸಿ ಇ.ಎಸ್.ಐ ವ್ಯಾಪ್ತಿಯಿಂದ ಹೊರಗೆ ಉಳಿಯಿತು. ಆದುದರಿಂದ ಇ.ಎಸ್.ಐ ಅಧಿನಿಯಮ 1948 ರ ಅಡಿಯಲ್ಲಿ ಬರುವ ಯಾವುದೇ ಘಟಕವು ಇ.ಎಸ್.ಐ ಇಲಾಖೆಗೆ ಸಮನಾದ ಅಥವಾ ಮಿಗಿಲಾದ ಸೌಲಭ್ಯಗಳನ್ನು ಕೊಡುವುದಾಗಿ ದಾಖಲೆಸಹಿತ ಸರ್ಕಾರಕ್ಕೆ ಒದಗಿಸಿ ಇ.ಎಸ್.ಐ ನಿಂದ ಹೊರಗೆ ಉಳಿಯಲು ಅವಕಾಶವಿದೆ. ಒಟ್ಟಾರೆಯಾಗಿ ಹೇಳಬೇಕೆಂದರೆ, ಸರಕಾರಕ್ಕೆ ಸಾರ್ವಜನಿಕ ಹಿತಾಸಕ್ತಿ ಇಲ್ಲಿ ಮುಖ್ಯವಾದುದು ಪ್ರಮುಖವಾಗಿ ನೌಕರರಿಗೆ ಸಾಮಾಜಿಕ ಸುರಕ್ಷೆ ಸಿಗಬೇಕು ಎನ್ನುವುದೇ ಸರಕಾರದ ಉದ್ದೇಶ.

**ಪ್ರಶ್ನೆ: ವಂತಿಗೆಯ ಪ್ರಶ್ನೆ ಬಂದಾಗ ನೌಕರರ ಯಾವ ಸಂಬಳವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು? ಅಂದರೆ, ಇ.ಎಸ್.ಐ ಇಲಾಖೆಯ ಪ್ರಕಾರ ಸಂಬಳವೆಂದರೆ ಏನು?**

**ಉತ್ತರ:** ಇದೊಂದು ಉತ್ತಮ ಪ್ರಶ್ನೆ. ಇ.ಎಸ್.ಐ ಇಲಾಖೆಯ ಕಾನೂನಿನಂತೆ ನೌಕರನೊಬ್ಬ ತನ್ನ ಮಾಲೀಕ ಅಥವಾ ಆಡಳಿತ ಮಂಡಳಿಯಿಂದ ಹಣದ ರೂಪದಲ್ಲಿ ಪಡೆದುಕೊಳ್ಳುವ ಎಲ್ಲವೂ ಸಂಬಳವೆಂದೇ ಪರಿಗಣಿಸಲಾಗುತ್ತದೆ, ಅಂದರೆ, ವಂತಿಗೆಯನ್ನು ಲೆಕ್ಕ ಹಾಕುವಾಗ ಮೂಲ ವೇತನ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ತೆ, ನಗರ ಪ್ರತಿಕಾರ ಭತ್ಯೆ, ಅಧಿಕ ಸಮಯ ಕೆಲಸ ಮಾಡಿದುದಕ್ಕೆ ಪಡೆಯುವ ಭತ್ಯೆ, ರಾತ್ರಿ ಪಾಳೆಯ ಭತ್ಯೆ, ಶಾಖ: ಧೂಳು ಹತ್ತುವುದಕ್ಕಾಗಿ ಪಡೆದುಕೊಳ್ಳುವ ಭತ್ಯೆ, ಶಿಕ್ಷಣ ಭತ್ಯೆ, ಆಹಾರ–ಅಲ್ಪೋಪಹಾರ : ಚಹಾ ಭತ್ಯೆ, ಸಾರಿಗೆ ಭತ್ಯೆ, ಸಾರ್ವಜನಿಕ ರಜೆಯ ದಿನಗಳಂದು ಕಾರ್ಯನಿರ್ವಹಿಸಿದುದಕ್ಕೆ ಪಡೆಯುವ ಭತ್ಯೆ, ಮಾರಾಟ ಕೆಲಸದಲ್ಲಿ ತೊಡಗಿಸಿಕೊಂಡಾಗ ಪಡೆಯುವ ಭಕ್ಷೀಸು, ಅಮಾನತು ಅವಧಿಯಲ್ಲಿ ಪಡೆದುಕೊಳ್ಳುತ್ತಿರುವ ಸಂಬಳ, ಹರತಾಳ ಹಾಗೂ ಬಂದ್ ಆಚರಣೆಯ ಅವಧಿಗಾಗಿ ಪಡೆಯುವ ವೇತನ, ಅಲ್ಪ ಕಾಲಿಕ ಅವಧಿಗಾಗಿ ನೀಡುವ ಕೂಲಿಯೂ ಸೇರಿದಂತೆ ವ್ಯಕ್ತಿಯೊಬ್ಬ ಪಡೆದುಕೊಳ್ಳುವ ಗೌರವ ಧನಕ್ಕೂ ವಂತಿಗೆಯನ್ನು ಸಲ್ಲಿಸಬೇಕಾಗುತ್ತದೆ. ಒಟ್ಟಾರೆ ಹೇಳಬೇಕೆಂದರೆ, ನೌಕರನೊಬ್ಬ ಹಣದ ರೂಪದಲ್ಲಿ ಪಡೆದುಕೊಳ್ಳುವ ಇಡೀ ಮೊತ್ತಕ್ಕೆ ಆಡಳಿತ ಮಂಡಳಿ ಹಾಗೂ ನೌಕರರು ಸೇರಿ 6.5% ವಂತಿಗೆಯನ್ನು ಸಲ್ಲಿಸಬೇಕಾಗುತ್ತದೆ.

**ಪ್ರಶ್ನೆ: ನೀವೇ ಹೇಳಿದಂತೆ ಜನವರಿ 2017 ರಿಂದ ಇ.ಎಸ್.ಐ ವೇತನದ ಮಿತಿಯನ್ನು ಮಾಸಿಕ 21000=00 ರೂಪಾಯಿಗೆ ಹೆಚ್ಚಿಸಿದೆ. ಇಲ್ಲೊಂದು ಉಪ ಪ್ರಶ್ನೆ ನೌಕರನೊಬ್ಬ ಪಡೆಯುತ್ತಿರುವ ವೇತನವು ವೇತನ ವೃದ್ಧಿ, ಬೋನಸ್, ಅಧಿಕ ಕಾರ್ಯ ನಿರ್ವಹಿಸಿದುದಕ್ಕಾಗಿ ಪಡೆದ ಹಣವೂ ಸೇರಿ**

**ತಿಂಗಳ ಒಂದರಲ್ಲಿ 21000=00 ರೂಪಾಯಿಗಿಂತ ಹೆಚ್ಚಾಗಿ ಬಿಟ್ಟರೆ, ಅಂತಹ ಸಂದರ್ಭದಲ್ಲಿ ವಿಮಾದಾರ ನೌಕರರು ಇ.ಎಸ್.ಐ ವ್ಯಾಪ್ತಿಯಿಂದ ಹೊರಗೆ ಉಳಿಯುತ್ತಾರೆಯೆ?**

**ಉತ್ತರ:** ಅಂದರೆ, ವೇತನ ಮಿತಿಯನ್ನು ಮೀರಿದ ತಕ್ಷಣವೇ ನೌಕರ ವಿಮಾದಾರರು ಇ.ಎಸ್.ಐ ವ್ಯಾಪ್ತಿಯಿಂದ ಹೊರಗೆ ಉಳಿಯುತ್ತಾರೆ ಎಂಬುದು ನಿಮ್ಮ ಅನಿಸಿಕೆ. ಅದು ಹಾಗಲ್ಲ. ಇ.ಎಸ್.ಐ ಕಾನೂನಿನಂತೆ ವಂತಿಗೆ ಅವಧಿಯನ್ನು ವರ್ಷವೊಂದರಲ್ಲಿ ಎರಡು ಭಾಗವಾಗಿ ವಿಂಗಡಿಸಲಾಗಿದೆ. ಏಪ್ರಿಲ್‌ನಿಂದ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಿಂದ ಮಾರ್ಚ್. ವಿಷಯ ಹೀಗಿರುವಾಗ ವಂತಿಗೆಯ ಅವಧಿಯ ಮಧ್ಯದಲ್ಲಿ ವೇತನವು ಹೆಚ್ಚಾದರೂ ನೌಕರರು ಇ.ಎಸ್.ಐ ವ್ಯಾಪ್ತಿಯಿಂದ ಹೊರಗೆ ಉಳಿಯಲಾರರು. ವಂತಿಗೆಯ ಅವಧಿಯು ಮುಗಿಯುವವರೆಗೆ ಅವರು ಮುಂದುವರೆಯುತ್ತಾರೆ. ಅಷ್ಟೇ ಏಕೆ, ಹೆಚ್ಚಾದ ಮೊತ್ತಕ್ಕೂ ವಂತಿಗೆಯನ್ನು ಸಲ್ಲಿಸಬೇಕಾಗುತ್ತದೆ. ಉದಾಹರಣೆಗೆ: ವಂತಿಗೆಯ ಅವಧಿ ಏಪ್ರಿಲ್‌ನಿಂದ ಸೆಪ್ಟೆಂಬರ್ ಮಧ್ಯೆ ಜೂನ್ ತಿಂಗಳಿನಲ್ಲಿ ವೇತನ ವೃದ್ಧಿಯ ಪರಿಣಾಮವಾಗಿ ನೌಕರನೊಬ್ಬನ ವೇತನ ರೂಪಾಯಿ. 22000=00 ಆಗಿಬಿಟ್ಟರೆ, ವಂತಿಗೆಯನ್ನು 22000=00 ಕ್ಕೆ ಸಲ್ಲಿಸಬೇಕು. ಅದಕ್ಕಾಗಿ ವೇತನ ಮಿತಿಯಾದ ರೂಪಾಯಿ. 21000=00 ಗೆ ಮಾಡಲಾಗದು ಎನ್ನುವುದನ್ನು ಪ್ರಮುಖವಾಗಿ ಇಲ್ಲಿ ಗಮನಿಸಬೇಕು. ಮುಂದೆ ವಂತಿಗೆಯ ಅವಧಿ ಮುಗಿಯುತ್ತಲೆ ಆಗಲೂ 21,000=00 ಕ್ಕೆ ಹೆಚ್ಚಾಗಿದ್ದರೆ, ಅನಾಯಾಸವಾಗಿ ಅಂತಹ ವಿಮಾದಾರರು ವ್ಯಾಪ್ತಿಯಿಂದ ಹೊರಗೆ ಉಳಿಯುತ್ತಾರೆ.

**ಪ್ರಶ್ನೆ: ಅಧಿಕ ಅವಧಿಯ ಭತ್ತೆಯನ್ನು ಸೇರಿಸಿ ವೇತನ ಮಿತಿಯು ಅಧಿಕವಾದರೆ ನೌಕರನು ಇ.ಎಸ್.ಐ ವ್ಯಾಪ್ತಿಯಿಂದ ಹೊರಗೆ ಬರುವನೆ?**

**ಉತ್ತರ:** ಇಲ್ಲ. ಯಾಕೆಂದರೆ, ಅಧಿಕ ಅವಧಿಯ ಸೇವೆಯು ಭತ್ತೆಯಾದ ಕಾರಣ ಇದು ಶಾಶ್ವತ ಅಲ್ಲ. ಹೆಚ್ಚು ಕೆಲಸವಿದ್ದಾಗ ಈ ತೆರನಾದ ಸೇವೆ

**ಪ್ರಶ್ನೆ: ಅರ್ಥವಾಯ್ತು. ನನ್ನ ಮುಂದಿನ ಪ್ರಶ್ನೆ ಮಾಲೀಕರು ನೌಕರರ ವಂತಿಗೆಯನ್ನು ಅವರ ಸಂಬಳದಿಂದ ಕಡಿತ ಮಾಡಿ ಇ.ಎಸ್.ಐ ಇಲಾಖೆಗೆ ಸಮಯಕ್ಕೆ ಸರಿಯಾಗಿ ಕಟ್ಟದೆ ಹೋದರೆ?**

**ಉತ್ತರ:** ಹಾಗೆ ಮಾಡಬಾರದು, ಅದು ಕಾನೂನಿನ ಉಲ್ಲಂಘನೆ ಎಂದು ಪರಿಗಣಿಸಲಾಗುತ್ತದೆ. ಇ.ಎಸ್.ಐ ನಿಯಮ 40(4) ರ ಪ್ರಕಾರ ಮಾಲೀಕರು ಭಾರತೀಯ ದಂಡ ಸಂಹಿತೆ 406 ಅನ್ವಯ ಶಿಕ್ಷೆಗೆ ಒಳಪಡುತ್ತಾರೆ. ಆದುದರಿಂದ ಕಾನೂನಿನಂತೆ ಸಮಯಕ್ಕೆ ಸರಿಯಾಗಿ ವಂತಿಗೆಯನ್ನು ಸಲ್ಲಿಸಿ ಚಿಂತೆಯಿಂದ ಮುಕ್ತರಾಗುವುದು ಒಳಿತು.

**ಪ್ರಶ್ನೆ: ವಂತಿಗೆಯನ್ನು ತಡವಾಗಿ ಪಾವತಿ ಮಾಡಿದರೆ ಬಡ್ಡಿ ಹಾಕಲಾಗುತ್ತದೆಯೇ? ನಿಮ್ಮ ಪ್ರಕಾರ ಹೌದು ಎನ್ನುವುದಾದರೆ, ಅದರ ದರವೇನು?**

**ಉತ್ತರ:** ಹೌದು. ನಿಗದಿತ ಅವಧಿಯ ಒಳಗಾಗಿ ವಂತಿಗೆಯನ್ನು ಪಾವತಿ ಮಾಡದೇ ಹೋದರೆ ಇ.ಎಸ್.ಐ. ವಿನಿಯಮ 31ರ ಪ್ರಕಾರ ವಾರ್ಷಿಕ ಶೇಕಡ 12 ರ ದರದಲ್ಲಿ ಬಡ್ಡಿ ಸಂದಾಯ ಮಾಡಬೇಕಾಗುತ್ತದೆ. ಇದು ಇಷ್ಟೇ ಅಲ್ಲ. ಇದರೊಂದಿಗೆ ತಡವಾಗಿ ಸಂದಾಯ ಮಾಡಿ ಕಾನೂನು ಉಲ್ಲಂಘನೆ ಮಾಡಿದುದಕ್ಕಾಗಿ ಬಡ್ಡಿಯೊಂದಿಗೆ ದಂಡದ ರೂಪದಲ್ಲಿ ಹರ್ಜಾನಾ ಸೇರಿಸಲಾಗುತ್ತದೆ. ಅದರ ವಿವರ ಹೀಗಿದೆ.

| ಕ್ರಮಾಂಕ | ವಿಳಂಬದ ಅವಧಿ | ಹರ್ಜಾನಾ ಅಂದರೆ, ದಂಡದ ಪ್ರಮಾಣ |
|---|---|---|
| 1 | 2 ತಿಂಗಳಿಗಿಂತ ಕಡಿಮೆ ಅವಧಿ | 5% |
| 2 | 2 ರಿಂದ 4 ತಿಂಗಳು | 10% |
| 3 | 4ರಿಂದ 6 ತಿಂಗಳು | 15% |
| 4 | 6 ತಿಂಗಳಿಗಿಂತ ಅಧಿಕ ಅವಧಿ | 25% |

ಈ ಬಡ್ಡಿ ಹಾಗೂ ದಂಡಗಳ ಪ್ರಮಾಣವನ್ನು ನೋಡಿದರೆ ನಿಮಗೇನನಿಸುತ್ತದೆ? ಬೇಡಪ್ಪಾ, ಇದರ ಸಹವಾಸ, ಸರ್ಕಾರದ ಕಾನೂನು ಹಾಗೂ ನಿಯಮಗಳಂತೆ ಸಮಯಕ್ಕೆ ಸರಿಯಾಗಿ ಹಣ ಸಂದಾಯ ಮಾಡಿ ಚಿಂತೆಯಿಂದ ಮುಕ್ತರಾಗಿ ಬಿಡಬೇಕು ಎನ್ನಿಸುತ್ತದೆ ಅಲ್ಲವೆ?

**ಪ್ರಶ್ನೆ: ಹೌದು. ನೀವು ಸರಿಯಾಗಿ ಹೇಳಿದಿರಿ. ಚಿಂತೆಯಿಂದ ಮುಕ್ತರಾಗಿರಬೇಕು ಎನ್ನುವವರು ಇ.ಎಸ್.ಐ. ವಂತಿಗೆಯನ್ನು ಸರಿಯಾದ ಸಮಯಕ್ಕೆ ಸಂದಾಯ ಮಾಡಬೇಕು ಇನ್ನು ನನ್ನ ಎರಡನೆಯ ಪ್ರಶ್ನೆ ವಂತಿಗೆ ಹಾಗೂ ಹಿತಲಾಭದ ಅವಧಿಗಳು ಯಾವುವು ?**

**ಉತ್ತರ:** ವಂತಿಗೆಯ ಅವಧಿಯನ್ನು ಹಣಕಾಸು ವರ್ಷ ಏಪ್ರಿಲ್‌ನಿಂದ ಮಾರ್ಚ್ ವರೆಗಿನ ಅವಧಿಯನ್ನು 2 ಭಾಗವಾಗಿ ವಿಂಗಡನೆ ಮಾಡಲಾಗಿದೆ. ಏಪ್ರಿಲ್‌ನಿಂದ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಿಂದ ಮುಂಬರುವ ವರ್ಷದ ಮಾರ್ಚ್ ತಿಂಗಳವರೆಗೆ ಎಂದು ನಿಗದಿಪಡಿಸಲಾಗಿದೆ. ಇನ್ನು ಫಲಾನುಭವದ ಅವಧಿಯು ವಂತಿಗೆಯ ಅವಧಿಯು ಆರಂಭವಾದ 3 ತಿಂಗಳ ನಂತರ ಆರಂಭವಾಗುವುದು. ಉದಾ: ಜನವರಿಯಿಂದ ಜೂನ್ ಹಾಗೂ ಜುಲೈನಿಂದ ಡಿಸೆಂಬರ್‌ವರೆಗೆ. ಅಂದರೆ, ಕ್ಯಾಲೆಂಡರ್ ವರ್ಷವನ್ನು 2 ಭಾಗಗಳಾಗಿ ವಿಂಗಡಿಸಿ ಫಲಾನುಭವದ ಅವಧಿಯನ್ನಾಗಿ ನಿಗದಿಪಡಿಸಲಾಗಿದೆ ಎಂದು ಹೇಳಬಹುದು.

**ಪ್ರಶ್ನೆ: ಇ.ಎಸ್.ಐ ಇಲಾಖೆಗೆ ಸಂಬಂಧಪಟ್ಟಂತೆ ಇ.ಎಸ್.ಐ. ಅಧಿನಿಯಮದಡಿ ನೋಂದಾಯಿಸಲ್ಪಟ್ಟ ಘಟಕಗಳ ಆಡಳಿತ ಮಂಡಳಿಯು ಯಾವ-ಯಾವ ದಾಖಲೆ, ರಜಿಸ್ಟರ್ ಹಾಗೂ ಕಾಗದ ಪತ್ರಗಳನ್ನು ಅನುರಕ್ಷಿಸಬೇಕು.?**

**ಉತ್ತರ:** ಇ.ಎಸ್.ಐ ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆಗಳು ಕಾನೂನಿನ ಪ್ರಕಾರ ಅನುರಕ್ಷಿಸಬೇಕಾದುದು ನೌಕರರ ಹಾಜರಿ ಪುಸ್ತಕ, ಸಂಬಳದ ದಾಖಲೆ ಹಾಗೂ ಲೆಕ್ಕಪತ್ರ

ಪುಸ್ತಕಗಳು, ಪ್ರಪತ್ರ 6ರಲ್ಲಿ ನೌಕರರ ಹೆಸರನ್ನು ಬರೆದಿರಬೇಕು. ಪ್ರಪತ್ರ 11 ರಲ್ಲಿ ದುರ್ಘಟನಾ ನೋಂದಣಿ ಪುಸ್ತಕ ಹೊಂದಿರಬೇಕು ಹಾಗೂ ಇ.ಎಸ್.ಐ. ಅಧಿಕಾರಿಗಳು ನಿರೀಕ್ಷಣೆ ಹಾಗೂ ಪರಿವೀಕ್ಷಣೆಗೆ ಬಂದಾಗ ಶರಾ ಬರೆದಿಡಲು ಪುಸ್ತಕವೊಂದನ್ನು ಕಾರ್ಯಾಲಯದಲ್ಲಿ ಅನುರಕ್ಷಿಸಿ ಇಡಬೇಕು.

**ಪ್ರಶ್ನೆ: ಇ.ಎಸ್.ಐ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಿಕೊಂಡ ಸಂಸ್ಥೆಯು ಆವಧಿಕವಾಗಿ ಯಾವುದಾದರೂ ವಿವರಗಳನ್ನು ಸಲ್ಲಿಸಬೇಕೆ ?**

**ಉತ್ತರ:** ಹೌದು.

(1) ಪ್ರತಿ ವರ್ಷ 31 ನೆಯ ಜನವರಿಯ ಒಳಗೆ ಕಳೆದ ಕ್ಯಾಲೆಂಡರ್ ವರ್ಷದಲ್ಲಿ ಘಟಕದ ವಿಳಾಸ ಬದಲಾವಣೆಯಾಗಿದ್ದರೆ ಅದರ ಉಲ್ಲೇಖದೊಂದಿಗೆ ಪ್ರಪತ್ರ 01 'ಎ' ಭರ್ತಿಮಾಡಿ ಸಂಬಂಧಪಟ್ಟ ಪ್ರಾದೇಶಿಕ ಅಥವಾ ಉಪ ಪ್ರಾದೇಶಿಕ ಕಾರ್ಯಾಲಯಕ್ಕೆ ಕಳುಹಿಸಿ ಕೊಡಬೇಕು.

(2) ವರ್ಷದ 2 ವಂತಿಗೆಯ ಅವಧಿಗಳಾದ ಏಪ್ರಿಲ್‌ನಿಂದ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಿಂದ ಮಾರ್ಚ್ ಅವಧಿಯ ನಂತರ ಅವಧಿಯು ಮುಕ್ತಾಯವಾದ 42 ದಿನಗಳ ಒಳಗಾಗಿ ಹಣ ಸಂದಾಯ ಮಾಡಿದ ಚಲನ್ ಪ್ರತಿಗಳನ್ನು ಲಗತ್ತಿಸಿ ಸಂಬಂಧಪಟ್ಟ ಶಾಖಾ ಕಛೇರಿಗೆ ಕಳುಹಿಸಿಕೊಡಬೇಕು. ನಿಯಮಗಳು ಹೀಗಿದ್ದರೂ ಇತ್ತೀಚಿನ ದಿನಗಳಲ್ಲಿ ವಂತಿಗೆಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವುದರಿಂದ ಸಂದಾಯದ ವಿವರ ಸಿಸ್ಟಂನಲ್ಲಿ ಗೊತ್ತಾಗಿಬಿಡುತ್ತದೆ. ಹೀಗಾಗಿ ಈ ವ್ಯವಸ್ಥೆ ಈಗ ಮಹತ್ವವನ್ನು ಕಳೆದುಕೊಂಡಿದೆ.

(3) ಇ.ಎಸ್.ಐ ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಘಟಕವು ದುರ್ಘಟನಾ ರಿಜಿಸ್ಟರ್ ಅಂದರೆ ಪ್ರಪತ್ರ 11ನ್ನು ಕಡ್ಡಾಯವಾಗಿ ಇಟ್ಟುಕೊಂಡಿರಬೇಕು. ಘಟಕ

ಅಥವಾ ಸಂಸ್ಥೆಯ ಪರಿಸರವೂ ಸೇರಿದಂತೆ ವಿಮಾದಾರರು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ದುರ್ಘಟನೆಗೆ ತುತ್ತಾದರೆ ಅದರ ವಿವರವನ್ನು ಪ್ರಪತ್ರ 11ರಲ್ಲಿ ಭರ್ತಿಮಾಡಿ 24 ಘಂಟೆಯ ಒಳಗಾಗಿ ಸಂಬಂಧಪಟ್ಟ ಶಾಖಾ ಕಚೇರಿಗೆ ಹಾಗೂ ಅದರ ಒಂದು ಪ್ರತಿಯನ್ನು ಸಂಬಂಧಪಟ್ಟ ಇ.ಎಸ್.ಐ ಚಿಕಿತ್ಸಾಲಯಕ್ಕೂ ಕಳುಹಿಸಿಕೊಡಬೇಕು. ದುರ್ಘಟನೆಯ ವಿವರಗಳನ್ನು ಸುರಕ್ಷಿತವಾಗಿ ಇಟ್ಟುಕೊಂಡಿದ್ದು ಇ.ಎಸ್.ಐ ಇಲಾಖೆಯ ಅಧಿಕಾರಿಗಳು ಪರಿವೀಕ್ಷಣೆಗೆ ಬಂದಾಗ ಪ್ರಸ್ತುತ ಪಡಿಸಬೇಕು. ಅಂದರೆ, ಮುಂದೊಮ್ಮೆ ದುರ್ಘಟನೆಯಿಂದ ವಿಮಾದಾರ ತೀರಿಕೊಂಡರೆ ಅಥವಾ ದುರ್ಘಟನೆಯ ನಂತರ ವಿಕಲಾಂಗನಾದರೆ ಫಲಾನುಭವಗಳಿಗೆ ಈ ದಾಖಲೆಗಳು ಸಹಕಾರಿಯಾಗುತ್ತವೆ. ಇನ್ನೊಂದು ಮಾತಿನಲ್ಲಿ ಹೇಳಬೇಕೆಂದರೆ, ಫಲಾನುಭವಗಳಿಗೆ ಈ ದಾಖಲೆಗಳೇ ಮೂಲ ಆಧಾರಗಳು.

ಈ ವಿವರಗಳನ್ನು ಲಿಖಿತದಲ್ಲಿ ಕಳುಹಿಸಿಕೊಡುವ ಅವಶ್ಯಕತೆ ಇಲ್ಲ. ಯಾಕೆಂದರೆ, ಈಗ ಎಲ್ಲಾ ವಿವರವನ್ನು ಆನ್‌ಲೈನ್ ನಲ್ಲಿ ಕಳುಹಿಸಿಕೊಡುವ ವ್ಯವಸ್ಥೆ ಇದೆ. ಹಾಗೂ ಸಂಪೂರ್ಣ ವಿವರಗಳು ಸಿಸ್ಟಮ್‌ನಲ್ಲಿ ಲಭ್ಯವಿರುವುದರಿಂದ ಮೊದಲಿನಂತೆ ಆವಧಿಕವಾಗಿ ಕಳುಹಿಸಿಕೊಡಲೇಬೇಕು ಎಂಬ ನಿಯಮವಿಲ್ಲ. ಸುಲಭ ಸಂದರ್ಭಕ್ಕಾಗಿ ಇ.ಎಸ್.ಐ. ಇಲಾಖೆಯು ದಾಖಲೆಗಳ ವಿವರಗಳನ್ನು ಪರಿವೀಕ್ಷಿಸಿಕೊಳ್ಳುವುದು.

**ಪ್ರಶ್ನೆ: ನೌಕರನೊಬ್ಬನನ್ನು ವಿಮಾದಾರನೆಂದು ಗುರುತಿಸುವುದು ಹೇಗೆ ? ಇದಕ್ಕಾಗಿ ನೋಂದಣಿಯ ಅವಶ್ಯಕತೆ ಇದೆಯೇ?**

**ಉತ್ತರ:** ಹೌದು, ನೋಂದಣಿಯ ಅವಶ್ಯಕತೆ ಇದೆ. ಹತ್ತಕ್ಕಿಂತ ಅಧಿಕ ಸಂಖ್ಯೆಯ ನೌಕರರನ್ನು ಹೊಂದಿದ ಸಂಸ್ಥೆಯೊಂದು ಇ.ಎಸ್.ಐ ಅಧಿನಿಯಮ 1948 ರ ಅಡಿಯಲ್ಲಿ ನೋಂದಾಯಿಸಿದ ನಂತರ ಆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಸಿಕ ರೂಪಾಯಿ. 21000=00

ಅಥವಾ ಅದಕ್ಕಿಂತ ಕಡಿಮೆ ವೇತನ ಪಡೆಯುತ್ತಿರುವ ಎಲ್ಲಾ ನೌಕರರು ವಿಮಾದಾರರಾಗಲು ಅರ್ಹರಾಗಿರುತ್ತಾರೆ. ಇದು ಕಡ್ಡಾಯ ಕೂಡ. ಈ ಕಾರ್ಯವನ್ನು ಆಯಾ ಸಂಸ್ಥೆಯ ಆಡಳಿತ ಮಂಡಳಿಯೇ ಮಾಡಬೇಕು. ಆನ್‌ಲೈನ್‌ನಲ್ಲಿ ಇ.ಎಸ್.ಐ ವೆಬ್‌ಸೈಟ್‌ಗೆ ಹೋಗಿ ನೌಕರರ ನೋಂದಣಿಯ ಕಾರ್ಯ ಆರಂಭಿಸಬೇಕು. ಅದರಲ್ಲಿ ನೌಕರರ ಹೆಸರು, ತಂದೆ ಅಥವಾ ಗಂಡನ ಹೆಸರು, ಹುಟ್ಟಿದ ದಿನಾಂಕ, ಕೆಲಸಕ್ಕೆ ಸೇರಿದ ದಿನಾಂಕ, ಅವಲಂಬಿತ ಕುಟುಂಬದ ಸದಸ್ಯರ ಹೆಸರು ಹುಟ್ಟಿದ ತಾರೀಖು, ಸಂಬಂಧವೂ ಸೇರಿದಂತೆ ಕಡ್ಡಾಯವಾಗಿ ಅವರೆಲ್ಲರ ಆಧಾರ ಸಂಖ್ಯೆಯನ್ನು ನಮೂದಿಸಬೇಕು. ಎಲ್ಲವನ್ನು ಮಾಡಿಯಾದ ನಂತರ ಇ:ಪೆಹಚಾನ ಕಾರ್ಡ್ ಎಂಬ ಕಾಗದ ಬರುವುದು. ಅದಕ್ಕೆ ಮೀಸಲಾಗಿ ಇಟ್ಟಿರುವ ಸ್ಥಾನದಲ್ಲಿ ವಿಮಾದಾರನೂ ಸೇರಿದಂತೆ ಅವರ ಅವಲಂಬಿತ ಕುಟುಂಬದ ಸದಸ್ಯರುಗಳ ಪಿ:2 ಆಕಾರದ ಫೋಟೊ ಅಂಟಿಸಿ ದ್ವಿಪ್ರತಿಯಲ್ಲಿ ಜಾರಿಗೊಳಿಸಬೇಕು. ಇನ್ನೊಂದು ಪ್ರತಿಯನ್ನು ಕಚೇರಿಯ ದಾಖಲೆಯಾಗಿ ಇಟ್ಟುಕೊಳ್ಳಬೇಕು.

**ಪ್ರಶ್ನೆ: ಇದಾದ ನಂತರ ಏನು ಮಾಡಬೇಕು?**

**ಉತ್ತರ:** ಮೇಲೆ ಹೇಳಿದ ಇ:ಪೆಹಚಾನ ಕಾರ್ಡ್‌ನ ಎರಡು ಝೆರಾಕ್ಸ್ ಪ್ರತಿಯನ್ನು ತೆಗೆದುಕೊಳ್ಳಬೇಕು. ಇದು 2 ಪುಟಗಳ ಕಾರ್ಡ್ ಇರುವುದರಿಂದ ಕಾಗದದ ಹಿಂದೆ ಹಾಗೂ ಮುಂದೆ ತೆಗೆದುಕೊಳ್ಳಬೇಕು. 2 ಪುಟದ ಕೊನೆಯಲ್ಲಿ ಅದಕ್ಕಾಗಿ ಮೀಸಲಿರುವ ಸ್ಥಳದಲ್ಲಿ ಪಿ: 2 ಆಕಾರದ ಕುಟುಂಬದ ಅವಲಂಬಿತ ಎಲ್ಲಾ ಸದಸ್ಯರ ಫೋಟೊ ಅಂಟಿಸಬೇಕು. ತದನಂತರ ಮೀಸಲಿರುವ ಸ್ಥಾನದಲ್ಲಿ ಸಂಸ್ಥೆಯ ಮುಖ್ಯಸ್ಥರು ಅಥವಾ ಆಡಳಿತಾಧಿಕಾರಿಯ ಮುದ್ರೆ ಹಾಗೂ ಸಹಿ ಹಾಕಿಸಿ ಜಾರಿಗೊಳಿಸಬೇಕು. ಇದುವೇ ಅವರ ಗುರುತಿನ ಚೀಟಿ. ಇ.ಎಸ್.ಐ. ವೈದ್ಯಕೀಯ ಸೌಲಭ್ಯಕ್ಕೆ ಹೋದಾಗ ಇದನ್ನು ಜೊತೆಗೆ ತೆಗೆದುಕೊಂಡು ಹೋಗಬೇಕು.

**ಪ್ರಶ್ನೆ: ಇ:ಪೆಹಚಾನ ಕಾರ್ಡಿನ ಉಪಯೋಗವೇನು ?**

**ಉತ್ತರ:** ಇ:ಪೆಹಚಾನ ಕಾರ್ಡ್ ವಿಮಾದಾರನ ಗುರುತಿನ ಚೀಟಿ. ನಿಮಗೆ ಹೇಳಬೇಕು ಅಂದ್ರೆ ಇ.ಎಸ್.ಐ ಇಲಾಖೆಯ ಹಲವಾರು ಘೋಷಣಾ ವಾಕ್ಯಗಳಲ್ಲಿ ಒಂದಾದ 'ಕಹೀಂ ಭೀ, ಕಭೀ ಭೀ'. ಅಂದರೆ, "ಎಲ್ಲಿಯಾದರೂ ಸರಿ, ಯಾವಾಗಲಾದರೂ ಸರಿ" ಎಂಬುದು ಇದರ ಭಾವಾರ್ಥ.

**ಪಶ್ನೆ: ಇದರ ಭಾವಾರ್ಥವನ್ನು ಬಿಡಿಸಿ ಹೇಳ್ತೀರಾ ?**

**ಉತ್ತರ:** ಇದರ ಅರ್ಥ ಇಷ್ಟೇ, ಇ:ಪೆಹಚಾನ ಕಾರ್ಡಿನ ಸಹಾಯದಿಂದ ವಿಮಾದಾರ ಹಾಗೂ ಅವನ ಅವಲಂಬಿತ ಕುಟುಂಬದ ಸದಸ್ಯರು ದೇಶದ ತುಂಬೆಲ್ಲಾ ಹರಡಿರುವ ಇ.ಎಸ್.ಐ ಚಿಕಿತ್ಸಾಲಯ, ಆಸ್ಪತ್ರೆಯೂ ಸೇರಿದಂತೆ ಇ.ಎಸ್.ಐ. ಇಲಾಖೆಯೊಂದಿಗೆ ಒಡಂಬಡಿಕೆಗೆ ಒಳಪಟ್ಟ ಆಸ್ಪತ್ರೆಗಳಲ್ಲಿ ನಗದು ರಹಿತ ಅರ್ಥಾತ ಕ್ಯಾಶ್‌ಲೆಸ್ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ಅನುಕೂಲವಾಗುತ್ತದೆ.

**ಪ್ರಶ್ನೆ: ಅಂದರೆ, ಹಳೆಯ ಫೋಟೋ ಕ್ಯಾಂಪ್ ಈಗ ಜಾರಿಯಲ್ಲಿಲ್ಲವೇ?**

**ಉತ್ತರ:** ಅದೆಲ್ಲಾ ಹಳೆಯ ಮಾತು. ಹೊಸ ವ್ಯವಸ್ಥೆಯಂತೆ ಆನ್‌ಲೈನ್‌ನಲ್ಲಿ ಇ:ಪೆಹಚಾನ್ ಕಾರ್ಡ್ ಪಡೆದುಕೊಂಡು ಪಿ: 2 ಆಕಾರದ ಕುಟುಂಬದ ಸದಸ್ಯರ ಫೋಟೋ ಅಂಟಿಸಿ ಸಂಸ್ಥೆಯ ಮುಖ್ಯಸ್ಥರು ಅಥವಾ ಆಡಳಿತ ಅಧಿಕಾರಿಯ ಸಹಿ ಹಾಗೂ ಮುದ್ರೆಯನ್ನು ಹಾಕಿಸಿಕೊಂಡರೆ ಆಯಿತು. ಗುರುತಿನ ಚೀಟಿ ಸಿದ್ಧ ಎಂದು ತಿಳಿದುಕೊಳ್ಳಿ. ಇನ್ನೂ ಬಿಡಿಸಿ ಹೇಳಬೇಕೆಂದರೆ, ಇ.ಎಸ್.ಐ. ಕಾರ್ಡ್ ಪಡೆದುಕೊಳ್ಳಲು ಅನ್ಯತ್ರ ಹೋಗುವ ಅವಶ್ಯಕತೆ ಇಲ್ಲ. ನಿಮ್ಮ ಕಚೇರಿ, ಕಾರ್ಖಾನೆ, ಸಂಸ್ಥೆಯ ಕಚೇರಿಯಲ್ಲಿ ಪಡೆದುಕೊಳ್ಳಬಹುದು. ಅದೇ ಶಾಶ್ವತ ಗುರುತಿನ ಚೀಟಿಯೂ ಕೂಡಾ. ಹೌದು. ಮೊದಲಿನಂತೆ ಮೊದಲ ಮೂರು ತಿಂಗಳು ತಾತ್ಕಾಲಿಕ ನಂತರ ಶಾಸ್ವತ ಕಾರ್ಡ್ ಪಡೆದುಕೊಳ್ಳುವ ವ್ಯವಸ್ಥೆ ಇತಿಹಾಸದ ಪುಟಕ್ಕೆ ಸೇರಿದೆ.

ಮೊದಲನೆಯ ದಿನ ಪಡೆದ ಇ:ಪೆಹಚಾನ ಕಾರ್ಡೇ ಶಾಶ್ವತ ಗುರುತಿನ ಚೀಟಿ.

**ಪ್ರಶ್ನೆ: ತಾತ್ಕಾಲಿಕ ಗುರುತಿನ ಚೀಟಿ ಎಂದರೇನು ?**

**ಉತ್ತರ:** ಇದೊಂದು ಒಳ್ಳೆಯ ಪ್ರಶ್ನೆ. ಹಿಂದೆ ಮೊದಲು 3 ತಿಂಗಳಿಗೆ ಇ.ಎಸ್.ಐ ಶಾಖಾ ಕಚೇರಿಯಿಂದ ತಾತ್ಕಾಲಿಕ ಗುರುತಿನ ಚೀಟಿ ಕೊಡಲಾಗುತ್ತಿತ್ತು. ತದನಂತರ ಕುಟುಂಬದ ಸದಸ್ಯರೊಂದಿಗೆ ಇ.ಎಸ್.ಐ ಫೋಟೋ ಕ್ಯಾಂಪಿಗೆ ಹಾಜರಾಗಿ ಫೋಟೋ ತೆಗೆಸಿಕೊಂಡ ನಂತರ 2 ತಿಂಗಳ ನಂತರ ಶಾಶ್ವತ ಗುರುತಿನ ಚೀಟಿ ವಿತರಿಸಲಾಗುತ್ತಿತ್ತು. ಅದೆಲ್ಲಾ ಈಗ ಇತಿಹಾಸ. ಆಗಲೇ ಹೇಳಿದಂತೆ ಇ:ಪೆಹಚಾನ ಕಾರ್ಡ್ ತೆಗೆದುಕೊಂಡ ದಿನವೇ ಅದು ಶಾಶ್ವತ ಗುರುತಿನ ಕಾರ್ಡ್ ಆಗುವುದು. ಅದನ್ನುಳಿದು ಇನ್ನಾವುದೇ ಕಾರ್ಡ್ ಇಲ್ಲವೇ ಇಲ್ಲ ಈಗ.

**ಪ್ರಶ್ನೆ: ವಿಮಾದಾರ ಈಗಿರುವ ತನ್ನ ನೌಕರಿಯನ್ನು ಬಿಟ್ಟು ಬೇರೆ ಸಂಸ್ಥೆ ಅಥವಾ ಕಾರ್ಖಾನೆಯಲ್ಲಿ ಕೆಲಸ ಪಡೆದುಕೊಂಡರೆ ಆ ಸಂಸ್ಥೆಯಲ್ಲಿಯೂ ಇ.ಎಸ್.ಐ ನೋಂದಣಿ ಮಾಡಿಸಿಕೊಂಡು ಇನ್ನೊಂದು ಇ:ಪೆಹಚಾನ ಕಾರ್ಡ್ ಪಡೆದುಕೊಳ್ಳಬೇಕೆ?**

**ಉತ್ತರ:** ಊಂ, ಹೂಂ, ಹಾಗೇನು ಇಲ್ಲ. ನೌಕರನು ತನ್ನ ಜೀವನದಲ್ಲಿ ಒಮ್ಮೆ ನೋಂದಾಯಿಸಿಕೊಂಡು ಇ:ಪೆಹಚಾನ ಕಾರ್ಡ್ ಪಡೆದುಕೊಂಡರೆ ಸಾಕು. ನೌಕರಿ ಬದಲಿಸುತ್ತಾ ಹೋದಲ್ಲೆಲ್ಲಾ ಹೊಸದಾಗಿ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇಲ್ಲ. ಬೇರೆ ಕಡೆಗೆ ಸೇರಿಕೊಂಡಾಗ ಹೊಸ ಆಡಳಿತ ಮಂಡಳಿಗೆ ಇ.ಎಸ್.ಐ ವಿಮಾ ಸಂಖ್ಯೆಯನ್ನು ತಿಳಿಸಬೇಕು. ಹೀಗಾಗಿ ಅದೇ ಸಂಖ್ಯೆಯಲ್ಲಿ ವಂತಿಗೆಯ ಹಣ ಸಂದಾಯವಾಗುತ್ತಾ ಹೋಗುವುದರ ಜೊತೆಗೆ ಸೌಲಭ್ಯಗಳೂ ಮುಂದುವರಿಯುತ್ತಾ ಹೋಗುತ್ತವೆ.

**ಪ್ರಶ್ನೆ: ಇದರಿಂದ ವಿಮಾದಾರನಿಗೆ ಏನು ಲಾಭ?**

**ಉತ್ತರ:** ಲಾಭವೇನು, ತುಂಬಾ ಅನುಕೂಲವಾಗುತ್ತದೆ. ಕೆಲವು ಫಲಾನುಭವಗಳಿಗೆ ವಿಮಾದಾರನು ಕನಿಷ್ಟ ಪಕ್ಷ ಇಂತಿಷ್ಟು ಅವಧಿಗೆ

ಇ.ಎಸ್.ಐ ವಂತಿಗೆಯನ್ನು ಸಲ್ಲಿಸಿರಬೇಕು. ಇಲ್ಲದಿದ್ದರೆ ಫಲಾನುಭವ ಸಿಗದು ಎಂಬ ನಿಯಮ ಇರುತ್ತದೆ. ಹೀಗಿರುವಾಗ ವಂಚಿತರಾಗುವ ಪ್ರಮೇಯದಿಂದ ಪಾರಾಗಬಹುದು. ಉದಾ: ಮಹಿಳಾ ವಿಮಾದಾರಳು ಹೆರಿಗೆಯ ಸೌಲಭ್ಯ ಪಡೆದುಕೊಳ್ಳಲು ವಂತಿಗೆಯ ಅವಧಿಯಲ್ಲಿ ಕನಿಷ್ಟ ಪಕ್ಷ 78 ದಿನಗಳ ವಂತಿಗೆಯನ್ನು ಸಲ್ಲಿಸಿರಬೇಕು ಎಂಬ ನಿಯಮವಿದೆ. ಅಂತಹ ಸಂದರ್ಭದಲ್ಲಿ ಆ ಅವಧಿಯಲ್ಲಿ ಹಳೆಯ ಸಂಸ್ಥೆಯಲ್ಲಿ 60 ದಿನಗಳು ಹಾಗೂ ಹೊಸ ಸಂಸ್ಥೆಯಲ್ಲಿ 18 ದಿನದ ವಂತಿಗೆಯನ್ನು ಸಲ್ಲಿಸಿದರೆ ಫಲಾನುಭವಕ್ಕೆ ಅರ್ಹಳಾಗುತ್ತಾಳೆ. ಇಲ್ಲದಿದ್ದರೆ ಹೊಸ ನೌಕರಿಯ ಅವಧಿಯು ಕೇವಲ 18 ದಿನ ಆಗುವುದರಿಂದ ನಿಯಮಾನುಸಾರ ಸೌಲಭ್ಯದಿಂದ ವಂಚಿತಳಾಗುತ್ತಾಳೆ ಅರ್ಥವಾಯ್ತಲ್ಲ ?

**ಪ್ರಶ್ನೆ: ಅರ್ಥವಾಯ್ತು. ಈಗ ನನಗೆ ಪ್ರಮುಖವಾದ ಇ.ಎಸ್.ಐ ಸೌಲಭ್ಯಗಳ ಕುರಿತು ಹೇಳಿಕೊಡ್ತೀರಾ** ?

**ಉತ್ತರ:** ಅವಶ್ಯವಾಗಿ ಹೇಳ್ತೀನಿ ಇದೊಂದು ಸ್ವಾರಸ್ಯಕರ ಮತ್ತು ಪ್ರಮುಖ ಪ್ರಶ್ನೆ. ಸಾಮಾನ್ಯತಃ ಜನಸಾಮಾನ್ಯರ ಮನಸ್ಸಿನಲ್ಲಿ ಇ.ಎಸ್.ಐ ಯೋಜನೆಯ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲ ಅಂತಾನೇ ಹೇಳ್ಬೇಕು. ಇದಕ್ಕೆ ನಮ್ಮ ಮಾಲೀಕ ಬಂಧುಗಳೂ ಹೊರತಾಗಿಲ್ಲ. ಇದೊಂದು ಸರ್ಕಾರಿ ಯೋಜನೆ. ಹಣ ಕಟ್ಟಿಬಿಟ್ಟರೆ ಮುಗಿದುಹೋಯಿತು ಎಂಬುದಾಗಿ ಯೋಚಿಸುತ್ತಾ ಒಲ್ಲದ ಮನಸ್ಸಿನಿಂದ ವಂತಿಗೆ ಹಣವನ್ನು ಸಂದಾಯ ಮಾಡುವವರೇ ಹೆಚ್ಚು. ಇನ್ನು ಬಹುಪಾಲು ವಿಮಾದಾರರೂ ಅಷ್ಟೆ, ಪ್ರತಿ ತಿಂಗಳು ಸಂಬಳದಲ್ಲಿ ಮುರಿದುಕೊಳ್ಳುವ ಇ.ಎಸ್.ಐ ವಂತಿಗೆ ದಂಡವೇ ಅಂದ್ಕೊಳ್ಳುತ್ತ ಅದನ್ನೇ ಕೈಗೆ ಕೊಟ್ಟರೆ, ದುಬಾರಿ ಕಾಲದಲ್ಲಿ ಸಂಸಾರದ ಖರ್ಚಿಗೆ ಅನೂಕೂಲವಾದೀತು ಎಂಬ ನಿರ್ಲಿಪ್ತ ಭಾವನೆ. ಮಾಲೀಕರು ಹಾಗೂ ವಿಮಾದಾರರ ದೃಷ್ಟಿಯಲ್ಲಿ ಈ ರೀತಿ ಭಾವನೆ ಬರುವುದಕ್ಕೆ ಕಾರಣವೂ ಇಲ್ಲದಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ, ಪ್ರಪಂಚದಲ್ಲಿಯೇ

ಅತಿ ದೊಡ್ಡ ಸಾಮಾಜಿಕ ಸುರಕ್ಷಾ ಯೋಜನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ 'ಪಂಚದೀಪ'ದ ಹೆಗ್ಗುರುತಿನ ಇ.ಎಸ್.ಐ ಯೋಜನೆಯಿಂದ ಮಾಲೀಕರು ಹಾಗೂ ನೌಕರರಿಗೆ ಸಿಗುವ ಹಿತಲಾಭ ಹಾಗೂ ಫಲಾನುಭವಗಳ ಪರಿಚಯ ಅವರುಗಳಿಗೆ ಇಲ್ಲದಿರುವುದೇ ಆಗಿದೆ. ಹಲವು ಹನ್ನೊಂದು ಜವಾಬ್ದಾರಿಯಿಂದ ಮಾಲೀಕರು ಹಾಗೂ ಆಡಳಿತ ಮಂಡಳಿಗೆ ನೆಮ್ಮದಿಯ ಹಸ್ತ ನೀಡುವ ಹಾಗೂ ಕಷ್ಟದ ಕಾಲದಲ್ಲಿ ವಿಮಾದಾರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರುಗಳಿಗೆ ಸಹಾಯಕ್ಕೆ ಬರುವ ಇ.ಎಸ್.ಐ ಯೋಜನೆ ಮಾಲೀಕರು ಹಾಗೂ ನೌಕರರಿಗೆ ಚಿಂತೆಯಿಂದ ಮುಕ್ತಗೊಳಿಸುವ ಅನುಪಮ ಯೋಜನೆಯ ಇನ್ನೊಂದು ಹೆಸರೇ 'ಆಪತ್‌ಬಂಧು.' ಅದಕ್ಕೆ ಇ.ಎಸ್.ಐ. ಇಲಾಖೆಯು ನೀಡುವ ಫಲಾನುಭವ ಹಾಗೂ ಸೌಲಭ್ಯಗಳೇ ಕಾರಣ.

**ಪ್ರಶ್ನೆ: ಇ.ಎಸ್.ಐ ವಿಮಾದಾರರಿಗೆ ಸಿಗುವ ಪ್ರಮುಖ ಸೌಲಭ್ಯಗಳೆಷ್ಟು?**

**ಉತ್ತರ:** ಇ.ಎಸ್.ಐ ಲಾಂಛನ ಪಂಚದೀಪವೇ ಸೂಚಿಸುವಂತೆ ಪ್ರಮುಖವಾಗಿ ಐದು ಫಲಾನುಭವಗಳನ್ನು ಇ.ಎಸ್.ಐ ನೀಡುತ್ತದೆ. ವಿಮಾದಾರರು ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರುಗಳಿಗೆ ನಗದು ಹಾಗೂ ವೈದ್ಯಕೀಯ ಹಿತಲಾಭಗಳನ್ನು ಕೊಡುವುದರ ಜೊತೆಗೆ ಚಿಕ್ಕ ಪುಟ್ಟ ಸೌಲಭ್ಯಗಳೂ ದೊರಕುತ್ತವೆ.

**ಪ್ರಶ್ನೆ: ಪ್ರಮುಖವಾದ ಐದು ಫಲಾನುಭವಗಳನ್ನು ಒಂದೊಂದಾಗಿ ವಿವರಿಸಿ ಹೇಳ್ತೀರಾ?**

**ಉತ್ತರ:** ಅವಶ್ಯವಾಗಿ ಹೇಳ್ತೀನಿ. ಅಷ್ಟೇ ಅಲ್ಲ ಈ ನನ್ನ ಕಿರುಹೊತ್ತಿಗೆಯ ರಚನೆಯ ಮುಖ್ಯ ಉದ್ದೇಶವೂ ಇದುವೇ ಆಗಿದೆ. ಭಾರತ ಸರ್ಕಾರ ಕಾರ್ಮಿಕ ಹಾಗೂ ಉದ್ಯೋಗ ಇಲಾಖೆಯು 6 ದಶಕಗಳ ಹಿಂದೆ ಆರಂಭಿಸಿದ ಈ ಯೋಜನೆಯ ಕೇಂದ್ರ ಬಿಂದು 'ಸಾಮಾಜಿಕ ಸುರಕ್ಷೆ.' ಇದರಲ್ಲಿ ಮೊದಲನೆಯದು ವೈದ್ಯಕೀಯ ಫಲಾನುಭವ. ಇ.ಎಸ್.ಐ

ವಿಮಾದಾರನ ಇಡೀ ಕುಟುಂಬಕ್ಕೆ ಸಂಪೂರ್ಣ ವೈದ್ಯಕೀಯ ಸೌಲಭ್ಯ ಕಲ್ಪಿಸಿಕೊಡುವುದಕ್ಕೆ ವೈದ್ಯಕೀಯ ಫಲಾನುಭವ ಎಂದು ಕರೆಯುತ್ತಾರೆ.

**ಪ್ರಶ್ನೆ: ಇಡೀ ಕುಟುಂಬಕ್ಕೇನೇ ವೈದ್ಯಕೀಯ ಸೌಲಭ್ಯ ಅಂತ ಗೊತ್ತಾಯ್ತು. ಕುಟುಂಬದ ಸದಸ್ಯರು ಅಂದರೆ ಯಾರ್‍ಯಾರು ? ಸ್ವಲ್ಪ ಬಿಡಿಸಿ ಹೇಳ್ತೀರಾ ?**

**ಉತ್ತರ:** ಇ.ಎಸ್.ಐ ವ್ಯಾಖ್ಯೆಯಲ್ಲಿ ಕುಟುಂಬವೆಂದರೆ, ವಿಮಾದಾರನ ಅವಲಂಬಿತ ಕುಟುಂಬದ ಸದಸ್ಯರು ಅಂತ. ಅರ್ಥಾತ್ ವಿಮಾದಾರನ ತಂದೆ, ತಾಯಿ, ವಿವಾಹವಾಗಿದ್ದರೆ, ಹೆಂಡತಿ ಹಾಗೂ 21 ವರ್ಷದವರೆಗಿನ ಮಕ್ಕಳು. ಹೀಗಿರುವಾಗ ಮಕ್ಕಳು ಇಪ್ಪತ್ತೊಂದು ವರ್ಷ ಪೂರೈಸುವ ಮೊದಲೇ ವಿವಾಹವಾದರೆ ಅಂದರೆ ಮದುವೆ ಮಾಡಿಕೊಂಡರೆ, ಅವರು ಕುಟುಂಬದಿಂದ ಹೊರಗೆ ಉಳಿಯುತ್ತಾರೆ. ಉದಾ: ಮಗನಿಗೆ 20 ನೇ ವಯಸ್ಸಿಗೆ ಮದುವೆಯಾದರೆ, ಅವನು ಕುಟುಂಬದ ಘಟಕದಿಂದ ಹೊರಗೆ ಹೋಗುತ್ತಾನೆ. ಮಗಳೂ ಅಷ್ಟೇ 19ನೆಯ ವಯಸ್ಸಿಗೆ ಮದುವೆ ಮಾಡಿಕೊಂಡರೆ ಆಕೆಯು ವಿಮಾದಾರ ಅಂದರೆ ತಂದೆಯ ಕುಟುಂಬದಿಂದ ಹೊರಗೆ ಉಳಿಯುತ್ತಾಳೆ. ಇನ್ನು ವಿಮಾದಾರಳ ವಿಷಯಕ್ಕೆ ಬರೋಣ. ವಿಮಾದಾರಳಾದ ಆಕೆ, ಆಕೆಯ ತಂದೆ-ತಾಯಿ, ವಿವಾಹವಾಗಿದ್ದರೆ, ಗಂಡ ಮತ್ತು 21 ನೆಯ ವರ್ಷದವರೆಗಿನ ವಯಸ್ಸಿನ ಮಕ್ಕಳು. ಮೇಲೆ ತಿಳಿಸಿದ ನಿಯಮ ಇಲ್ಲಿಯೂ ಅನ್ವಯವಾಗುತ್ತದೆ. ಅಂದರೆ, 21 ವರ್ಷ ವಯಸ್ಸು ಅಥವಾ ವಿವಾಹ ಇದರಲ್ಲಿ ಯಾವುದು ಮೊದಲು ಆಗುತ್ತದೆಯೋ ಅದು. ನೆನಪಿರಲಿ, ವಿಮಾದಾರ ಅಥವಾ ವಿಮಾದಾರಳು ಇಬ್ಬರ ಸಂದರ್ಭದಲ್ಲಿಯೂ ಅಕ್ಕ-ತಂಗಿ ಮತ್ತು ಅಣ್ಣ-ತಮ್ಮಂದಿರು ಬರುವುದಿಲ್ಲ ಎನ್ನುವ ವಿಷಯವನ್ನು ಗಮನಿಸಬೇಕು. ಕೆಲವು ಸಂದರ್ಭಗಳಲ್ಲಿ ವಿಮಾದಾರರು ಆಸರೆ ಬಯಸಿ ಬಂದ ವಿಧವೆ ಅಕ್ಕ-ತಂಗಿಯನ್ನು ಕುಟುಂಬದಲ್ಲಿ ಇರಿಸಿಕೊಂಡು ಅವರಿಗೆ ಆಸರೆ ಕೊಡುತ್ತಿರುವ ಪರಂಪರೆ ಇದೆ. ಅದು ಅವರ ವೈಯಕ್ತಿಕ ವಿಚಾರ ಹಾಗೇಂತ ಇ.ಎಸ್.ಐ. ಕಾರ್ಡಿನಲ್ಲಿ ಅವರ ಹೆಸರನ್ನು ಸೇರಿಸಲಾಗದು.

**ಪ್ರಶ್ನೆ: ಇ.ಎಸ್.ಐ ವ್ಯಾಖ್ಯೆಯಲ್ಲಿ ಕುಟುಂಬದ ಇತಿ–ಮಿತಿಯನ್ನು ತಿಳಿಸಿಕೊಟ್ಟಿರಿ. ಇದರಲ್ಲಿ ಏನಾದರೂ ಸಡಿಲಿಕೆ ಉಂಟೆ ?**

**ಉತ್ತರ:** ಇದೊಂದು ಅತ್ಯುತ್ತಮ ಪ್ರಶ್ನೆ. ವಿಶೇಷ ಸಂಧರ್ಭದಲ್ಲಿ ಸಡಿಲಿಕೆಗೆ ಅವಕಾಶವಿದೆ. ಮಗಳು ವಿವಾಹವಾಗದೇ, ಇದ್ದು, ಓದು–ಅಧ್ಯಯನದಲ್ಲಿ ತೊಡಗಿದ್ದರೆ 25 ವರ್ಷ ವಯಸ್ಸಿನವರೆಗೂ ಕುಟುಂಬದ ಅವಲಂಬಿತ ಸದಸ್ಯಳಾಗಿ ಮುಂದುವರೆಯುವುದಕ್ಕೆ ಅವಕಾಶವಿದೆ. ಈ ವಿಶೇಷ ಸಡಿಲಿಕೆಗೆ ಮುಖ್ಯ ಕಾರಣ ಮಹಿಳಾ ಶಿಕ್ಷಣಕ್ಕೆ ಆದ್ಯತೆ ಕೊಡುವುದರ ಜೊತೆಗೆ ಮಹಿಳಾ ಸಬಲೀಕರಣಕ್ಕೆ ಒತ್ತು ಕೊಡುವುದೇ ಆಗಿದೆ. ತಂದೆ–ತಾಯಿಗಳು ಹೆಣ್ಣುಮಕ್ಕಳಿಗೆ ಉಚ್ಚ ಶಿಕ್ಷಣ ನೀಡಲು ಇದೊಂದು ಪ್ರೇರಣೆಯ ಅಂಶವಾಗಿದೆ.

**ಪ್ರಶ್ನೆ: ವಿಮಾದಾರನ ಅಣ್ಣ–ತಮ್ಮ, ಅಕ್ಕ–ತಂಗಿಗೆ ಕುಟುಂಬದ ಸದಸ್ಯರಾಗಿರಲು ಅವಕಾಶವೇ ಇಲ್ಲವೇ ?**

**ಉತ್ತರ:** ಇದೆ. ವಿಶೇಷ ಸಂದರ್ಭದಲ್ಲಿ ಅವಕಾಶ ಕಲ್ಪಿಸಲಾಗಿದೆ. ವಿಮಾದಾರರು ಅವಿವಾಹಿತರಾಗಿದ್ದು ಅವರ ತಂದೆ–ತಾಯಿಗಳು ತೀರಿಹೋದ ಸಂದರ್ಭದಲ್ಲಿ ತಬ್ಬಲಿ ಸಹೋದರ ಸಹೋದರಿಯರಿಗೆ ಆಸರೆ ಕೊಡುವ ಜವಾಬ್ದಾರಿ ನೈತಿಕವಾಗಿ ಅಣ್ಣ ಅಥವಾ ಅಕ್ಕನ ಪಾಲಿಗೆ ಬರುತ್ತದೆ. ಹೀಗಾಗಿ ಅಂತಹ ಸಂದರ್ಭದಲ್ಲಿ ಸಹೋದರ ಸಹೋದರಿಯರು 21 ವರ್ಷ ವಯಸ್ಸು ಆಗುವವರೆಗೆ ಅವರ ಅವಲಂಬಿತ ಕುಟುಂಬದ ಸದಸ್ಯರಾಗಿ ಮುಂದುವರೆಯುವುದಕ್ಕೆ ಇ.ಎಸ್.ಐ ಕಾನೂನಲ್ಲಿ ಅವಕಾಶ ಉಂಟು.

**ಪ್ರಶ್ನೆ: ಈಗ ನನ್ನ ಮುಂದಿನ ಪ್ರಶ್ನೆ ವೈದ್ಯಕೀಯ ಸೌಲಭ್ಯದಲ್ಲಿ ತಗಲುವ ವೆಚ್ಚಕ್ಕೆ ಏನಾದರೂ ಗರಿಷ್ಟ ಮಿತಿ ಉಂಟೆ?**

**ಉತ್ತರ:** ಇಲ್ಲಿಯೇ ಇರುವುದು ನೋಡಿ ಈ 'ಸಾಮಾಜಿಕ ಸುರಕ್ಷಾ' ಯೋಜನೆಯ ಸೌಂದರ್ಯ. ವೈದ್ಯಕೀಯ ಸೌಲಭ್ಯದ ವಿಷಯದಲ್ಲಿ

ಯಾವುದೇ ಮಿತಿ ಇರುವುದಿಲ್ಲ. ಆಕಾಶವೇ ಇದರ ಮಿತಿ. ಇದರಲ್ಲಿ ತೆರೆದ ಹೃದಯ ಶಸ್ತ್ರ ಚಿಕಿತ್ಸೆಯಂತಹ ದುಬಾರಿ ಸೌಲಭ್ಯಗಳೂ ಇವೆ.

**ಪ್ರಶ್ನೆ: ವಿಮಾದರ ಎಷ್ಟು ದಿನಗಳ ನಂತರ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ಅರ್ಹನಾಗುತ್ತಾನೆ** ?

**ಉತ್ತರ:** ಇ.ಎಸ್.ಐ ವಿಮಾದಾರನಾಗಿದ್ದು ಕನಿಷ್ಟ 2 ವರ್ಷಗಳವರೆಗೆ ಸೇವೆ ಸಲ್ಲಿಸಿ 156 ದಿನಗಳ ವಂತಿಗೆಯನ್ನು ಸಲ್ಲಿಸಿದ್ದರೆ ಸಾಕು. ಮುಂದುವರೆದ ಕಾಯಿಲೆಯ ನಿಯಮದನ್ವಯ 34 ಕಾಯಿಲೆಗಳಿಗೆ ಗುಣಮುಖವಾಗುವರೆಗೆ ಅಥವಾ ಗರಿಷ್ಟ 3 ವರ್ಷಗಳವರೆಗೆ ವಿಮಾದಾರರು ಸೇರಿ ಅವಲಂಬಿತ ಕುಟುಂಬದ ಸದಸ್ಯರುಗಳು ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ಅವಕಾಶವಿದೆ. ಆಸ್ಪತ್ರೆಗೆ ದಾಖಲಾಗದೇ ಸಾಮಾನ್ಯ ರೋಗಿಯಾಗಿ ಇ.ಎಸ್.ಐ. ಚಿಕಿತ್ಸಾಲಯ ಹಾಗೂ ಆಸ್ಪತ್ರೆಯಲ್ಲಿ ಔಷಧಿ ಪಡೆಯುವುದು ವಿಮಾದಾರನಾದ ದಿನದಿಂದಲೇ ಆರಂಭವಾಗುತ್ತದೆ. ವಿಶೇಷ ಶುಶ್ರೂಷೆಯ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳುವುದಕ್ಕೆ ಮಾತ್ರ ಎರಡು ವರ್ಷ ಕಾಯಬೇಕು.

**ಪ್ರಶ್ನೆ: ವಿಮಾದಾರನ ಕುಟುಂಬದ ಸದಸ್ಯರು ಬೇರೆ ಊರು ಅಥವಾ ಬೇರೆ ರಾಜ್ಯದಲ್ಲಿ ವಾಸವಾಗಿದ್ದರೆ ಇ.ಎಸ್.ಐ ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗ್ತಾರಲ್ಲ? ಇದಕ್ಕೇನಾದರೂ ವ್ಯವಸ್ಥೆ ಇದೆಯೆ** ?

**ಉತ್ತರ:** ವ್ಯವಸ್ಥೆ ಇದೆ. ಇ.ಎಸ್.ಐ ನ ಇನ್ನೊಂದು ಪ್ರಮುಖ ಘೋಷಣಾ ವಾಕ್ಯ ಗೊತ್ತೆ ನಿಮಗೆ ? 'ಕಹೀಂ ಭೀ, ಕಭೀ ಭಿ' ಅಂದರೆ, ಎಲ್ಲೆಂದರಲ್ಲಿ, ಯಾವಾಗ ಬೇಕಿದ್ರೆ ಆವಾಗ ಅಂತ ದೇಶದ ಉದ್ದಗಲದಲ್ಲೆಲ್ಲ ವಿಮಾದಾರರು ಹಾಗೂ ಅವನ ಕುಟುಂಬದ ಸದಸ್ಯರು ವೈದ್ಯಕೀಯ ಸೌಲಭ್ಯವನ್ನು ಪಡೆದುಕೊಳ್ಳಲು ಅವಕಾಶವಿದೆ. ಆದ್ದರಿಂದಲೇ ಇ:ಪೆಹಚಾನ್ ಕಾರ್ಡನ್ನು ದ್ವಿಪ್ರತಿಯಲ್ಲಿ ಪಡೆದುಕೊಂಡು ವಿಮಾದಾರ ತನ್ನ ಹತ್ರ ಒಂದನ್ನು ಮತ್ತೆ ಇನ್ನೊಂದನ್ನು ಬೇರೆ ಊರುಗಳಲ್ಲಿ ವಾಸವಾಗಿರುವ

ತನ್ನ ಅವಲಂಬಿತ ಕುಟುಂಬದ ಸದಸ್ಯರಿಗೆ ಕೊಟ್ಟರೆ ಸಾಕು. ಅವರು ತಮಗೆ ಹತ್ತಿರವಿರುವ ಇ.ಎಸ್.ಐ ಚಿಕಿತ್ಸಾಲಯ, ಆಸ್ಪತ್ರೆ ಹಾಗೂ ಇ.ಎಸ್.ಐ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಂಡ ಆಸ್ಪತ್ರೆಗಳಲ್ಲಿ ಧಾರಾಳವಾಗಿ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ಅವಕಾಶ ಉಂಟು.

**ಪ್ರಶ್ನೆ: ಇ.ಎಸ್.ಐ ಚಿಕಿತ್ಸಾಲಯ, ಆಸ್ಪತ್ರೆ ಹಾಗೂ ಇ.ಎಸ್.ಐ. ಇಲಾಖೆಯೊಂದಿಗೆ ಒಡಂಬಡಿಕೆಗೆ ಒಳಪಟ್ಟ ಆಸ್ಪತ್ರೆಗಳು ಅವರು ವಾಸವಾಗಿರುವ ಮನೆಯಿಂದ ದೂರದಲ್ಲಿದ್ದು ಅಕಸ್ಮಾತ್ ಕುಟುಂಬದ ಸದಸ್ಯರಿಗೆ ತುರ್ತಾಗಿ ವೈದ್ಯಕೀಯ ನೆರವು ಬೇಕೆನಿಸಿದಾಗ ಅನಿವಾರ್ಯವಾಗಿ ವಿಮಾದಾರ ಕೈಯಿಂದ ಖರ್ಚು ಮಾಡಬೇಕಾಗಿ ಬರುತ್ತದೆ. ಅಲ್ಲವೆ ? ಇ.ಎಸ್.ಐ. ಕಾರ್ಡ್ ಹೊಂದಿದ್ದರೂ ಪ್ರಯೋಜನವಾಗುವುದಿಲ್ಲ. ಇತ್ತ ಸಂಬಳದಿಂದ ಇ.ಎಸ್.ಐ. ವಂತಿಗೇನೂ ಕಟ್ಟಬೇಕು. ಹಾಗೇನೇ ತುರ್ತು ಸಂದರ್ಭದಲ್ಲಿ ಕೈಯಿಂದ ಖರ್ಚೂ ಮಾಡಬೇಕು!**

**ಉತ್ತರ:** ಯಾರು ನಿಮಗೆ ಹಾಗೇಂತ ಹೇಳಿದ್ದು ? ಇ.ಎಸ್.ಐ ನ ಒಂದು ಪ್ರಮುಖ ಘೋಷಣೆ ಇದೆ. 'ಚಿಂತಾ ಸೇ ಮುಕ್ತಿ' ಅಂದರೆ, 'ಚಿಂತೆಯಿಂದ ಮುಕ್ತಿ' ಎಂಬುವುದು ಇದರ ಅರ್ಥ. ನಾನು ಹೇಳಿದ್ದು ಸಾಮಾನ್ಯ ಸಂದರ್ಭಗಳ ವಿಷಯ. ತುರ್ತು ಸಂದರ್ಭದಲ್ಲಿ ವಿಮಾದಾರ ತನ್ನ ಮನೆಗೆ ಹತ್ತಿರವಿರುವ ಮತ್ತು ತನಗೆ ಉತ್ತಮವೆನ್ನಿಸುವ ಯಾವುದೇ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಶುಶ್ರೂಷೆ ಪಡೆದುಕೊಳ್ಳಬಹುದು. ಉದಾಹರಣೆಗೆ: ಅಕಸ್ಮಾತ್ ಮಧ್ಯರಾತ್ರಿಯ ಸಮಯ ಇದ್ದಕ್ಕಿದ್ದಂತೆ ವಿಮಾದಾರನ ತಂದಗೆ ಎದೆ ನೋವು ಕಾಣಿಸಿಕೊಂಡಿತು ಎಂದಿಟ್ಟುಕೊಳ್ಳೋಣ. ಉಸಿರೇ ನಿಂತು ಹೋದ ಅನುಭವ ಅವರ ತಂದೆಗೆ ಲಘು ಹೃದಯಾಘಾತವಾಯಿತು ಎಂದಿಟ್ಟುಕೊಳ್ಳೋಣ. ಆಸ್ಪತ್ರೆಗೆ ಸಾಗಿಸದಿದ್ದರೆ ಪ್ರಾಣಕ್ಕೇನೆ ಅಪಾಯ ಎಂಬುದರಲ್ಲಿ ಎರಡು ಮಾತಿಲ್ಲ. ಒಂದು ಕಡೆಗೆ ಮಧ್ಯರಾತ್ರಿ, ಇನ್ನೊಂದು ಕಡೆಗೆ ಇ.ಎಸ್.ಐ ಗೆ ಸೇರಿದ

ಅಥವಾ ಒಡಂಬಡಿಕೆಗೆ ಒಳಪಟ್ಟ ಆಸ್ಪತ್ರೆಗಳು ಹತ್ತಿರದಲ್ಲಿಲ್ಲ, ಹೀಗಾಗಿ ವಿಮಾದಾರನು ಜನ್ಮ ಕೊಟ್ಟ ತಂದೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಮನೆಗೆ ಹತ್ತಿರವಿರುವ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾನೆ. ಆಗ ಅವನಿಗೆ ಹಣಕ್ಕಿಂತ ಮುಖ್ಯ ಜನ್ಮ ಕೊಟ್ಟ ತಂದೆಯ ಪ್ರಾಣ ಮುಖ್ಯವಾಗಿರುತ್ತದೆ. ಹೀಗಾಗಿ ತಕ್ಷಣವೇ ಹೃದಯ ಸಂಬಂಧಿ ಕಾಯಿಲೆಗಾಗಿ ಇರುವ ಯಾವುದೇ ಆಸ್ಪತ್ರೆಗೆ ಸೇರಿಸಿ ಆರೈಕೆ ಪಡೆದುಕೊಳ್ಳಲು ಮುಂದಾಗುತ್ತಾನೆ. ಹೀಗೆ ಮಾಡಬೇಕಾದುದು ಅವನ ಕರ್ತವ್ಯವೂ ಕೂಡ ಹೌದು. 'ಪಿತೃ ದೇವೋ ಭವಃ' ಸಂಸ್ಕಾರದಲ್ಲಿ ಬೆಳೆದ ಅವನು ಹಣದ ಮುಖ ನೋಡುವುದಿಲ್ಲ. ಸಾಲವನ್ನಾದರೂ ಮಾಡಿ ತಂದೆಯ ಪ್ರಾಣ ರಕ್ಷಣೆಗೆ ಮುಂದಾಗುತ್ತಾನೆ. ಹಣವನ್ನು ಮತ್ತೆ ಸಂಪಾದಿಸಬಹುದು, ಆದರೆ ತಂದೆಯ ಪ್ರಾಣವನ್ನು? ಹೀಗಾಗಿ ಅವನ ಅಂತರಾತ್ಮದ ನುಡಿಗೆ ಓಗೊಡುತ್ತಾನೆ.

ವಿಮಾದಾರ ತನ್ನ ಕುಟುಂಬದ ಅವಲಂಬಿತ ಸದಸ್ಯರನ್ನು ತುರ್ತು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಾತಿ ಮಾಡಿ ಆರೈಕೆ ಮಾಡಿಸಿಕೊಳ್ಳಲು ಇ.ಎಸ್.ಐ ನಿಯಮದಲ್ಲಿ ಅವಕಾಶವಿದೆ. ಆದರೆ ಒಂದು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಆಸ್ಪತ್ರೆಗೆ ಸೇರಿಸಿದ 24 ಗಂಟೆಯ ಒಳಗಾಗಿ ಈ ವಿಷಯವನ್ನು ಸಂಬಂಧಪಟ್ಟ ಇ.ಎಸ್.ಐ ಚಿಕಿತ್ಸಾಲಯದ ವಿಮಾ ವೈದ್ಯಾಧಿಕಾರಿಗಳ ಗಮನಕ್ಕೆ ತರಬೇಕು ತದನಂತರ ಚಿಕಿತ್ಸಾ ವೆಚ್ಚವನ್ನು ವಿಮಾದಾರ ಖಾಸಗಿ ಆಸ್ಪತ್ರೆಗೆ ಸಂದಾಯ ಮಾಡಿ ಚಿಕಿತ್ಸೆ ಮುಗಿದ ನಂತರ ರೋಗಿಯನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿಸಿಕೊಂಡು ಬಂದು ಸಂದಾಯ ಮಾಡಿದ ಎಲ್ಲಾ ರಸೀದಿ ಸಹಿತ ವೈದ್ಯರು ಬರೆದುಕೊಟ್ಟ ಚೀಟಿ, ದಾಖಲಿಸಿದ ಪ್ರಮಾಣ ಪತ್ರ, ಬಿಡುಗಡೆಗೊಳಿಸಿದ ಪ್ರಮಾಣ ಪತ್ರದ ಮೂಲ ಪ್ರತಿಗಳನ್ನು ಹಾಗೂ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಿಂದ ಸೇವಾ ಪ್ರಮಾಣಪತ್ರ ಪಡೆದುಕೊಂಡು ಇ:ಪೆಹಚಾನ ಕಾರ್ಡಿನ ಪ್ರತಿಯನ್ನು ಲಗತ್ತಿಸಿ ಹಣ ಮರುಪಾವತಿ ಮಾಡುವಂತೆ

ವಿನಂತಿಸಿಕೊಂಡು ಅಗ್ರೇಷಣ ಪತ್ರದೊಂದಿಗೆ ಸಂಬಂಧಪಟ್ಟ ಇ.ಎಸ್.ಐ ಚಿಕಿತ್ಸಾಲಯಕ್ಕೆ ಪ್ರಸ್ತುತ ಪಡಿಸಬೇಕು. ಇ.ಎಸ್.ಐ ಇಲಾಖೆಯು ಪರಿಶೀಲಿಸಿ ಹಣವನ್ನು ಮರುಪಾವತಿ ಮಾಡುವುದು. ಇಲ್ಲಿ ನೆನಪಿಡಬೇಕಾದ ಒಂದು ಸಂಗತಿ ಎಂದರೆ ವ್ಯಯ ಮಾಡಿದ ಸಂಪೂರ್ಣ ಹಣ ಮರುಪಾವತಿಯಾಗದೇ ಇರಲೂಬಹುದು. ಇದಕ್ಕೆ ಕಾರಣ ಮಂಜೂರಾತಿಯ ಸಂದರ್ಭದಲ್ಲಿ ಇ.ಎಸ್.ಐ ಇಲಾಖೆಯು ಕೇಂದ್ರ ಸರ್ಕಾರದ ವೈದ್ಯಕೀಯ ಸೇವೆಯ ದರಗಳನ್ನು ಆಧರಿಸಿ ಮಂಜುರಾತಿ ನೀಡುತ್ತದೆ. ಖಾಸಗಿ ಆಸ್ಪತ್ರೆಗಳ ದರಗಳು ಕೆಲವು ಸಂದರ್ಭದಲ್ಲಿ ಈ ದರಗಳಿಗಿಂತ ಹೆಚ್ಚಿಗೆ ಇರುವ ಸಾಧ್ಯತೆ ಇದೆ. ಹೀಗಾಗಿ ಖರ್ಚು ಮಾಡಿದ ಸಂಪೂರ್ಣ ಹಣ ಮರುಪಾವತಿ ಆಗದಿದ್ದರೂ ಸುಮಾರು ಶೇಕಡ 80 ರಷ್ಟು ಮರುಪಾವತಿಯಾಗುವ ಸಾಧ್ಯತೆ ಇದೆ. ಒಟ್ಟಾರೆ ಹೇಳಬೇಕೆಂದರೆ, ಇ.ಎಸ್.ಐ. ಸದಾ ವಿಮಾದಾರರ ಕಷ್ಟದಲ್ಲಿ ಭಾಗಿಯಾಗುತ್ತದೆ ಎಂದು ಹೇಳಬಹುದು.

**ಪ್ರಶ್ನೆ: ತುರ್ತು ಸಂದರ್ಭದ ಕಾಯಿಲೆಗಳು ಯಾವುವು. ಸಾಧ್ಯವಾದರೆ ತಿಳಿಸಿಕೊಡಿ.**

**ಉತ್ತರ:** ಕೇಳಿ, ಹೇಳ್ತೇನೆ. (i) ಹೃದಯಾಘಾತ (Heart Attack Cases) (ii) ರಸ್ತೆ ಅಪಘಾತ ಹಾಗೂ ಕಾರ್ಯನಿರತ ಸ್ಥಳದಲ್ಲಿ ಆಗುವ ದುರ್ಘಟನೆ (Road Accidents and Due to Employment Injury) (iii) ಶೇಕಡ ಮೂವತ್ತಕ್ಕಿಂತ ಅಧಿಕವಾಗಿರುವ ಸುಟ್ಟಗಾಯಾಳು (Burns more than 30% cases) (iv) ಹಾವು ಕಚ್ಚಿದುದಕ್ಕೆ ಚಿಕಿತ್ಸೆ (Treatment for Snake Bite) (v) ವಿಷಪ್ರಾಶನ (Poison) (vi) ಡೆಂಗ್ಯೂ ಜ್ವರಕ್ಕೆ ಚಿಕಿತ್ಸೆ (Treatment for Dengue) (vii) Ectopic Pregnancy with Tubal Rapture Cases ಈ ಏಳು ಸಂದರ್ಭದಲ್ಲಿನ

ಶುಶ್ರೂಷೆಗೆ ತಗುಲಿದ ವೆಚ್ಚದ ಬಹುಪಾಲು ಶೇಕಡ ಎಂಬತ್ತರಷ್ಟು ಹಣವನ್ನು ಮರುಪಾವತಿ ಮಾಡಲಾಗುವುದು.

**ಪ್ರಶ್ನೆ: ಅಂದರೆ ಖರ್ಚು ಮಾಡಿದ ಹಣವೆಲ್ಲಾ ಮರಳಿ ಬರುವುದಿಲ್ಲ ಎಂದಾಯಿತು?**

**ಉತ್ತರ:** ಹೌದು ಇ.ಎಸ್.ಐ ನಿಯಮದಂತೆ ವಿಮಾದಾರ ಹಾಗೂ ಅವನ ಅವಲಂಬಿತ ಕುಟುಂಬದ ಸದಸ್ಯರಿಗೆ ನೂರಕ್ಕೆ ನೂರರಷ್ಟು ವೈದ್ಯಕೀಯ ಸೌಲಭ್ಯ ನೀಡುವ ವಾಗ್ದಾನವಿದ್ದರೂ ಖಾಸಗಿ ಆಸ್ಪತ್ರೆಗಳಲ್ಲಿ ತುರ್ತು ಸಂದರ್ಭದಲ್ಲಿ ವೈದ್ಯಕೀಯ ಸೌಲಭ್ಯ ಇದಾಗಿದ್ದು ದರಗಳು ಹೆಚ್ಚಿಗೆ ಇರುವ ಸಾಧ್ಯತೆ ಇರುವುದರಿಂದ ಖರ್ಚು ಮಾಡಿದ ಸಂಪೂರ್ಣ ಹಣ ಮಂಜೂರಾಗದೇ ಇರಬಹುದು. ಉದಾ: ಖಾಸಗಿ ಆಸ್ಪತ್ರೆಯೊಂದು ಒಂದು ದಿನಕ್ಕೆ ನರ್ಸಿಂಗ್ ದರವನ್ನು 250=00 ರೂಪಾಯಿ. ನಿಗದಿಮಾಡಿದೆ ಎಂದಿಟ್ಟುಕೊಳ್ಳೋಣ ಸರ್ಕಾರದ ದರ 150=00 ರೂಪಾಯಿ ಎಂದು ಕಲ್ಪಿಸಿಕೊಳ್ಳೋಣ ಆಗ 100=00 ರೂಪಾಯಿ ಕಡಿಮೆಯಾಯಿತಲ್ಲಾ? ಇದೇ ರೀತಿ ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆಯಂತಹ ಪರೀಕ್ಷೆಯ ದರದಲ್ಲಿ ವ್ಯತ್ಯಾಸವಿರುವ ಸಾಧ್ಯತೆ ಇರುವುದರಿಂದ ಸಂಪೂರ್ಣ ಹಣ ಮರುಪಾವತಿಯಾಗುತ್ತದೆ ಎಂದು ಹೇಳಲಾಗದು.

**ಪ್ರಶ್ನೆ: ವಿಮಾದಾರ ಹಾಗೂ ಅವನ ಅವಲಂಬಿತ ಕುಟುಂಬದ ಸದಸ್ಯರಿಗೆ ವಿಮಾದಾರನಾದ ಎಷ್ಟು ದಿನಗಳ ನಂತರ ವೈದ್ಯಕೀಯ ಸೌಲಭ್ಯ ಆರಂಭವಾಗುತ್ತದೆ.?**

**ಉತ್ತರ:** ನೌಕರನೊಬ್ಬ ವಿಮಾದಾರನಾದ ದಿನದಿಂದಲೇ ತನಗೆ ಹಾಗೂ ತನ್ನ ಕುಟುಂಬದ ಸದಸ್ಯರುಗಳಿಗೆ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ಅವಕಾಶವಿದೆ. ಆದರೆ, ವಿಶೇಷ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ವಿಮಾದಾರರು ಕನಿಷ್ಠ ಪಕ್ಷ 2 ವರ್ಷ ವಿಮಾದಾರರಾಗಿದ್ದು ಒಂದೊಂದು ವಂತಿಗೆಯ ಅವಧಿಯಲ್ಲಿ 158 ದಿನಗಳ ವಂತಿಗೆಯನ್ನು ಸಲ್ಲಿಸಿರಬೇಕು.

**ಪ್ರಶ್ನೆ: ಸಾಮಾನ್ಯ ಮತ್ತು ವಿಶೇಷ ವೈದ್ಯಕೀಯ ಸೌಲಭ್ಯಗಳೆಂದರೇನು ?**

**ಉತ್ತರ:** ಆಯಾ ಶಬ್ದಗಳೇ ಸೂಚಿಸುವಂತೆ ಸಾಮಾನ್ಯವಾಗಿ ಕೆಮ್ಮು, ನೆಗಡಿ, ಸಕ್ಕರೆ ಕಾಯಿಲೆ, ರಕ್ತದ ಒತ್ತಡಗಳಂತಹ ಕಾಯಿಲೆಗಳಿಗೆ ಇ.ಎಸ್.ಐ. ಚಿಕಿತ್ಸಾಲಯ ಹಾಗೂ ಆಸ್ಪತ್ರೆಗಳಲ್ಲಿ ನಿಃಶುಲ್ಕ ಔಷಧಿ ಹಾಗೂ ಮಾತ್ರೆಗಳನ್ನು ಮೊದಲನೆಯ ದಿನದಿಂದಲೇ ವಿಮಾದಾರ ಹಾಗೂ ಅವನ ಅವಲಂಬಿತ ಕುಟುಂಬದ ಸದಸ್ಯರುಗಳಿಗೆ ವಿತರಿಸಲಾಗುತ್ತದೆ. ಇನ್ನು ವಿಶೇಷ ವೈದ್ಯಕೀಯ ಸೌಲಭ್ಯದ ಅಡಿಯಲ್ಲಿ ಶಸ್ತ್ರ ಚಿಕಿತ್ಸೆ, ಕಿಡ್ನಿ ಮರುಜೋಡಣೆಯಂತಹ ಕಾಯಿಲೆಗಳನ್ನು ವಿಶೇಷ ವೈದ್ಯಕೀಯ ಸೌಲಭ್ಯದ ಅಡಿಯಲ್ಲಿ ಸೇರಿಸಲಾಗಿದೆ ಅಥವಾ ಒಳರೋಗಿಯಾಗಿ ಆರೈಕೆ ಮಾಡಿಕೊಳ್ಳುವ ಕಾಯಿಲೆಗಳು ಎಂದರೂ ಆದೀತು.

**ಪ್ರಶ್ನೆ: ವಿಮಾದಾರ ಹಾಗೂ ಅವನ ಅವಲಂಬಿತ ಕುಟುಂಬದ ಸದಸ್ಯರುಗಳಿಗೆ ಕಾಯಿಲೆಯು ಸುದೀರ್ಘ ಅವಧಿಯವರೆಗೆ ಮುಂದುವರೆದರೆ?**

**ಉತ್ತರ:** ಕೆಲವು ಕಾಯಿಲೆಗಳು ಬೇಗ ಗುಣಮುಖವಾಗುದಿಲ್ಲ. ಅಂತಹ ಸಂದರ್ಭದಲ್ಲಿ ವಿಮಾದಾರ 2 ವರ್ಷ ವಿಮಾದಾರನಾಗಿದ್ದು ಕನಿಷ್ಠ ಪಕ್ಷ 156 ದಿನಗಳ ಇ.ಎಸ್.ಐ ಇಲಾಖೆಗೆ ವಂತಿಗೆಯನ್ನು ಸಲ್ಲಿಸಿದ್ದರೆ, ಸೂಚಿಸಲಾದ 34 ಕಾಯಿಲೆಗಳಿಗೆ ಗುಣಮುಖರಾಗುವವರೆಗೆ ಅಥವಾ 3 ವರ್ಷದ ಅವಧಿಯುವರೆಗೆ ವೈದ್ಯಕೀಯ ಸೌಲಭ್ಯವನ್ನು ಮುಂದುವರೆಸಲಾಗುವುದು.

**ಪ್ರಶ್ನೆ: ಅರೆಕಾಲಿಕ, ತಾತ್ಕಾಲಿಕ, ದಿನಗೂಲಿಯಂತಹ ನೌಕರರು ಕೇವಲ 3–4 ದಿನಗಳು ಕೆಲಸ ಮಾಡಿ ಕೆಲಸವನ್ನೇ ಬಿಟ್ಟುಬಿಡುತ್ತಾರೆ. ಅಂತಹ ಸಂದರ್ಭದಲ್ಲಿ ಅವರಿಗೆ ವೈದ್ಯಕೀಯ ಸೌಲಭ್ಯ ಸಿಗುತ್ತದೆಯೇ?**

**ಉತ್ತರ:** ಹೌದು ಸಿಗುತ್ತದೆ. ಅದರಲ್ಲಿ ಯಾವ ಸಂದೇಹವೂ ಬೇಡ. ಕೆಲಸಕ್ಕೆ ಸೇರಿದ ದಿನವೇ ಆಡಳಿತ ಮಂಡಳಿಯು ನೌಕರನಿಂದ ಇ.ಎಸ್.ಐ ನೋಂದಣಿ ಫಾರಂ–01 ನ್ನು ಭರ್ತಿ ಮಾಡಿಸಿಕೊಂಡಿರಬೇಕು. ಅದರಲ್ಲಿ

ಅವನ ಹೆಸರು, ಹುದ್ದೆ, ಕೆಲಸಕ್ಕೆ ಸೇರಿದ ದಿನಾಂಕ ಹಾಗೂ ಅವನ ಕುಟುಂಬದ ಅವಲಂಬಿತ ಸದಸ್ಯರುಗಳ ವಿವರವಿರುತ್ತದೆ. ನೋಂದಣಿಯಾದ ತಕ್ಷಣ ಆನ್‌ಲೈನ್ ಮುಖಾಂತರ ಇ-ಪೆಹಚಾನ ಕಾರ್ಡನ್ನು ಜಾರಿಗೊಳಿಸಿದ್ದರೆ ಸಾಕು. ಅಂದಿನಿಂದಲೇ ವೈದ್ಯಕೀಯ ಸೌಲಭ್ಯ ಆರಂಭವಾಗುತ್ತದೆ. ವಿಮಾದಾರ ಎಷ್ಟು ದಿನ ಕೆಲಸ ಮಾಡಿದ್ದಾನೆಯೆನ್ನುವ ವಿಷಯ ಅಪ್ರಸ್ತುತ.

**ಪ್ರಶ್ನೆ: ಅಂತೂ ವಿಮಾದಾರನ ಕುಟುಂಬದ ಎಲ್ಲ ಅವಲಂಬಿತ ಸದಸ್ಯರುಗಳಿಗೆ ನೂರಕ್ಕೆ ನೂರರಷ್ಟು ವೈದ್ಯಕೀಯ ಸೌಲಭ್ಯ ಇ.ಎಸ್.ಐ ಇಲಾಖೆಯಿಂದ ದೊರಕುತ್ತದೆ ಎಂದಾಯಿತು ಅಲ್ಲವೇ ?**

**ಉತ್ತರ:** ಈ ಮಾತು ನಿಜವಾಗಿದ್ದರೂ ಒಂದು ವಿಷಯವನ್ನು ಮಾತ್ರ ಇಲ್ಲಿ ಗಮನಿಸಿಬೇಕು. ಅವಲಂಬಿತ ಸದಸ್ಯರಾದ ತಂದೆ-ತಾಯಿಗಳು ಅವರೊಂದಿಗೆ ವಾಸಿಸುತ್ತಿರಬೇಕು ಹಾಗೂ ಅವರ ಮಾಸಿಕ ಆದಾಯ ರೂಪಾಯಿ. 5000=00ಗಿಂತ ಅಧಿಕವಾಗಿದ್ದರೆ ವೈದ್ಯಕೀಯ ಸೌಲಭ್ಯದಿಂದ ಹೊರಗೆ ಉಳಿಯುತ್ತಾರೆ. ಉದಾಹರಣೆಗೆ: ಅವರು ಸೇವೆಯಲ್ಲಿದ್ದರೆ, ಪಿಂಚಣಿದಾರರಾಗಿದ್ದರೆ ಹಾಗೂ ಬಾಡಿಗೆ ಮುಂತಾದ ಮೂಲಗಳಿಂದ ಮಾಸಿಕ 5000=00 ರೂಪಾಯಿಗಿಂತ ಅಧಿಕ ಆದಾಯ ಹೊಂದಿದ್ದರೆ, ಅವರು ಈ ಸೌಲಭ್ಯದಿಂದ ಹೊರಗೆ ಉಳಿಯುತ್ತಾರೆ ಎಂಬ ವಿಷಯವನ್ನು ಇಲ್ಲಿ ಗಮನಿಸಬೇಕು.

**ಪ್ರಶ್ನೆ: ಅವಲಂಬಿತ ಎಲ್ಲಾ ಮಕ್ಕಳಿಗೂ ವೈದ್ಯಕೀಯ ಸೌಲಭ್ಯ ಉಂಟು ಅಂತ ಆಯಿತು. ಅಲ್ಲವೇ ?**

**ಉತ್ತರ:** ಹೌದು. ಆದರೆ, ಮಕ್ಕಳಿಗೆ 21 ವರ್ಷ ವಯಸ್ಸಿನವರೆಗೆ ಹಾಗೂ ಅವಿವಾಹಿತ ಹೆಣ್ಣು ಮಕ್ಕಳು ಓದು-ಅಧ್ಯಯನದಲ್ಲಿ ತೊಡಗಿದ್ದರೆ 25 ವರ್ಷ ವಯಸ್ಸಿನವರೆಗೆ ವೈದ್ಯಕೀಯ ಸೌಲಭ್ಯ ದೊರಕುತ್ತದೆ. ಕ್ರಮಶಃ 21 ಹಾಗೂ 25ಕ್ಕೆ ಮೊದಲು ವಿವಾಹವಾದರೆ ವಿವಾಹವಾದ ದಿನದಿಂದಲೇ

ವೈದ್ಯಕೀಯ ಸೌಲಭ್ಯ ನಿಂತು ಹೋಗುತ್ತದೆ. ಅಂದರೆ, ಇ.ಎಸ್.ಐ.ನ ನಿಯಮದಂತೆ ಅವರು ವಿಮಾದಾರರ ಕುಟುಂಬದಿಂದ ಹೊರಗೆ ಉಳಿಯುತ್ತಾರೆ.

**ಪ್ರಶ್ನೆ: ಐದು ಪ್ರಮುಖ ಫಲಾನುಭವಗಳಲ್ಲಿ ವೈದ್ಯಕೀಯ ಫಲಾನುಭವದ ಬಗ್ಗೆ ತಿಳಿದುಕೊಂಡ ಮೇಲೆ ಎರಡನೇ ಫಲಾನುಭವದ ಬಗ್ಗೆ ತಿಳಿಸಿಕೊಡಿ. ಹಾಗೆಯೇ ಆ ಫಲಾನುಭವದ ಹೆಸರನ್ನು ಹೇಳಿಕೊಡಿ.**

**ಉತ್ತರ:** 'ಚಿಂತಾ ಸೇ ಮುಕ್ತಿ' ಹಾಗೂ 'ವಿಮಾದಾರ ನಮ್ಮ ಪ್ರಮುಖ ವ್ಯಕ್ತಿ'. ಎಂಬ ಘೋಷವಾಕ್ಯದ ಎರಡನೆಯ ಫಲಾನುಭವ 'ಕಾಯಿಲೆಯ ಹಿತಲಾಭ' ಎಂಬ ಶಿರೋನಾಮೆಯೊಂದಿಗೆ ಪ್ರಚಲಿತದಲ್ಲಿದೆ.

**ಪ್ರಶ್ನೆ: ವೈದ್ಯಕೀಯದಲ್ಲಿಯೇ ಕಾಯಿಲೆಯ ಫಲಾನುಭವ ಸೇರಿರುವುದರಿಂದ ಇನ್ನೇನು ಕಾಯಿಲೆಯ ಫಲಾನುಭವ ? ಯಾಕೋ ನನಗೆ ಅರ್ಥವಾಗ್ತಾ ಇಲ್ಲ.**

**ಉತ್ತರ:** ಹೇಳ್ತೀನಿ ಕೇಳಿ. ಇದು ಕೇವಲ ವಿಮಾದಾರನಿಗೆ ಸಂಬಂಧಪಟ್ಟ ವಿಷಯವಿದು ಕಾಯಿಲೆಯು ಯಾರಿಗೂ ಹೇಳಿ ಕೇಳಿ ಬರುವುದಿಲ್ಲ. ನೌಕರನು ಕಾಯಿಲೆಯಿಂದ ಬಳಲುತ್ತಿದ್ದು ಕೆಲಸಕ್ಕೆ ಹೋಗಲಾಗದೇ ಆರೈಕೆಗಾಗಿ ವೈದ್ಯರಲ್ಲಿಗೆ ಹೋಗುತ್ತಾನೆ. ರೋಗಿಯನ್ನು ಪರೀಕ್ಷಿಸಿದ ವೈದ್ಯರು ಕಾಯಿಲೆಯ ಪ್ರಮಾಣವನ್ನು ಅರಿತು ವಿಶ್ರಾಂತಿಗಾಗಿ ಸೂಚಿಸುತ್ತಾರೆ. ಇ.ಎಸ್.ಐ ವೈದ್ಯಾಧಿಕಾರಿಗಳ ಶಿಫಾರಸಿನ ಮೇರೆಗೆ ಅವರು ಸೂಚಿಸಿದ ಅವಧಿಯವರೆಗೆ ಅವನು ಕೆಲಸದಿಂದ ಗೈರುಹಾಜರಾಗುತ್ತಾನೆ. ಶಿಫಾರಸಿನ ಪತ್ರವನ್ನು ಲಗತ್ತಿಸಿ ವಿಮಾದಾರ ತನ್ನ ಸಂಸ್ಥೆಯ ಆಡಳಿತ ಮಂಡಳಿಗೆ ರಜೆಗಾಗಿ ಪತ್ರ ಬರೆದು ಕೊಡುತ್ತಾನೆ. ಇದರ ಆಧಾರದ ಮೇಲೆ ಅವನ ಹಾಜರಿ ಪುಸ್ತಕದಲ್ಲಿ ಮಾಲೀಕರು ಅವನ ಹೆಸರಿನ ಮುಂದೆ 'ಅನಾರೋಗ್ಯದ ಕಾರಣ ಇ.ಎಸ್.ಐ. ರಜೆ (ESI Leave on Medical Ground) ರಜೆಯಂದು ಬರೆಯುತ್ತಾರೆ ಹಾಗೂ ಆ ಅವಧಿಗೆ ಸಂಬಳ ಬಟವಾಡೆ ಮಾಡುವುದಿಲ್ಲ.

**ಪ್ರಶ್ನೆ: ಅಂದರೆ, ಇ.ಎಸ್.ಐ ರಜೆಯ ಅವಧಿಯಲ್ಲಿ ಅವನು ಸಂಬಳದಿಂದ ವಂಚಿತನಾಗುತ್ತಾನೆ. ಒಂದು ಕಡೆಗೆ ಕುಟುಂಬ ನಿರ್ವಹಣೆ ಅವನಿಗೆ ಕಷ್ಟದಾಯಕವಾಗುತ್ತದೆ. ಇನ್ನೊಂದು ಕಡೆಗೆ ಆರೋಗ್ಯ ಸರಿಯಾಗಿ ಇಲ್ಲದ ಕಾರಣ ಅವನು ಚಿಂತಾಕ್ರಾಂತನಾಗುತ್ತಾನೆ?**

**ಉತ್ತರ:** 'ಚಿಂತಾ ಸೇ ಮುಕ್ತಿ'. ಘೋಷಣೆಗೆ ತಕ್ಕಂತೆ ಇ.ಎಸ್.ಐ ಕಾರ್ಮಿಕರಿಗಾಗಿ ಸಾಮಾಜಿಕ ಸುರಕ್ಷೆ ನೀಡುವ ವಾಗ್ದಾನ ಮಾಡಿದೆ. ಹೀಗಿರುವಾಗ ಅವರನ್ನು ಚಿಂತೆಗೀಡು ಮಾಡುವ ಪ್ರಶ್ನೆಯೇ ಬರುವುದಿಲ್ಲ. ನೌಕರನು ಕಾಯಿಲೆಯಿಂದ ಬಳಲುತ್ತಿರುವ ಅವಧಿಯಲ್ಲಿ ಆಡಳಿತ ಮಂಡಳಿ ಸಂಬಳ ಬಟವಾಡೆ ಮಾಡುವುದಿಲ್ಲವಾದರೂ ಇ.ಎಸ್.ಐ ವೈದ್ಯಾಧಿಕಾರಿಗಳ ಶಿಫಾರಸ್ಸಿನ ಆಧಾರದ ಮೇಲೆ ಅವನ ಸಂಬಳದ ಶೇಕಡ 70 ರಷ್ಟು ಸಂಬಳವನ್ನು ಇ.ಎಸ್.ಐ ಇಲಾಖೆ ಸಂದಾಯ ಮಾಡುತ್ತದೆ. ವೈದ್ಯಕೀಯ ಸೌಲಭ್ಯವಂತೂ ಇದ್ದೇ ಇದೆ. ಹೀಗಾಗಿ ನೌಕರನು ಯಾವ ಯೋಚನೆಯನ್ನೂ ಮಾಡಬೇಕಾದುದಿಲ್ಲ. ಅವನ ಚಿಂತೆಯ ಭಾರವನ್ನು ಇ.ಎಸ್.ಐ. ಹೊತ್ತುಕೊಂಡಿರುವಾಗ ಅವನೇಕೆ ಚಿಂತಿಸಬೇಕು ?

**ಪ್ರಶ್ನೆ: ಮುಂದುವರೆದ ಕಾಯಿಲೆಯ ಫಲಾನುಭವ ಅಂತಾ ಹೇಳ್ತಾರಲ್ಲ ಅದೇನು?**

**ಉತ್ತರ:** ಇ.ಎಸ್.ಐ ಅಧಿನಿಯಮ 1948 ರ ಪರಿಚ್ಛೇದ 99 ರ ಅಡಿಯಲ್ಲಿ ವಿಶೇಷ ವೈದ್ಯಕೀಯ ಸೌಲಭ್ಯ ನೀಡಲು ಅವಕಾಶ ಕಲ್ಪಿಸಲಾಗಿದೆ. ವಿಮಾದಾರನೊಬ್ಬ ಕನಿಷ್ಠಪಕ್ಷ ಎರಡು ವರ್ಷಗಳವರೆಗೆ ನಿರಂತರ ವಿಮಾದಾರನಾಗಿದ್ದು ಕನಿಷ್ಠ ಪಕ್ಷ 156 ದಿನಗಳ ಇ.ಎಸ್.ಐ ವಂತಿಗೆಯನ್ನು ಸಲ್ಲಿಸಿದ್ದರೆ, ಸೂಚಿಸಲ್ಪಟ್ಟ 34 ಕಾಯಿಲೆಗಳಿಗೆ 309 ದಿನಗಳವರೆಗೆ ಹಾಗೂ ವೈದ್ಯಕೀಯ ಮಂಡಳಿಯ ಶಿಫಾರಸಿನ ಮೇರೆಗೆ 730 ದಿನಗಳ ಕಾಲಾವಧಿಯವರೆಗೆ ವೈದ್ಯಕೀಯ ಚಿಕಿತ್ಸೆ ನೀಡಲಾಗುವುದು. ಇದರ ಜೊತೆಗೆ ವಿಮಾದಾರನಿಗೆ ಅವನ ಸಂಬಳದ ಶೇಕಡ 70 ರಷ್ಟು ಹಣವನ್ನು

ಇ.ಎಸ್.ಐ ಸಂದಾಯ ಮಾಡುವುದು. ಈ ಅವಧಿಯಲ್ಲಿ ಕೇವಲ ವಿಮಾದಾರ ಮಾತ್ರವಲ್ಲದೇ ಅವನ ಕುಟುಂಬದ ಅವಲಂಬಿತ ಸದಸ್ಯರುಗಳು ಕೂಡ ಇ.ಎಸ್.ಐ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ಅವಕಾಶವಿದೆ.

**ಪ್ರಶ್ನೆ: ಮುಂದುವರೆದ ಕಾಯಿಲೆಯ ನಂತರ ಗುಣಮುಖವಾಗಿ ಕೆಲಸಕ್ಕೆ ಸೇರಿದ ನಂತರ ಫಲಾನುಭವಗಳು ಮುಂದುವರೆಯುತ್ತವೆಯೇ?**

**ಉತ್ತರ:** ಖಂಡಿತವಾಗಿಯೂ ಮುಂದುವರೆಯುತ್ತವೆ. ಮುಂದಿನ ಅವಧಿಯಲ್ಲಿ ಅವನು ತನ್ನ ವಂತಿಗೆಯನ್ನು ಸಲ್ಲಿಸುತ್ತಾ ಹೋಗುವುದರಿಂದ ಇ.ಎಸ್.ಐ ಸೌಲಭ್ಯದ ಎಲ್ಲಾ ಫಲಾನುಭವಗಳಿಗೂ ವಿಮಾದಾರ ಹಾಗೂ ಅವನ ಅವಲಂಬಿತ ಕುಟುಂಬದ ಸದಸ್ಯರು ಅರ್ಹರಾಗಿರುತ್ತಾರೆ. ಇದರಲ್ಲಿ ಯಾವ ಸಂಶಯವೂ ಬೇಡ.

**ಪ್ರಶ್ನೆ: ಇ.ಎಸ್.ಐ ವೈದ್ಯಕೀಯ ಸೌಲಭ್ಯ ವಿಮಾದಾರ ಹಾಗೂ ಅವನ ಅವಲಂಬಿತ ಕುಟುಂಬದ ಸದಸ್ಯರುಗಳಿಗೆ ಸೀಮಿತ ಅಲ್ಲವೇ ? ಅಂದರೆ, ವಿಮಾದಾರರನ್ನುಳಿದು ಸಮಾಜದ ಬೇರೆಯ ಜನರಿಗೆ ಇದರ ಯಾವುದೇ ಲಾಭ ಅಥವಾ ಫಲಾನುಭವ ಇಲ್ಲ ಅಲ್ವೆ ?**

**ಉತ್ತರ:** ಹಾಗೇನೂ ಇಲ್ಲ ತುರ್ತು ಸಂದರ್ಭದಲ್ಲಿ ದುರ್ಘಟನೆ ಹಾಗೂ ಪ್ರಕೃತಿ ವಿಕೋಪದಂತಹ ಪರಿಸ್ಥಿತಿಯಲ್ಲಿ ಇ.ಎಸ್.ಐ ಚಿಕಿತ್ಸಾಲಯ ಹಾಗೂ ಆಸ್ಪತ್ರೆಗಳು ವೈದ್ಯಕೀಯ ಸೌಲಭ್ಯವನ್ನು ದೇಶದ ಸಾಮಾನ್ಯ ನಾಗರೀಕರಿಗೂ ಕೂಡ ನೀಡಲಾಗುತ್ತದೆ. ಸಾಮಾನ್ಯ ನಾಗರೀಕರಿಗೆ ಪ್ರಥಮೋಪಚಾರ ಹಾಗೂ ತುರ್ತು ಚಿಕಿತ್ಸೆಯನ್ನು ಇ.ಎಸ್.ಐ ಆಸ್ಪತ್ರೆಗಳಲ್ಲಿ ನೀಡಲಾಗುವುದು. ಉದಾಹರಣೆಗೆ: ಆಕಸ್ಮಿಕ ಬೆಂಕಿ ಅಪಘಾತ, ಭೂಕಂಪ, ರಸ್ತೆ ಅಪಘಾತ ಹಾಗೂ ಕಟ್ಟಡ ಕುಸಿತದಿಂದ ಆದ ಅವಘಡದ ಸಂದರ್ಭಗಳಲ್ಲಿ ಕರೆತರಲಾದ ರೋಗಿಗಳಿಗೆ "ನೀವು ಇ.ಎಸ್.ಐ ಇ-ಪೆಹಚಾನ ಕಾರ್ಡ್ ಹೊಂದಿಲ್ಲ" ಎಂದು ಹೇಳಲಾಗದು. ಇಂತಹ ಸಂದರ್ಭದಲ್ಲಿ ಚಿಕಿತ್ಸೆ ನೀಡಿ ಸಹಕರಿಸಿದ ಸಾವಿರಾರು

ಉದಾಹರಣೆಗಳುಂಟು. ಹಾಗೆ ಮಾಡಲು ಇ.ಎಸ್.ಐ. ನಿಯಮಗಳಲ್ಲಿ ಅನುವು ಮಾಡಿಕೊಡಲಾಗಿದೆ.

**ಪ್ರಶ್ನೆ: ಸಮಯ ಸಂದರ್ಭಗಳು ಹೇಳಿ ಕೇಳಿ ಬರುವುದಿಲ್ಲ. ಅಕಸ್ಮಾತ್ ವಿಮಾದಾರ ಕೆಲಸಕ್ಕೆ ಹೋದಾಗ ದುರ್ದೈವದಿಂದ ದುರ್ಘಟನೆಗೆ ಈಡಾಗಿ ವಿಕಲಾಂಗನಾದರೆ! ಅದಕ್ಕೇನಾದರೂ ಪರಿಹಾರ ಕೊಡುವ ವ್ಯವಸ್ಥೆ ಇ.ಎಸ್.ಐ. ಯೋಜನೆಯಲ್ಲಿದೆಯೆ?**

**ಉತ್ತರ:** ನೀವೇ ಹೇಳಿದಂತೆ ಯಾವುದೂ ನಮ್ಮ ಕೈಯಲ್ಲಿ ಇಲ್ಲ. ನೆನ್ನೇ ಏನು ನಡೆದುಹೋಗಿದೆ ಅನ್ನೋದು ನಮಗೆ ಗೊತ್ತು. ಈಗೇನಾಗ್ತಾ ಇದೆ. ಅನ್ನೋದನ್ನು ನಾವು ನೋಡ್ತಾ ಇದೀವಿ. ಮುಂದಿನ ಗಳಿಗೆ ಅಥವಾ ನಾಳೆ ಏನಾಗುತ್ತೆ ಅನ್ನೋದು ನಿಗೂಢ. ಕಲ್ಪನಾತೀತ ಹಾಗೂ ಊಹೆಗೂ ನಿಲುಕದ ವಿಚಾರ. ವಿಷಯ ಹೀಗಿರುವಾಗ ಕೆಲಸಕ್ಕೆ ಹೋದ ವಿಮಾದಾರ ಹೋಗುವ ದಾರಿಯಲ್ಲಿ ಹಾಗೂ ಮರಳಿ ಮನೆಗೆ ಬರುವ ದಾರಿಯಲ್ಲಿ ಮತ್ತು ಕೆಲಸ ಮಾಡುವ ಸಂದರ್ಭದಲ್ಲಿ ದುರ್ದೈವವಶಾತ್ ದುರ್ಘಟನೆಗೆ ತುತ್ತಾದರೆ ಇ.ಎಸ್.ಐ ಚಿಕಿತ್ಸಾಲಯ ಹಾಗೂ ಆಸ್ಪತ್ರೆಗಳಲ್ಲಿ ನಿಃಶುಲ್ಕ ಚಿಕಿತ್ಸೆ ನೀಡಲಾಗುವುದು.

**ಪ್ರಶ್ನೆ: ಹೌದೆ? ಅದಕ್ಕಾಗಿ ವಿಮಾದಾರ ಎಷ್ಟು ತಿಂಗಳ ವಂತಿಗೆಯನ್ನು ಸಲ್ಲಿಸಿರಬೇಕು?**

**ಉತ್ತರ:** ಈ ಫಲಾನುಭವಕ್ಕೆ ಯಾವುದೇ ಅವಧಿ ನಿಗಧಿತವಾಗಿಲ್ಲ ವಿಮಾದಾರನಾದ ದಿನದಿಂದಲೇ ಈ ಫಲಾನುಭವಕ್ಕೆ ಅರ್ಹನಾಗಿರುತ್ತಾನೆ. ಉದಾಹರಣೆ: ಕಾರ್ಮಿಕ ಕೇವಲ ಘೋಷಣಾ ಪತ್ರವನ್ನು ಭರ್ತಿ ಮಾಡಿಕೊಟ್ಟಿದ್ದರೆ ಸಾಕು. ಅವನು ಯಾವುದೇ ವಂತಿಗೆಯನ್ನು ಸಲ್ಲಿಸದೇ ಇದ್ದರೂ ವೈದ್ಯಕೀಯ ಸೌಲಭ್ಯಕ್ಕೆ ಅರ್ಹನಾಗಿರುತ್ತಾನೆ. ನಾನು ಮೊದಲೇ ತಿಳಿಸಿದ ಹಾಗೆ ಇಲ್ಲಿಯೂ ಯಾವುದೇ ಮಿತಿಗಳಿಲ್ಲ ಗುಣಮುಖರಾಗುವವರೆಗೆ ವೈದ್ಯಕೀಯ ಸೌಲಭ್ಯವನ್ನು ನೀಡಲಾಗುತ್ತದೆ.

ಗುಣಮುಖರಾಗುವ ಅವಧಿಯವರೆಗಿನ ಸಂಬಳವನ್ನು ಅವನ ಮಂಡಳಿಯೂ ಕೊಡುವ ಅವಶ್ಯಕತೆ ಇಲ್ಲ. ಬದಲಾಗಿ ಆ ಅವಧಿಯ ಸಂಪೂರ್ಣ ಸಂಬಳವನ್ನು ಇ.ಎಸ್.ಐ. ಸಂದಾಯ ಮಾಡುತ್ತದೆ. ಈ ಹಿತಲಾಭ ಅಥವಾ ಫಲಾನುಭವಕ್ಕೆ 'ತಾತ್ಕಾಲಿಕ ಅಸಮರ್ಥತಾ ಫಲಾನುಭವ' ಎಂದು ಕರೆಯಲಾಗುತ್ತದೆ.

**ಪ್ರಶ್ನೆ: ಈ ದುರ್ಘಟನೆಯಿಂದ ವಿಮಾದಾರ ವಿಕಲಾಂಗನಾದರೆ ?**

**ಉತ್ತರ:** ಹಾಗಾಗೋದು ಬೇಡ. ಒಂದು ಪಕ್ಷ ಹಾಗೇನಾದರೂ ವಿಕಲಾಂಗನಾದರೆ ಇ.ಎಸ್.ಐ ವೈದ್ಯಕೀಯ ಮಂಡಳಿಯ ಶಿಫಾರಸ್ಸಿನ ಮೇರೆಗೆ ಅವನ ಗಳಿಕೆಯ ಪ್ರಮಾಣ ಕಡಿಮೆಯಾಗಿರುವುದನ್ನು ಆಧಾರವಾಗಿಟ್ಟುಕೊಂಡು ಜೀವನಪರ್ಯಂತ ಪಿಂಚಣಿಯನ್ನು ನೀಡಲಾಗುವುದು. ಅದಕ್ಕೆ "ಶಾಶ್ವತ ವಿಕಲಾಂಗತೆಯ ಫಲಾನುಭವ" ಎಂದು ಕರೆಯಲಾಗುತ್ತದೆ.

**ಪ್ರಶ್ನೆ: ಅವನು ನೌಕರಿಯನ್ನು ಮುಂದುವರೆಸಿದರೆ ?**

**ಉತ್ತರ:** ಸಂಸ್ಥೆಯ ಮುಖ್ಯಸ್ಥರು ಅವನ ನೌಕರಿಯನ್ನು ಮುಂದುವರೆಸಿದರೆ ಸಂಬಳವಂತೂ ಸಿಕ್ಕೇ ಸಿಗುತ್ತದೆ. ಹಾಗೆಯೇ ಇ.ಎಸ್.ಐ ಪಿಂಚಣಿಯೂ ಅವನಿಗೆ ಜೀವನ ಪರ್ಯಂತ ಮುಂದುವರೆಯುತ್ತಾ ಹೋಗುತ್ತದೆ. ಈ ಪಿಂಚಣಿಯ ಮೊತ್ತವನ್ನು ಆವಧಿಕವಾಗಿ ಪರಿಷ್ಕರಿಸಲಾಗುತ್ತದೆ.

**ಪ್ರಶ್ನೆ: ಒಂದು ಸಾರಿ ಪಿಂಚಣಿ ನಿಗದಿಯಾದರೆ, ಶಾಶ್ವತವಾಗಿ ಅವನಿಗೆ ಸಿಗುವ ಪಿಂಚಣಿ ಮೊತ್ತ ಹಾಗೆಯೇ ಇರುತ್ತದೆಯೋ ಅಥವಾ ಮುಂದೆ ಬದಲಾವಣೆಯಾಗುತ್ತದೆಯೋ?**

**ಉತ್ತರ:** ಮಾರುಕಟ್ಟೆಯ ದರ ಹಾಗೂ ಸಾಮಾಜಿಕ ಪರಿಸ್ಥಿತಿಗಳಲ್ಲಿ ಆಗುತ್ತಿರುವ ಸ್ಥಿತಿಗಳನ್ನು ಆಧರಿಸಿ ಆಗಾಗ ಈ ದರಗಳನ್ನು ಪರಿಷ್ಕರಿಸಲಾಗುವ ವ್ಯವಸ್ಥೆ ಇದೆ.

**ಪ್ರಶ್ನೆ: ದುರ್ಘಟನೆಯಿಂದ ಆರೈಕೆ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಅವನ ಕುಟುಂಬದ ಸದಸ್ಯರು ಕಷ್ಟದ ದಿನಗಳನ್ನು ಕಳೆಯಬೇಕಾಗುತ್ತದೆ ಅಲ್ಲವೆ ?**

**ಉತ್ತರ:** ಒಂದು ಅರ್ಥದಲ್ಲಿ ನೀವು ಹೇಳುವ ಮಾತನ್ನು ನಾನು ಒಪ್ಪೇನೆ. ಯಾಕೆಂದರೆ, ದುಡಿಯುವ ತಂದೆ, ಗಂಡ, ಮಗ, ಅಣ್ಣ ಅಥವಾ ಅಕ್ಕ ಆಸ್ಪತ್ರೆಗೆ ಸೇರಿದಾಗ ಕುಟುಂಬದ ಜನ ಮಾನಸಿಕವಾಗಿ ಜರ್ಜರಿತರಾಗುತ್ತಾರೆ. ನಿನ್ನೆಯವರೆಗೆ ನಗು-ನಗುತ್ತಾ ಅವರೊಂದಿಗೆ ಬೆರೆಯುತ್ತಿದ್ದ ವ್ಯಕ್ತಿ ಇದ್ದಕ್ಕಿದಂತೆ ಆಸ್ಪತ್ರೆಗೆ ಸೇರಿದಾಗ ಯಾರಿಗೆ ತಾನೆ ಸಂಕಟವಾಗುವುದಿಲ್ಲ ಹೇಳಿ ? ಇದು ಇನ್ನೊಂದು ಆಘಾತಕಾರಿ ಸನ್ನಿವೇಶವನ್ನು ಸೃಷ್ಟಿ ಮಾಡುತ್ತದೆ. ನಿನ್ನೆಯವರೆಗೆ ಸ್ನೇಹಿತರಾಗಿದ್ದ ಹಾಗೂ ಆತ್ಮೀಯರಾಗಿದ್ದ ಜನರು ದೂರ ಸರಿಯುತ್ತಾರೆ. 'ನಗುವಾಗ ಎಲ್ಲ ನೆಂಟರು, ಅಳುವಾಗ ಯಾರೂ ಇಲ್ಲ' ಎನ್ನುವಂತೆ ಆಸ್ಪತ್ರೆಗೆ ಬಂದು ಸಹಾನುಭೂತಿಯ ಒಂದೆರಡು ಮಾತುಗಳನ್ನು ಹೇಳುವುದನ್ನು ಬಿಟ್ಟರೆ ಆರ್ಥಿಕವಾಗಿ ಅವರ ಬೆಂಬಲಕ್ಕೆ ನಿಲ್ಲುವವರ ಸಂಖ್ಯೆ ವಿರಳವೆಂದೇ ಹೇಳಬೇಕು. ಸಾಮಾಜಿಕ ಅಭದ್ರತೆ ಆ ಕುಟುಂಬವನ್ನು ಸುತ್ತುವರೆಯುತ್ತದೆ. ನಿಂತ ನೆಲವೇ ಬಿರಿದಂತಾಗಿ ಗಾಬರಿಗೊಳ್ಳುತ್ತಾರೆ. ಅಂತಹ ಸಂದರ್ಭದಲ್ಲಿ ಅವರ ಸಹಾಯಕ್ಕೆ ಬರುವ ಏಕೈಕ ಯೋಜನೆ ಇ.ಎಸ್.ಐ. ಚಿಂತೆಯಿಂದ ಮುಕ್ತಗೊಳಿಸುವ ಸಾಮಾಜಿಕ ಸುರಕ್ಷಾ ಯೋಜನೆ.

**ಪ್ರಶ್ನೆ: ನನಗೆ ನಿಮ್ಮ ಮಾತಿನ ಅರ್ಥವೇ ಗೊತ್ತಾಗ್ತಾ ಇಲ್ಲ. ವಿಮಾದಾರನಿಗೆ ಇಂತಿಷ್ಟು ಅಂತ ದುಡ್ಡುಕೊಡ್ತಾರಾ/ಇ.ಎಸ್.ಐ.ನವರು?**

**ಉತ್ತರ:** ಹೇಳ್ತೀನಿ ಕೇಳಿ. ವಿಮಾದಾರ ಕಾರ್ಯ ನಿರ್ವಹಿಸುತ್ತಿರುವ ಸ್ಥಳ ಹಾಗೆಯೇ ಅವನು ಕೆಲಸಕ್ಕೆ ಹೋಗುವ ಹಾಗೂ ಮರಳಿ ಬರುವ ಸಂದರ್ಭದಲ್ಲಿ ದುರ್ಘಟನೆಗೆ ತುತ್ತಾಗಿ ಆರೈಕೆ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ವಿಮಾದಾರನಿಗೆ ಅವನ ಸಂಪೂರ್ಣ ಸಂಬಳವನ್ನು ಇ.ಎಸ್.ಐ. ಇಲಾಖೆಯು ಸಂದಾಯ ಮಾಡುತ್ತದೆ!

**ಪ್ರಶ್ನೆ: ಹೌದೆ?**

**ಉತ್ತರ:** ಹೌದು, ಇ.ಎಸ್.ಐ. ಇಲಾಖೆಯು ಸಂಪೂರ್ಣ ಸಂಬಳವನ್ನು ಸಂದಾಯ ಮಾಡುತ್ತದೆ. ಹೀಗಾಗಿ ಅವನ ಕುಟುಂಬದ ಸದಸ್ಯರು ಭಯ ಪಡಬೇಕಾದುದಿಲ್ಲ. ಅವನಿಗೆ ಸಾಮಾಜಿಕ ಸುರಕ್ಷೆಯನ್ನು ನೀಡುವ ಅಭಯವನ್ನು ಚಾಚೂ ತಪ್ಪದೇ ನಿರ್ವಹಿಸುತ್ತದೆ ಇ.ಎಸ್.ಐ. ಇಲಾಖೆ.

**ಪ್ರಶ್ನೆ: ಅದೇನೋ ಸರಿ ಎಷ್ಟು ದಿನಗಳವರೆಗೆ ಇದು ಮುಂದುವರೆಯುತ್ತದೆ?**

**ಉತ್ತರ:** ಅವನು ಗುಣಮುಖವಾಗುವವರೆಗೆ ಅವನ ಸಂಪೂರ್ಣ ಸಂಬಳವನ್ನು ಸಂದಾಯ ಮಾಡಲಾಗುತ್ತದೆ. ಅದಕ್ಕೆ ಕಾಲಮಿತಿಯೇ ಇಲ್ಲ. ! ಗುಣಮುಖರಾಗುವವರೆಗೆ ವೈದ್ಯಕೀಯ ಸೌಲಭ್ಯದ ಜೊತೆಗೆ ಅವರ ಸಂಪೂರ್ಣ ಸಂಬಳವನ್ನು ಇ.ಎಸ್.ಐ. ಇಲಾಖೆ ಸಂದಾಯ ಮಾಡುತ್ತದೆ. ಆ ಅವಧಿಯ ಇ.ಎಸ್.ಐ. ವಂತಿಗೆಯನ್ನೂ ಅವನು ಸಲ್ಲಿಸಬೇಕಾದುದಿಲ್ಲ ಎಂಬ ಅಂಶವನ್ನೂ ಇಲ್ಲಿ ಗಮನಿಸಬೇಕು!!

**ಪ್ರಶ್ನೆ: ಇನ್ನಾವುದಾದರೂ ಸಂದರ್ಭವಿದೆಯೇ ವಿಮಾದಾರ ಸಂಪೂರ್ಣ ಸಂಬಳವನ್ನು ಇ.ಎಸ್.ಐ. ಇಲಾಖೆಯಿಂದ ಪಡೆಯುವುದಕ್ಕೆ?**

**ಉತ್ತರ:** ಇದೆ. ಕುಟುಂಬ ಯೋಜನೆಗೆ ಒಳಪಟ್ಟು ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಮಹಿಳಾ ವಿಮಾದಾರರಿಗೆ 14 ದಿನಗಳು ಹಾಗೂ ಪುರುಷ ವಿಮಾದರರಿಗೆ 7 ದಿನಗಳ ಸಂಪೂರ್ಣ ಸಂಬಳವನ್ನು ಇ.ಎಸ್.ಐ. ಇಲಾಖೆ ಅವರ ಖಾತೆಗೆ ಜಮಾ ಮಾಡುತ್ತದೆ.

**ಪ್ರಶ್ನೆ: ಇದನ್ನುಳಿದು ಮತ್ತೆ ಇನ್ನಾವುದಾದರೂ ಸಂದರ್ಭ?**

**ಉತ್ತರ:** ಮಹಿಳಾ ವಿಮಾದಾರಳು ತಾಯಿಯಾದರೆ, ಅಂದರೆ ಮಗುವಿಗೆ ಜನ್ಮ ನೀಡಿದರೆ 26 ವಾರಗಳ ಕಾಲಾವಧಿಗೆ ಆಕೆಯ ಸಂಪೂರ್ಣ ಸಂಬಳವನ್ನು ಇ.ಎಸ್.ಐ. ಇಲಾಖೆ ಸಂದಾಯ ಮಾಡುತ್ತದೆ.

**ಪ್ರಶ್ನೆ: ಅಂದರೆ, ಆರುವರೆ ತಿಂಗಳು?**

**ಉತ್ತರ:** ಹೌದು. ಆರುವರೆ ತಿಂಗಳ ಕಾಲಾವಧಿಯ ಸಂಪೂರ್ಣ ಸಂಬಳವನ್ನು ಇ.ಎಸ್.ಐ. ಇಲಾಖೆ ಆಕೆಯ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಾ ಹೋಗುತ್ತದೆ. ಈ ಅವಧಿ ಹೆರಿಗೆಯಾದ ದಿನದಿಂದ ಅಂತೇನೂ

ಇಲ್ಲ. ಕೆಲವು ಹೆಣ್ಣು ಮಕ್ಕಳಿಗೆ ಹೆರಿಗೆಯ ಪೂರ್ವ ವಿಶ್ರಾಂತಿ ಬೇಕು ಅನ್ನುವ ಸ್ಥಿತಿ ಇರುವುದರಿಂದ ಹೆರಿಗೆ ಪೂರ್ವ 8 ವಾರ ಮೊದಲಿನಿಂದಲೇ ಹೆರಿಗೆಯ ರಜೆ ಹಾಕಿಕೊಳ್ಳುವುದಕ್ಕೆ ಅವಕಾಶ ಉಂಟು. ಒಟ್ಟು 26 ವಾರದ ಕಾಲಾವಧಿಗೆ ಎರಡು ಮಕ್ಕಳಿಗೆ ಈ ಸೌಲಭ್ಯವನ್ನು ನೀಡಲಾಗುತ್ತದೆ. ಇದಕ್ಕೆ ಮಾತೃತ್ವ ಫಲಾನುಭವ ಎಂದು ಕರೆಯುತ್ತಾರೆ. ಇದರ ಇನ್ನಷ್ಟು ವಿವರವನ್ನು ಆ ಫಲಾನುಭವದ ಸಂದರ್ಭ ಬಂದಾಗ ವಿವರಿಸ್ತೇನೆ.

**ಪ್ರಶ್ನೆ: ವಿಮಾದಾರ ದುರ್ಘಟನೆಯ ನಂತರ ಗುಣಮುಖನಾದ ಆದರೆ, ದುರ್ದೈವಶಾತ್ ಅಂಗವಿಕಲನಾದರೆ ಕೃತಕ ಅಂಗ ಜೋಡಣೆಯ ಸಂದರ್ಭ ಬಂದಾಗ ಸಾವಿರಾರು ರೂಪಾಯಿ ಖರ್ಚಾಗುತ್ತೆ. ಅದೊಂದು ಮಾತ್ರ ಕಷ್ಟ ಅಲ್ವಾ?**

**ಉತ್ತರ:** ಏನೇನೂ ಕಷ್ಟವಿಲ್ಲ. ದುರ್ಘಟನೆಯ ಆರೈಕೆ, ಆ ಕಾಲಾವಧಿಯ ಸಂಬಳವನ್ನು ಸಂದಾಯ ಮಾಡುವುದೂ ಅಲ್ಲದೇ ಉಚಿತವಾಗಿ ಕೃತಕ ಅಂಗ ಜೋಡಣೆಯನ್ನು ಮಾಡಲಾಗುತ್ತೆ. ಅದಕ್ಕಾಗಿ ಕೈಯಿಂದ ಬಿಡಿಕಾಸನ್ನು ಸಂದಾಯ ಮಾಡುವ ಅವಶ್ಯಕತೆ ಇಲ್ಲ.

**ಪ್ರಶ್ನೆ: ಹೌದೆ?**

**ಉತ್ತರ:** ಹೌದು. ನಿಃಶುಲ್ಕ ಕೃತ್ರಿಮ ಅಂಗ ಜೋಡಣೆ ಮಾಡಲಾಗುತ್ತೆ. ಅದಕ್ಕಾಗಿ ಯಾವುದೇ ಹಣ ಸಂದಾಯ ಮಾಡಬೇಕಾದ ಪ್ರಮೇಯವೇ ಇಲ್ಲ.ಇದೊಂದು ತುಂಬ ಅನುಕೂಲಕರ ವ್ಯವಸ್ಥೆ ಹಾಗೂ ಆರೈಕೆ ಹಾಗೂ ಕೃತ್ರಿಮ ಅಂಗಜೋಡಣೆಯ ಜೊತೆಗೆ ಸಂಬಳವನ್ನೂ ನೀಡುವುದರಿಂದ ವಿಮಾದಾರ ಭಯ ಪಡಬೇಕಾದುದಿಲ್ಲ. ಹೀಗಾಗಿ ಜೀವನದಲ್ಲಿ ಮತ್ತೆ ನವಚೇತನ ಮೂಡಲು ಇದೊಂದು ಸಹಕಾರಿ ಯೋಜನೆ ಎಂದರೆ ತಪ್ಪಾಗಲಾರದು.

**ಪ್ರಶ್ನೆ: ಇನ್ನೊಂದು ಫಲಾನುಭವದ ಬಗ್ಗೆ ಹೇಳಿಕೊಡಿ.**

**ಉತ್ತರ:** ಇನ್ನೊಂದು ಫಲಾನುಭವ ಮಹಿಳಾ ವಿಮಾದಾರರಿಗೆ ಸಂಬಂಧಪಟ್ಟಿದುದು, ಅದಕ್ಕೆ ಮಾತೃತ್ವ ಫಲಾನುಭವ ಎಂದು ಕರೆಯುತ್ತಾರೆ.

**ಪ್ರಶ್ನೆ: ಇದಕ್ಕೆ ಏನಾದರೂ ನಿಯಮಗಳಿವೆಯೆ?**

**ಉತ್ತರ:** ಹೌದು ನಿಯಮವಿದೆ. ಮೊದಲನೆಯದಾಗಿ ಮಹಿಳಾ ವಿಮಾದಾರಳು ಎರಡು ವಂತಿಗೆಯ ಅವಧಿಯಲ್ಲಿ ಕನಿಷ್ಟ ಪಕ್ಷ 78 ದಿನಗಳ ವಂತಿಗೆಯನ್ನು ಇ.ಎಸ್.ಐ. ಇಲಾಖೆಗೆ ಸಲ್ಲಿಸಿರಬೇಕು ಎಂಬ ನಿಯಮವಿದೆ.

**ಪ್ರಶ್ನೆ: ಇಲ್ಲಿ ಒಂದು ಚಿಕ್ಕ ಪ್ರಶ್ನೆ ಮಹಿಳಾ ಉದ್ಯೋಗಿ ಒಂದು ಸಂಸ್ಥೆಯಲ್ಲಿ ಕೆಲಸ ಮಾಡ್ತಾ ಇರ್ತಾಳೆ ವಂತಿಗೆಯನ್ನು ಸಲ್ಲಿಸ್ತಾ ಇರ್ತಾಳೆ. ಈ ಮಧ್ಯೆ ಆಕೆ ಬೇರೆ ಕಡೆಗೆ ಕೆಲಸ ಹುಡುಕಿಕೊಂಡು ಹೋಗ್ತಾಳೆ ಅಲ್ಲಿ ಒಂದೆರಡು ತಿಂಗಳು ಮಾತ್ರ ಕೆಲಸ ಮಾಡ್ತಾ ಇರೋ ಸಂದರ್ಭದಲ್ಲಿ ಮಗುವಿಗೆ ಜನ್ಮ ಕೊಡ್ತಾಳೆ. ಅಲ್ಲಿ ಸುಮಾರು 30–40 ದಿನಗಳ ವಂತಿಗೆಯನ್ನು ಮಾತ್ರ ತನ್ನ ವಂತಿಗೆಯನ್ನು ಸಂದಾಯ ಮಾಡ್ತಾಳೆ ಅಂತ ಇಟ್ಕೊಳ್ಳೋಣ ಅದು 78 ದಿನ ಅಲ್ಲ ಹೀಗಾಗಿ ಹೆರಿಗೆಯ ಸೌಲಭ್ಯದಿಂದ ವಂಚಿತಳಾಗ್ತಾಳೆ ಅಲ್ವೆ ?**

**ಉತ್ತರ:** ಇದಕ್ಕೆ ನೇರವಾದ ಒಂದು ಉತ್ತರ ಅಂದ್ರೆ ವಂಚಿತಳಾಗೋದಿಲ್ಲ ಅಂತ. ನಾನು ಆಗಲೇ ಹೇಳಿದ ಹಾಗೆ ಎರಡು ವಂತಿಗೆಯ ಅವಧಿ ಸೇರಿ 78 ದಿನ ಅಂತ ಹೇಳಿದೆ. ಹಿಂದಿನ ವಂತಿಗೆಯ ಅವಧಿಯಲ್ಲಿ ಮೊದಲ ಸಂಸ್ಥೆಯಲ್ಲಿ ಮುಂದಿನ ವಂತಿಗೆಯ ಅವಧಿಯಲ್ಲಿ ವರ್ತಮಾನದ ಸಂಸ್ಥೆಯ ಮುಖಾಂತರ ವಂತಿಗೆ ಸಲ್ಲಿಸುವುದರಿಂದ, ಈ ಸೌಲಭ್ಯದಿಂದ ವಂಚಿತರಾಗುವ ಸಂದರ್ಭವೇ ಬರುವುದಿಲ್ಲ. ಅದಕ್ಕೇನೇ ನಾನು ಹೇಳೋದು ನೌಕರಿಯನ್ನು ಬದಲಿಸಿದರೂ ನಿಮ್ಮ ಇ.ಎಸ್.ಐ. ವಿಮಾ ಸಂಖ್ಯೆಯನ್ನು ಮುಂದುವರೆಸಿಕೊಂಡು ಹೋಗಿ ಅಂತ ಹಾಗೆಯೇ ನೌಕರಿ ಬದಲಿಸಿ ಹೊಸ ಸಂಸ್ಥೆಗೆ ಸೇರಿದಾಗ ಅಲ್ಲಿನ ಆಡಳಿತ ಮಂಡಳಿಗೆ ನಿಮ್ಮ ಇ.ಎಸ್.ಐ. ಸಂಖ್ಯೆಯನ್ನು ತಿಳಿಸಿಬಿಡಿ. ಆಗ ನೀವು ಎಲ್ಲ ಸೌಲಭ್ಯ ಹಾಗೂ ಫಲಾನುಭವಗಳಿಗೆ ಅರ್ಹರಾಗ್ತೀರಾ.

**ಪ್ರಶ್ನೆ: ಹೆರಿಗೆಯ ರಜೆ ಎಂದಿನಿಂದ ಆರಂಭವಾಗುತ್ತೆ? ಅಂದರೆ, ಹೆರಿಗೆಯ ದಿನದಿಂದಲೋ ಅಥವಾ ಮೊದಲಿನಿಂದಲೋ?**

**ಉತ್ತರ:** ಹೆಣ್ಣು ಮಕ್ಕಳ ಆರೋಗ್ಯ ಹಾಗೂ ಅವರ ಶಾರೀರಿಕ ಆರೋಗ್ಯದ ಮೇಲೆ ಈ ಮಾತು ನಿರ್ಧಾರವಾಗುತ್ತೆ. ಕೆಲವು ಹೆಣ್ಣು

ಮಕ್ಕಳು ತುಂಬ ಚಟುವಟಿಕೆಯಿಂದ ಕೂಡಿದ್ದು ಹೆರಿಗೆಯಾಗುವ ದಿನದವರೆಗೂ ಓಡಾಡಿಕೊಂಡಿರ್ತಾರೆ. ಇನ್ನು ಕೆಲವರು ಆಯಾಸ ಪಟ್ಟುಕೊಂಡು ವಿಶ್ರಾಂತಿಗೆ ಶರಣು ಹೋಗ್ತಾರೆ. ಆದರೆ, ಇ.ಎಸ್.ಐ. ಇಲಾಖೆ ನೀಡುವುದು ಆರುವರೆ ತಿಂಗಳು ರಜೆಯ ಸಂಬಳವನ್ನು ಮಾತ್ರ. ಅವರು ಹೆರಿಗೆಯಾದ ದಿನದಿಂದ ರಜೆ ಹಾಕಬಹುದು ಅಥವಾ 2 ತಿಂಗಳು ಮೊದಲೇ ಹೆರಿಗೆ ರಜೆ ಹಾಕಬಹುದು. ಒಟ್ಟಾರೆ ಈ ಆಯ್ಕೆ ಆಯಾ ವಿಮಾದಾರ ಹೆಣ್ಣು ಮಕ್ಕಳಿಗೇನೇ ಬಿಟ್ಟುಕೊಡಲಾಗಿದೆ. ಇಲ್ಲಿ ಇನ್ನೊಂದು ವಿಷಯವನ್ನು ಪ್ರಮುಖವಾಗಿ ಗಮನಿಸಬೇಕು. ಹೆರಿಗೆಯ ಪೂರ್ವದಲ್ಲಿ ಇ.ಎಸ್.ಐ. ವೈದ್ಯಾಧಿಕಾರಿಗಳನ್ನು ಕಂಡು ಅಂದಾಜು ಹೆರಿಗೆಯ ಅವಧಿಯನ್ನು ತಿಳಿಸಿ ನಿಗದಿತ ಫಾರ್ಮ್‌ನಲ್ಲಿ ಸಹಿ ಮಾಡಿಕೊಡಬೇಕು. ಇದರಿಂದ ಮುಂದೆ ಅವರ ಸಂಬಳ ಬಟವಾಡೆಯಲ್ಲಿ ವಿಳಂಬವಾಗುವುದನ್ನು ತಡೆಯಬಹುದು.

**ಪ್ರಶ್ನೆ: ಹೆರಿಗೆಗೆ ತಗಲುವ ವೆಚ್ಚವನ್ನೇನಾದ್ರೂ ಇ.ಎಸ್.ಐ. ಕೊಡುತ್ತದೆಯೇ?**

**ಉತ್ತರ:** ವಿಮಾದಾರ ಹೆಣ್ಣು ಮಕ್ಕಳಿಗೆ ಇ.ಎಸ್.ಐ. ಆಸ್ಪತ್ರೆಗಳೂ ಸೇರಿದಂತೆ ಇ.ಎಸ್.ಐ. ಇಲಾಖೆಯೊಂದಿಗೆ ಒಡಂಬಡಿಕೆಗೆ ಒಳಪಟ್ಟ ಆಸ್ಪತ್ರೆಗಳಲ್ಲಿ ನಿಃಶುಲ್ಕ ಹೆರಿಗೆ ಮಾಡಿಸಿಕೊಳ್ಳಲು ಅವಕಾಶವಿದೆ. ಒಂದು ವೇಳೆ ವಿಮಾದಾರ ಮಹಿಳೆ ವಾಸವಾಗಿರುವ ಊರುಗಳಲ್ಲಿ ಅಂತಹ ಆಸ್ಪತ್ರೆಗಳಿಲ್ಲದೇ ಹೋದಾಗ ಹೆರಿಗೆಯ ಭತ್ತೆಯ ರೂಪದಲ್ಲಿ 2500=00 ರೂಪಾಯಿ ಹಣಕಾಸು ನೆರವು ನೀಡಲಾಗುವುದು.

**ಪ್ರಶ್ನೆ: ಇ.ಎಸ್.ಐ. ಆಸ್ಪತ್ರೆಯೂ ಇಲ್ಲ. ಹಾಗೆಯೇ ಒಡಂಬಡಿಕೆಗೆ ಒಳಪಟ್ಟ ಆಸ್ಪತ್ರೆಯೂ ಮನೆಯ ಹತ್ತಿರವಿಲ್ಲ ಇದ್ದಕ್ಕಿದ್ದಂತೆ ನೋವು ಕಾಣಿಸಿಕೊಂಡು ರಾತ್ರಿಯ ಸಮಯ ಅಂದುಕೊಳ್ಳೋಣ ಅಂತಹ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಳ್ಳಬಹುದೆ?**

**ಉತ್ತರ:** ಮಾಡಿಸಿಕೊಳ್ಳಬಹುದು, ಇದನ್ನು ನಾವು ತುರ್ತು ಆರೋಗ್ಯ ಸೌಲಭ್ಯದಲ್ಲಿಯೇ ಅಂದುಕೊಂಡು ಹೆರಿಗೆಗಾಗಿ ದಾಖಲೆಯಾದ ಹಾಗೂ ಹೆರಿಗೆಯಾದ ಮೇಲೆ ಬಿಡುಗಡೆಯಾದ ವೈದ್ಯಕೀಯ ಪ್ರಮಾಣ ಪತ್ರಗಳೂ

ಸೇರಿದಂತೆ ಪಾವತಿಸಲಾದ ಎಲ್ಲ ಚೀಟಿಗಳು ಹಾಗೂ ವೈದ್ಯರುಗಳು ಬರೆದ ಚೀಟಿಗಳನ್ನು ಕ್ರಮವಾಗಿ ಜೋಡಿಸಿ ವೆಚ್ಚವನ್ನು ಮರುಪಾವತಿ ಮಾಡಬೇಕೆಂಬ ವಿನಂತಿ ಪತ್ರದೊಂದಿಗೆ ಸಂಬಂಧಪಟ್ಟ ಚಿಕಿತ್ಸಾಲಯದ ಮುಖಾಂತರ ಪ್ರದೇಶದ ಇ.ಎಸ್.ಐ. ಆಸ್ಪತ್ರೆಯ ಚಿಕಿತ್ಸಾ ಅಧೀಕ್ಷಕರಿಗೆ ಪ್ರಸ್ತುತಪಡಿಸಬೇಕು. ಅದು ತುರ್ತು ಎಂದು ಖಾತ್ರಿಯಾದರೆ ಮಾತ್ರ ಪರಿಗಣಿಸಲಾಗುತ್ತದೆ.

**ಪ್ರಶ್ನೆ: ಅಂದರೆ, ಖರ್ಚು ಮಾಡಿದ ಸಂಪೂರ್ಣ ಹಣ ಮರುಪಾವತಿಯಾಗುತ್ತದೆ ಅಲ್ಲವೆ?**

**ಉತ್ತರ:** ಸಂಪೂರ್ಣ ಎಂದು ಹೇಳಲಿಕ್ಕಾಗದು, ಇ.ಎಸ್.ಐ. ಇಲಾಖೆಯಲ್ಲಿ ಮಾನದಂಡ ಕೇಂದ್ರ ಆರೋಗ್ಯ ಸೇವೆಯ ದರ ಪಾವತಿ ಮಾಡುವ ವ್ಯವಸ್ಥೆ ಇದೆ. ಹೀಗಿರುವಾಗ ಖಾಸಗಿ ಆಸ್ಪತ್ರೆಗಳು ಅದಕ್ಕಿಂತ ಹೆಚ್ಚು ತೆಗೆದುಕೊಂಡಿದ್ದರೆ, ಅದನ್ನುಳಿದು ಬಾಕಿ ಹಣವನ್ನು ಸಂದಾಯ ಮಾಡಲಾಗುವುದು. ಹೀಗಾಗಿ ಸಂಪೂರ್ಣ ಹಣ ಮರು ಪಾವತಿಯಾಗುತ್ತದೆ ಎಂದು ಹೇಳಲಾಗದು.

**ಪ್ರಶ್ನೆ: ಇದು ತುರ್ತು ಸಂದರ್ಭಕ್ಕಾಗಿ ಇರುವ ಸೌಲಭ್ಯ. ನನ್ನದೊಂದು ಬೇರೆಯದೇ ಪ್ರಶ್ನೆ 2017 ನೆಯ ಜನವರಿ 01 ನೆಯ ತಾರೀಖಿನಿಂದ ಇ.ಎಸ್.ಐ. ವ್ಯಾಪ್ತಿಯನ್ನು ಭೌಗೋಳಿಕವಾಗಿ ಇಡೀ ಕರ್ನಾಟಕಕ್ಕೆ ವಿಸ್ತಾರ ಮಾಡಲಾಗಿದೆ, ಆದರೆ, ಕೆಲವು ಕ್ಷೇತ್ರ–ಊರುಗಳಲ್ಲಿ ಇ.ಎಸ್.ಐ. ಆಸ್ಪತ್ರೆಗಳು ಇಲ್ಲ ಅಂತಹ ಪ್ರದೇಶಗಳಲ್ಲಿ ಹೆರಿಗೆಯಾದರೆ?**

**ಉತ್ತರ:** ನಿಮ್ಮ ಮಾತನ್ನು ಒಪ್ಪಿಕೊಳ್ತೇನೆ. ಕರ್ನಾಟಕದ ಮೂಲೆ–ಮೂಲೆಗಳಲ್ಲಿ ಕಾರ್ಖಾನೆ ಮುಂತಾದ ಘಟಕಗಳು ಇಲ್ಲದೇ ಇರಬಹುದು ಆದರೆ, ಖಾಸಗಿ ಶಾಲಾ–ಕಾಲೇಜುಗಳು ಹೇರಳವಾಗಿವೆ. ಕಾನೂನು ಪ್ರಕಾರ 10ಕ್ಕಿಂತ ಅಧಿಕ ಸಿಬ್ಬಂದಿ, ನೌಕರರು ಹಾಗೂ ಶಿಕ್ಷಕರನ್ನು ಹೊಂದಿದ ಶಾಲಾ–ಕಾಲೇಜುಗಳು ಇ.ಎಸ್.ಐ. ವ್ಯಾಪ್ತಿಗೆ ಬರುತ್ತವೆ. ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ವಿಮಾದಾರರು ಏನು ಮಾಡಬೇಕು? ಎಂಬುದೇ ನಿಮ್ಮ ಪ್ರಶ್ನೆ ಅಲ್ವೆ?

**ಪ್ರಶ್ನೆ: ಹೌದು. ಅದುವೆ ನನ್ನ ಪ್ರಶ್ನೆ.**

**ಉತ್ತರ:** ಅಂತಹ ಸೌಲಭ್ಯ ಇಲ್ಲದೇ ಇರುವ ಕಡೆ ಮಗುವಿಗೆ ಜನ್ಮ ನೀಡಿದರೆ, ಇ.ಎಸ್.ಐ. ಇಲಾಖೆಯು ರೂಪಾಯಿ 2500=00 ರೂಪಾಯಿಯನ್ನು ಕಾಣಿಕೆಯ ರೂಪದಲ್ಲಿ ನೀಡುವುದು. ಹೆರಿಗೆಯ ರಜೆಯ ಸೌಲಭ್ಯವಂತೂ ಇದ್ದೇ ಇದೆ. ಈಗಿನ ನಿಯಮದಂತೆ ಮೊದಲ ಎರಡು ಮಕ್ಕಳಿಗೆ 26 ವಾರಗಳ ಸಂಬಳವನ್ನು ಇ.ಎಸ್.ಐ. ಇಲಾಖೆಯು ಸಂದಾಯ ಮಾಡುತ್ತದೆ. ಅಂದರೆ, ಅವರ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡುತ್ತದೆ.

**ಪ್ರಶ್ನೆ: ಹೆರಿಗೆಯ ಫಲಾನುಭವಕ್ಕೆ ಸಂಬಂಧಪಟ್ಟಂತೆ ಇನ್ನೊಂದು ಪ್ರಶ್ನೆ. ಆಗಲೇ ನೀವು ಹೇಳಿರೋದು ಮಹಿಳಾ ವಿಮಾದಾರಳಿಗೆ ಸಂಬಂಧಪಟ್ಟಂತೆ, ನನ್ನ ಮುಂದಿನ ಪ್ರಶ್ನೆ ಒಬ್ಬ ವಿಮಾದಾರನ ಪತ್ನಿ ಹೆರಿಗೆ ಮಾಡಿಸಿಕೊಳ್ಳುವುದಕ್ಕೆ ಇ.ಎಸ್.ಐ. ಹಾಗೆಯೇ ಒಡಂಬಡಿಕೆಯ ಆಸ್ಪತ್ರೆ ಇಲ್ಲ ಅಂದ್ಕೊಳ್ಳೋಣ ಆಗೇನು ಮಾಡೋದು?**

**ಉತ್ತರ:** ಅಂತಹ ಸಂದರ್ಭದಲ್ಲಿ ವಿಮಾದಾರ ಮಹಿಳೆಗೆ ಇರುವಂತೆಯೇ ವಿಮಾದಾರನ ಪತ್ನಿಯ ಎರಡು ಹೆರಿಗೆಗೆ ಪ್ರೋತ್ಸಾಹ ಧನದ ರೂಪದಲ್ಲಿ ಪ್ರತಿ ಹೆರಿಗೆಗೆ 2500=00 ರೂಪಾಯಿ ಸಂದಾಯ ಮಾಡಲಾಗುವುದು. ಅಂದರೆ, ವಿಮಾದಾರನ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡಲಾಗುವುದು

**ಪ್ರಶ್ನೆ: ಎರಡು ಮಕ್ಕಳಿಗೆ 26 ವಾರಗಳ ಕಾಲ ವಿಮಾದಾರಳಿಗೆ ಸಂಪೂರ್ಣ ಸಂಬಳ ಬಟವಾಡೆ ಮಾಡುವ ಇ.ಎಸ್.ಐ. ಇಲಾಖೆ ಮುಂದಿನ ಹೆರಿಗೆಗಳಿಗೆ ಕೊಡುವ ಸೌಲಭ್ಯವೇನು ?**

**ಉತ್ತರ:** ಮೂರನೆಯ...ನಾಲ್ಕನೆಯ...ಅಂದರೆ, ಎರಡರ ನಂತರ ಮುಂದಿನ ಹೆರಿಗೆಗಳಿಗೆ ಮೂರು ತಿಂಗಳ ರಜೆ ಹಾಗೂ ಆ ಅವಧಿಗೆ ಸಂಪೂರ್ಣ ಸಂಬಳವನ್ನು ಇ.ಎಸ್.ಐ. ಇಲಾಖೆ ಫಲಾನುಭವದ ರೂಪದಲ್ಲಿ ಕೊಡುತ್ತದೆ.

**ಪ್ರಶ್ನೆ: ಸರಕಾರಿ ಯೋಜನೆಗಳಲ್ಲಿ ಕುಟುಂಬ ಯೋಜನೆಯೂ ಒಂದು ಹೀಗಿರುವಾಗ ಇ.ಎಸ್.ಐ. ಏನಾದರೂ ವಿಶೇಷ ಸೌಲಭ್ಯವನ್ನು ಒದಗಿಸಿದೆಯೇ ವಿಮಾದಾರ ಬಂಧುಗಳಿಗೆ?**

**ಉತ್ತರ:** ಇದೊಂದು ತುಂಬ ಉತ್ತಮವಾದ ಪ್ರಶ್ನೆ. ಖಂಡಿತವಾಗಿಯೂ ಸೌಲಭ್ಯವನ್ನು ಕಲ್ಪಿಸಲಾಗಿದೆ. ಒಂದು ಕಾಲದಲ್ಲಿ "ಎರಡು ಬೇಕು ಮೂರು ಸಾಕು" ಘೋಷಣೆಯೊಂದಿಗೆ ಆರಂಭವಾದ ಈ ಯೋಜನೆ ವರುಷಗಳು ಕಳೆದಂತೆ 'ನಾವಿಬ್ಬರು ನಮಗಿಬ್ಬರು' ಆರಂಭವಾಗಿ 'ಸುಖ ಸಂಸಾರಕ್ಕೆ ನಾವಿಬ್ಬರೂ ನಮಗೊಬ್ಬರು' ಹಂತಕ್ಕೆ ಬಂದು ತಲುಪಿದೆ. ಇದು ಉತ್ತಮವಾದ ಬೆಳವಣಿಗೆಯೂ ಕೂಡ "ಚಿಕ್ಕ ಸಂಸಾರ, ಚೊಕ್ಕ ಸಂಸಾರ" ಎನ್ನುವಂತೆ. ಹುಟ್ಟಿದ ಮಗುವಿಗೆ ಉತ್ತಮವಾದ ಆಹಾರ ಬಟ್ಟೆ ಬಹುಮುಖ್ಯವಾಗಿ ಒಳ್ಳೆಯ ಶಿಕ್ಷಣ ಕೊಡಿಸಬೇಕೆಂದರೆ, ಒಂದೇ ಮಗುವು ಸಾಕು, ಜಮೀನಿನಲ್ಲಿ ನಾಟಿಯು ಬಿಡಿ ಬಿಡಿಯಾಗಿದ್ದಾರೆ ಇಳುವರಿ ಉತ್ತಮವಾಗಿ ಬರುತ್ತದೆ. ಇಕ್ಕಟ್ಟಾಗಿ ಅಥವಾ ಒಂದಕ್ಕೊಂದು ಹತ್ತಿಕೊಂಡು ಇದ್ದರೆ, ಇಳುವರಿ ಕುಂಠಿತವಾಗುತ್ತದೆ. ಹೀಗಾಗಿ "ಕಡಿಮೆ ಸಂತಾನ ಸುಖ ಸಂಸಾರಕ್ಕೆ ಸೋಪಾನ" ಇದು ಮಗು ಹಾಗೂ ಪೋಷಕರು ಇಬ್ಬರಿಗೂ ಒಳ್ಳೆಯದು. ಹೀಗಾಗಿ ಸರಕಾರ ಈ ಯೋಜನೆಗೆ ಒತ್ತು ನೀಡುತ್ತಿದೆ. ಇದರಲ್ಲಿ ಇ.ಎಸ್.ಐ. ಇಲಾಖೆಯೂ ಹೊರತಾಗಿಲ್ಲ. ಹೀಗಾಗಿ ಕುಟುಂಬ ಯೋಜನೆಯನ್ನು ಜನಪ್ರಿಯಗೊಳಿಸುವುದಕ್ಕಾಗಿ ವಿಮಾದಾರರಿಗೆ ಪ್ರೋತ್ಸಾಹಿಸಲಾಗುತ್ತದೆ.

**ಪ್ರಶ್ನೆ: ಪ್ರೋತ್ಸಾಹದ ರೂಪದಲ್ಲಿ ಯಾವ ಅನುಕೂಲಗಳನ್ನು ನೀಡುತ್ತದೆ.?**

**ಉತ್ತರ:** ಇ.ಎಸ್.ಐ. ಇಲಾಖೆಯು ಕುಟುಂಬ ಯೋಜನೆಗೆ ಒಳಪಡುವ ವಿಮಾದಾರ ಮಹಿಳೆಗೆ 14 ದಿನಗಳ ರಜೆ ಸಹಿತ ಸಂಪೂರ್ಣ ಸಂಬಳ ನೀಡುವುದು. ಹಾಗೆಯೇ ಪುರುಷ ವಿಮಾದಾರನಿಗೆ ಏಳು ದಿನಗಳ ರಜೆ ಸಹಿತ ಸಂಬಳ ನೀಡುವ ವ್ಯವಸ್ಥೆ ಇದೆ. ಈ ಹಣವನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು.

**ಪ್ರಶ್ನೆ: ಹೆರಿಗೆಯ ಫಲಾನುಭವಕ್ಕೆ ಸಂಬಂಧಪಟ್ಟಂತೆ ಇನ್ನೇನಾದರೂ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೆ ?**

**ಉತ್ತರ:** ಇಲ್ಲಿ ಇನ್ನೊಂದನ್ನು ಇಲ್ಲಿ ಉಲ್ಲೇಖಿಸ ಬಯಸ್ತೇನೆ. ಮಹಿಳಾ ವಿಮಾದಾರಳು ಕಾನೂನು ರೀತಿಯಲ್ಲಿ ಮೂರು ತಿಂಗಳಿಗಿಂತಲೂ ಕಡಿಮೆ ವಯಸ್ಸಿನ ಮಗುವನ್ನು ದತ್ತು ಪಡೆದುಕೊಂಡರೆ, ದತ್ತು ಪಡೆದ ದಿನದಿಂದ 26 ವಾರಗಳ ಕಾಲ ರಜೆ ಹಾಗೂ ಆ ಅವಧಿಗೆ ಆಕೆಯ ಸಂಪೂರ್ಣ ಸಂಬಳವನ್ನು ಬಟವಾಡೆ ಮಾಡುವ ವ್ಯವಸ್ಥೆಯನ್ನು ಇ.ಎಸ್.ಐ. ಇಲಾಖೆ ಮಾಡುತ್ತದೆ.

**ಪ್ರಶ್ನೆ: ಅವಲಂಬಿತರ ಅಥವಾ ಆಶ್ರಿತ ಜನರ ಫಲಾನುಭವ ಅಂತಾರಲ್ಲ ಹಾಗಂದ್ರೇನು?**

**ಉತ್ತರ:** ಈ ಫಲಾನುಭವದ ಬಗ್ಗೆ ತಿಳಿದುಕೊಳ್ಳುವುದಕ್ಕಿಂತ ಮೊದಲು ಆಶ್ರಿತರು ಅಥವಾ ಅವಲಂಬಿತರು ಅಂದ್ರೆ ಯಾರು ಅನ್ನೋದನ್ನ ತಿಳಿದುಕೊಳ್ಳೋದು ಮುಖ್ಯ. ಇ.ಎಸ್.ಐ ವ್ಯಾಖ್ಯೆಯಲ್ಲಿ ಹೇಳುವುದಾದರೆ, ವಿಮಾದಾರನ ಆಶ್ರಿತ ಕುಟುಂಬದ ಸದಸ್ಯರೆಲ್ಲ ಆಶ್ರಿತರೇ ಆಗಿರ್ತಾರೆ.

**ಪ್ರಶ್ನೆ: ಸ್ವಲ್ಪ ಸ್ಪಷ್ಟಪಡಿಸ್ತೀರಾ? ವಿಮಾದಾರನ ಮನೆಯಲ್ಲಿ ಇರೋರೆಲ್ಲ ಆಶ್ರಿತರೆ ಅಂದ್ಕೊಳ್ಳಬಹುದಾ?**

**ಉತ್ತರ:** ಇಲ್ಲ. ವಾಸವಾಗಿರೋರು ಅವನು ತನ್ನ ಜೊತೆ ಆಸರೆ ಕೊಟ್ಟು ಇಟ್ಟುಕೊಂಡಿರೋದು ಬೇರೆ ವಿಷಯ. ಹೇಳ್ತೀನಿ ಕೇಳಿ. ಇಲ್ಲಿ ಬಹುಮುಖ್ಯವಾದ ವಿಷಯ ಪುರುಷ ವಿಮಾದಾರನ ಆಶ್ರಿತ ಕುಟುಂಬದ ಸದಸ್ಯರೆಂದರೆ, ಅವನು, ಅವನ ತಂದೆ ಹಾಗೂ ತಾಯಿ, ವಿವಾಹವಾಗಿದ್ದರೆ ಹೆಂಡತಿ ಹಾಗೂ ಇಪ್ಪತ್ತೊಂದು ವಯಸ್ಸಿನವರೆಗಿನ ಮಕ್ಕಳು. ಇದಿಷ್ಟೇ ಜನ ಆಶ್ರಿತರು ಎಂದು ಇ.ಎಸ್.ಐ. ಇಲಾಖೆಯ ವ್ಯಾಖ್ಯೆ ಹೇಳುತ್ತದೆ.

**ಪ್ರಶ್ನೆ: ಇನ್ನು ಮಹಿಳಾ ವಿಮಾದಾರರಿಗೆ?**

**ಉತ್ತರ:** ಇನ್ನು ಮಹಿಳಾ ವಿಮಾದಾರರ ವಿಷಯಕ್ಕೆ ಬಂದರೆ ಅವಳು, ಆಕೆಯ ತಂದೆ ಹಾಗೂ ತಾಯಿ ವಿವಾಹವಾಗಿದ್ದರೆ, ಗಂಡ ಹಾಗೆಯೇ ಇಪ್ಪತ್ತೊಂದು ವಯಸ್ಸಿನವರೆಗಿನ ಮಕ್ಕಳು.

**ಪ್ರಶ್ನೆ: ಅಂದರೆ, ಪುರುಷ ಹಾಗೂ ಮಹಿಳಾ ವಿಮಾದಾರರ ತಂದೆ ಹಾಗೂ ತಾಯಿಗಳು ಅವರ ಆಶ್ರಿತ ಜನರಲ್ಲಿ ಬರ್ತಾರೆ ಅಂತ ಆಯ್ತು.**

**ಉತ್ತರ:** ಹೌದು. ಆದರೂ ಇಲ್ಲೊಂದು ನಿಯಮವಿದೆ. ತಂದೆ ಹಾಗೂ ತಾಯಿ ಜೊತೆಗೆ ವಾಸಿಸುತ್ತಿರಬೇಕು ಹಾಗೂ ಅವರ ಮಾಸಿಕ ಆದಾಯ 5000=00 ರೂಪಾಯಿಗಳಿಗಿಂತ ಕಡಿಮೆ ಇರಬೇಕು. ಆಗ ಮಾತ್ರ ಅವರುಗಳು ಆಶ್ರಿತರ ಫಲಾನುಭವಗಳಾದ ವೈದ್ಯಕೀಯ ಹಾಗೂ ನಗದು ಫಲಾನುಭವಕ್ಕೆ ಅರ್ಹರಾಗ್ತಾರೆ. ಇನ್ನೊಂದು ವಿಷಯವನ್ನು ಇಲ್ಲಿ ಗಮನಿಸಬೇಕು. ಮಕ್ಕಳು ಆಶ್ರಿತರಾಗಿರಬೇಕಾದರೆ ಅವರ ವಯಸ್ಸು ವೈದ್ಯಕೀಯ ಸೌಲಭ್ಯಕ್ಕೆ ಇಪ್ಪತ್ತೊಂದು ಹಾಗೆಯೇ ಆಶ್ರಿತ ಜನರ ನಗದು ಹಿತಲಾಭ ಅಥವಾ ಫಲಾನುಭವಕ್ಕೆ 25 ವಯಸ್ಸಿಗಿಂತಲೂ ಕಡಿಮೆ ಇರಬೇಕು. ವಯಸ್ಸು 25 ದಾಟುತ್ತಲೇ ಫಲಾನುಭವ ನಿಂತು ಹೋಗುತ್ತದೆ.

**ಪ್ರಶ್ನೆ: ಮಕ್ಕಳು ವಿಕಲಾಂಗರಾಗಿದ್ದು ಅವರು ಗಳಿಕೆ ಮಾಡದೇ ಇರುವ ಸಂದರ್ಭವಿದ್ದರೆ, ಇ.ಎಸ್.ಐ. ಅವರಿಗೆ ನೀಡುವ ಪೆನ್ಷನ್ ಅಂದರೆ ಆಶ್ರಿತ ಜನರ ಫಲಾನುಭವವನ್ನು ಮುಂದುವರೆಸುತ್ತದೆಯೇ ? ಯಾಕೆಂದರೆ ಇಲ್ಲಿ ಮಾನವೀಯತೆಯ ಪ್ರಶ್ನೆ ಬರುತ್ತದೆ. ಎರಡನೆಯದಾಗಿ ಅವರನ್ನು ಯಾರು ನೋಡಿಕೊಳ್ಳಬೇಕು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ.**

**ಉತ್ತರ:** ನಿಮ್ಮ ತರ್ಕ ಹಾಗೂ ಯೋಚನೆ ಸರಿಯಾಗಿದೆ. ಮಕ್ಕಳು ವಿಕಲಚೇತನರಾಗಿದ್ದು ಇಪ್ಪತ್ತೈದು ವರ್ಷ ಆದ ಮೇಲೆ ಇ.ಎಸ್.ಐ. ವೈದ್ಯಕೀಯ ನಿರ್ಣಾಯಕರ ಶಿಫಾರಸಿನ ಮೇರೆಗೆ ಇದನ್ನು ಮುಂದುವರೆಸಲು ಕಾನೂನಿನಲ್ಲಿ ಅವಕಾಶವಿದೆ. ಈ ಪ್ರಕ್ರಿಯ ಪ್ರತಿವರ್ಷ ನಡೆಯುತ್ತಲಿರುತ್ತದೆ.

**ಪ್ರಶ್ನೆ: ಅಂದರೆ, ಆಶ್ರಿತ ಜನರಿಗಾಗಿ ಸಿಗುವ ಫಲಾನುಭವ ತಂದೆ, ತಾಯಿ ಹಾಗೂ ಹೆಂಡತಿಗೆ ಜೀವನ ಪರ್ಯಂತ ಪಿಂಚಣಿ ರೂಪದಲ್ಲಿ ಸಿಗುತ್ತದೆ ಅಂತ ಆಯ್ತು ಅಲ್ವೆ?**

**ಉತ್ತರ:** ನಿಮ್ಮ ಊಹೆ ಭಾಗಶಃ ಸರಿ. ತಂದೆ ಹಾಗೂ ತಾಯಿಗೆ ಜೀವನ ಪರ್ಯಂತ ಎನ್ನುವುದು ಸರಿ ಆದರೆ, ಹೆಂಡತಿಗೆ ಜೀವನ ಪರ್ಯಂತ ಇದ್ದರೂ ಆಕೆಯು ಪುನರ್ ವಿವಾಹ ಮಾಡಿಕೊಂಡರೆ, ಈ ಫಲಾನುಭವ ನಿಂತು ಹೋಗುತ್ತದೆ.

**ಪ್ರಶ್ನೆ: ಈ ಪಿಂಚಣಿಯ ಪ್ರಮಾಣವೇನು ? ಅಂದರೆ, ಆಶ್ರಿತರಿಗೆ ಪಿಂಚಣಿ ಎಷ್ಟು ಹಣ ಸಿಗುತ್ತೆ?**

**ಉತ್ತರ:** ಪಿಂಚಣಿಯ ದರ ಅಥವಾ ಪ್ರಮಾಣವು ವಿಮಾದಾರನ ಸಂಬಳದ ಶೇಕಡ ತೊಂಭತ್ತನ್ನು ಆಶ್ರಿತ ಕುಟುಂಬದ ಸದಸ್ಯರಿಗೆ ಹಂಚಿಕೆಯಾಗಿ ಪ್ರತಿ ತಿಂಗಳು ಪಿಂಚಣಿಯ ರೂಪದಲ್ಲಿ ಸಂದಾಯ ಮಾಡಲಾಗುವುದು.

**ಪ್ರಶ್ನೆ: ಈ ಪಿಂಚಣಿಯನ್ನು ಪಡೆದುಕೊಳ್ಳುವುದಕ್ಕೆ ಪ್ರತಿ ತಿಂಗಳು ಇ.ಎಸ್.ಐ. ಕಚೇರಿಗೆ ಹೋಗಬೇಕೆ?**

**ಉತ್ತರ:** ಒಂದು ಕಾಲದಲ್ಲಿ ಆ ತೆರನಾದ ವ್ಯವಸ್ಥೆ ಇತ್ತು. ಪಿಂಚಣಿದಾರರು ಪ್ರತಿ ತಿಂಗಳು ಇ.ಎಸ್.ಐ. ಶಾಖಾ ಕಚೇರಿಗೆ ಹೋಗಿ ತಮ್ಮ ಪಿಂಚಣಿ ಹಣವನ್ನು ಪಡೆದುಕೊಳ್ಳಬೇಕಾಗುತ್ತಿತ್ತು. ಅದರಲ್ಲೂ ವಿಶೇಷವಾಗಿ ತಿಂಗಳ ಮೊದಲ ವಾರ ಕೆಲವು ಕಚೇರಿಗಳ ಮುಂದೆ ಮುಂಜಾನೆಯಿಂದಲೇ ಜನರು ಸರದಿಯಲ್ಲಿ ನಿಲ್ಲುತ್ತಿದ್ದರು. ಒಂದು ಕಡೆ ವಯೋವೃದ್ಧರು, ಬಾಣಂತಿಯರು ತಮ್ಮ-ತಮ್ಮ ಸಂಬಳ ಹಾಗೂ ಪಿಂಚಣಿಯನ್ನು ಪಡೆದುಕೊಳ್ಳಲು ಹರಸಾಹಸ ಪಡುತ್ತಿದ್ದರು. ಇನ್ನೊಂದು ಕಡೆ ಇ.ಎಸ್.ಐ. ಸಿಬ್ಬಂದಿಯೂ ಮಾನವೀಯತೆಯ ದೃಷ್ಟಿಯಿಂದ ಮದ್ಯಾಹ್ನದ ಊಟವನ್ನೂ ಮರೆತು ಪಿಂಚಣಿ ಬಟವಾಡೆಯ ಕಾರ್ಯದಲ್ಲಿ ತೊಡಗಿರುತ್ತಿದ್ದರು. ಇದೆಲ್ಲ ಈಗ ಇತಿಹಾಸ.

**ಪ್ರಶ್ನೆ: ವರ್ತಮಾನದ ವ್ಯವಸ್ಥೆಯಲ್ಲಿ ಏನು ಬದಲಾವಣೆಯಾಗಿದೆ ? ಶಾಖಾ ಕಚೇರಿಗೆ ಹೋಗುವ ಅವಶ್ಯಕ ಇಲ್ಲವೆ?**

**ಉತ್ತರ:** ಈಗ ಕೆಲಸಗಳು ತುಂಬ ಸುಲಭ. ಪಿಂಚಣಿದಾರರಿಗೆ ಅವರ ಬ್ಯಾಂಕ್ ಖಾತೆಗೇನೇ ನೇರವಾಗಿ ಹಣ ಸಂದಾಯವಾಗುತ್ತದೆ. ಹಣದ ರೂಪದಲ್ಲಿ ಯಾರಿಗೂ ಏನನ್ನೂ ಕೊಡುವ ಹಾಗಿಲ್ಲ, ಎಲ್ಲವೂ ಪಾರದರ್ಶಕ ಹಾಗೂ ಸಮಯಕ್ಕೆ ಸರಿಯಾಗಿ ಆಗುತ್ತವೆ. ಹೀಗಾಗಿ ಪಿಂಚಣಿದಾರರು ಇ.ಎಸ್.ಐ. ಕಚೇರಿಗೆ ತೆರಳಬೇಕಾದುದೂ ಇಲ್ಲ ಅಲೆದಾಡುವ ಪ್ರಶ್ನೆಯಂತೂ ಇಲ್ಲವೇ ಇಲ್ಲ. ಲಂಚ-ರುಸುವತ್ತುಗಳ ಜಂಜಾಟವಿಲ್ಲ. ಎಲ್ಲವೂ ಪಾರದರ್ಶಕ.

**ಪ್ರಶ್ನೆ: ಆಶ್ರಿತ ಕುಟುಂಬದ ಸದಸ್ಯರುಗಳಲ್ಲಿ ವಿಮಾದಾರನ ಅಕ್ಕ-ತಂಗಿ, ಅಣ್ಣ-ತಮ್ಮ ಇಲ್ಲದಿರುವುದು ಸರಿಯಾಗಿ ಕಾಣ್ತಾ ಇಲ್ಲ. ತಂದೆ-ತಾಯಿ ತೀರಿಹೋಗಿದ್ದರೆ ಅಂತಹ ಪುಟ್ಟ ಮಕ್ಕಳನ್ನು ನೋಡಿಕೊಳ್ಳುವವರಾರು? ಅವರು ತಮ್ಮ ಉದರ ನಿರ್ವಹಣೆಯ ಜೊತೆಗೆ ಕಾಯಿಲೆಯ ಸಂದರ್ಭದಲ್ಲಿ ಏನು ಮಾಡಬೇಕು ಪಾಪ?**

**ಉತ್ತರ:** ನೀವು ಹೇಳಿದ ವಿಕಟ ಪರಿಸ್ಥಿತಿಯಲ್ಲಿ ಇ.ಎಸ್.ಐ. ನಿಯಮದಲ್ಲಿ ಅವಕಾಶ ಕಲ್ಪಿಸಿ ಕೊಡಲಾಗಿದೆ. ವಿಮಾದಾರನು ಅವಿವಾಹಿತನಾಗಿದ್ದು, ತಂದೆ-ತಾಯಿಗಳು ತೀರಿಹೋಗಿದ್ದರೆ, ಅನಾಯಾಸವಾಗಿ ವಿಮಾದಾರನ ತಮ್ಮ ಹಾಗೂ ತಂಗಿಯರ ಜವಾಬ್ದಾರಿ ಅವನ ಮೇಲೆ ಬೀಳುತ್ತದೆ. ಆ ಪುಟ್ಟ ಮಕ್ಕಳನ್ನು ಯಾರು ನೋಡಿಕೊಳ್ಳಬೇಕು? ಆದುದರಿಂದ ಅಂತಹ ಸಂದರ್ಭದಲ್ಲಿ ಅವನು ತನ್ನ ಕುಟುಂಬದ ಅವಲಂಬಿತ ಸದಸ್ಯರನ್ನಾಗಿ ಸೇರಿಸಿಕೊಂಡು ಸಿಗಬೇಕಾದ ಎಲ್ಲ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಿಕೊಡಲಾಗಿದೆ. ಆ ಚಿಂತೆಯಿಂದ ಆ ಮುಗ್ಧ ಮಕ್ಕಳಿಗೆ ಮುಕ್ತಿ ದೊರಕುತ್ತದೆ.

**ಪ್ರಶ್ನೆ: ವೈದ್ಯಕೀಯ ಸೌಲಭ್ಯ ಯಾರಿಗೆ ? ಎಷ್ಟು, ಎಷ್ಟು ದಿನಕ್ಕೇಂತ ತಿಳಿಸಿಕೊಡ್ತೀರಾ?**

**ಉತ್ತರ:** ಇದಕ್ಕೆ ಸರಳವಾದ ಉತ್ತರವೆಂದರೆ, ನೌಕರನೊಬ್ಬ ವಿಮಾದಾರನಾದ ದಿನದಿಂದಲೇ ಅವನು ಹಾಗೂ ಅವನ ಕುಟುಂಬದ ಅವಲಂಬಿತ ಸದಸ್ಯರು ಇ.ಎಸ್.ಐ. ವೈದ್ಯಕೀಯ ಸೌಲಭ್ಯಕ್ಕೆ ಅರ್ಹರಾಗುತ್ತಾರೆ ಆದರೆ, ವಿಶೇಷ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ಎರಡು ವರ್ಷ ಕಾಯಬೇಕಾಗುತ್ತದೆ.

**ಪ್ರಶ್ನೆ: ಅಂದರೆ ?**

**ಉತ್ತರ:** ಅಂದರೆ, ವಿಶೇಷ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ನೌಕರನೊಬ್ಬ ಎರಡು ವರ್ಷ ವಿಮಾದಾರನಾಗಿದ್ದು ಕನಿಷ್ಟ 156 ದಿನಗಳ ವಂತಿಗೆಯನ್ನು ಸಲ್ಲಿಸಿರಬೇಕು, ಆಗ ಮಾತ್ರ ವಿಶೇಷ ವೈದ್ಯಕೀಯ ಸೌಲಭ್ಯ ಅಂದರೆ, ಸುಪರ ಸ್ಪೆಶಾಲಿಟಿ ಟ್ರೀಟ್‌ಮೆಂಟ್ ಪಡೆದುಕೊಳ್ಳಲು ಅರ್ಹತೆ ಪಡೆದುಕೊಳ್ಳುತ್ತಾನೆ.

**ಪ್ರಶ್ನೆ: ಇದರಲ್ಲಿ ವಿನಾಯಿತಿ ಏನಾದರೂ ಇದೆಯೇ?**

**ಉತ್ತರ:** ಇದೆ. ಉದಾಹರಣೆಗೆ ನೌಕರನೊಬ್ಬ ಕೆಲಸಕ್ಕೆ ಸೇರಿದ ಎಂದುಕೊಳ್ಳೋಣ ಇ.ಎಸ್.ಐ. ಘೋಷಣಾ ಪತ್ರವನ್ನು ಭರ್ತಿಮಾಡಿ ಕೊಟ್ಟ ಅಂತ ತಿಳ್ಕೊಳ್ಳಿ. ಕೆಲಸ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಅಪಘಾತಕ್ಕೆ ಈಡಾಗಿ ಗಾಯವಾಯಿತು ಅಂದ್ಕೊಳ್ಳಿ ಆಗ ಮುಂದಿನ ಕೆಲಸ ಆಸ್ಪತ್ರೆಗೆ ಸೇರುವುದು. ಆಗ ಅವನು ಇ.ಎಸ್.ಐ. ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳುತ್ತಾನೆ. ಅದಕ್ಕೆ ಅವನು ಇಂತಿಷ್ಟು ದಿನಗಳ ಸೇವೆ ಸಲ್ಲಿಸಿರಬೇಕು ಅಥವಾ ಇಂತಿಷ್ಟು ವಂತಿಗೆಯನ್ನು ಸಲ್ಲಿಸಿರಬೇಕು ಎಂಬ ನಿಯಮವಿಲ್ಲ. ಅಂದರೆ, ವಿಮಾದಾರನಾಗಿದ್ದರೆ ಸಾಕು ವಂತಿಗೆಯ ಮಾತು ಆಮೇಲೆ. ವೈದ್ಯಕೀಯ ಸೌಲಭ್ಯ ಸಿಕ್ಕುತ್ತದೆ.

**ಪ್ರಶ್ನೆ: ಕೆಲಸಕ್ಕೆ ಸೇರಿದ ದಿನವೇ ವಿಮಾದಾರನಾಗಿ ದುರ್ದೈವದಿಂದ ಅಪಘಾತಕ್ಕೆ ಈಡಾದರೆ?**

**ಉತ್ತರ:** ಮೊದಲನೆಯ ದಿನವೇ ಆಗಬಾರದ ಅನಾಹುತವಾದರೆ ವೈದ್ಯಕೀಯ ಸೌಲಭ್ಯವೂ ಸೇರಿದಂತೆ ಬೇರೆ ಫಲಾನುಭವಗಳಿಗೂ ಅವನು ಹಾಗೂ ಅವನ ಅವಲಂಬಿತ ಕುಟುಂಬದ ಸದಸ್ಯರು ಅರ್ಹರಾಗಿರುತ್ತಾರೆ. ಈ ಫಲಾನುಭವಕ್ಕೆ ಕೆಲಸದ ಅವಧಿಯ ದುರ್ಘಟನಾ ಫಲಾನುಭವ ಎಂದು ಕರೆಯುತ್ತಾರೆ.

**ಪ್ರಶ್ನೆ: ಅಂದರೆ, ಇದಕ್ಕೆ ಎರಡು ವರ್ಷ ವಿಮಾದಾರರಾಗಿರುವ ಹಾಗೂ ಕನಿಷ್ಟಪಕ್ಷ 156 ದಿನಗಳ ವಂತಿಗೆಯನ್ನು ಸಲ್ಲಿಸಿರಬೇಕು ಎಂಬ ನಿಯಮ ಅನ್ವಯಿಸುವುದಿಲ್ಲ ಎಂದಾಯಿತು?**

**ಉತ್ತರ:** ಹೌದು. ಕಾರಣ, ಇದು ಕೆಲಸದಲ್ಲಿರುವ ಅವಧಿಯಲ್ಲಿ ನಡೆದಿರುವ ದುರ್ಘಟನೆ ಇದಕ್ಕೆ ಇಂಗ್ಲೀಷ್‌ನಲ್ಲಿ 'ಡ್ಯೂ ಟೂ ಎಂಪ್ಲಾಯಿಮೆಂಟ್ ಇಂಜುರಿ' ಅಂತ ಹೇಳ್ತಾರೆ ಹೀಗಾಗಿ ಇಲ್ಲಿ ಅವಧಿ ಹಾಗೂ ವಂತಿಗೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಒಂದು ಪೈಸೆಯನ್ನೂ ವಂತಿಗೆ ಸಲ್ಲಿಸದೇ ಒಂದು ದಿನ ಪೂರ್ತಿ ಕೆಲಸ ಮಾಡದೇ ಪಡೆದುಕೊಳ್ಳಬಹುದಾದ ಫಲಾನುಭವ ಇದು. ಕಾರ್ಮಿಕರಿಗೆ ಇದೊಂದು ಅದ್ಭುತವಾದ ಯೋಜನೆ.

**ಪ್ರಶ್ನೆ: ವಿಮಾದಾರರ ಅವಲಂಬಿತ ಸದಸ್ಯರು ಬೇರೆ ಊರುಗಳಲ್ಲಿ ವಾಸವಾಗಿದ್ದರೆ, ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ವಿಮಾದಾರ ಕಾರ್ಯ ನಿರ್ವಹಿಸುತ್ತಿರುವ ಊರಿಗೇನೇ ಬರಬೇಕೆ?**

**ಉತ್ತರ:** ಊಂ...ಹೂ.... ಹಾಗೆ ಮಾಡಬೇಕಾದ ಪ್ರಮೇಯವೇ ಇಲ್ಲ. ಆಡಳಿತ ಮಂಡಳಿ ವಿಮಾದಾರನಿಗೆ ಇ-ಪೆಹಚಾನ ಕಾರ್ಡನ್ನು ದ್ವಿಪ್ರತಿಯಲ್ಲಿ ಜಾರಿಗೊಳಿಸಬೇಕು ಎಂಬುದೇ ಇದರ ಮುಖ್ಯ ಉದ್ದೇಶ ಒಂದು ತನ್ನ ಹತ್ತಿರ ಹಾಗೂ ಇನ್ನೊಂದನ್ನು ಬೇರೆ ಊರುಗಳಲ್ಲಿ ವಾಸಿಸುವ ಕುಟುಂಬದ ಸದಸ್ಯರ ಹತ್ತಿರ.

**ಪ್ರಶ್ನೆ: ನನಗೆ ಅರ್ಥವಾಗಲಿಲ್ಲ.**

**ಉತ್ತರ:** ಕೇಳಿ, ಹಲವಾರು ಸಂದರ್ಭಗಳಲ್ಲಿ ವಿಮಾದಾರ ತನ್ನ ಕುಟುಂಬದ ಸದಸ್ಯರು ಹಾಗೂ ತಂದೆ-ತಾಯಿಗಳಿಂದ ದೂರವಿರಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಇ-ಪೆಹಚಾನ ಕಾರ್ಡ್‌ನ ಒಂದು ಪ್ರತಿಯನ್ನು ಅವರು ಇಟ್ಟುಕೊಳ್ಳಲಿ ಆ ಕಾರ್ಡನ್ನು ತೆಗೆದುಕೊಂಡು ಹೋಗಿ ತಮ್ಮ ಹತ್ತಿರದ ಇ.ಎಸ್.ಐ. ಚಿಕಿತ್ಸಾಲಯಕ್ಕೆ ಹೋಗಿ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಬಹುದು. ಅರ್ಥವಾಯಿತಲ್ಲ?

**ಪ್ರಶ್ನೆ: ಅರ್ಥವಾಯ್ತು. ಇದಕ್ಕಾಗಿ ಮತ್ತಿನ್ನೇನಾದರು ಪತ್ರವ್ಯವಹಾರ ಮಾಡಬೇಕಾಗುತ್ತದೆಯೆ ಅಥವಾ ಯಾರನ್ನಾದರೂ ಸಂಪರ್ಕಿಸಬೇಕೆ?**

**ಉತ್ತರ:** ಯಾರನ್ನೂ ಸಂಪರ್ಕಿಸಬೇಕಾದ ಅಥವಾ ಪತ್ರವ್ಯವಹಾರ ಮಾಡುವ ಅವಶ್ಯಕತೆಯೇ ಇಲ್ಲ. ಇ-ಪೆಹಚಾನ ಕಾರ್ಡ್‌ನೊಂದಿಗೆ ಆಧಾರ ಸಂಖ್ಯೆಯನ್ನು ಜೋಡಿಸಿರುವುದರಿಂದ ಅಗತ್ಯ ಬಿದ್ದರೆ ಇ.ಎಸ್.ಐ. ಚಿಕಿತ್ಸಾಲಯದ ಅಧಿಕಾರಿಗಳು ಆನ್‌ಲೈನ್ ಸಹಾಯದಿಂದ ಖಾತರಿಪಡಿಸಿಕೊಳ್ಳುತ್ತಾರೆ.ಅಷ್ಟೆ.

**ಪ್ರಶ್ನೆ: ವಿಮಾದಾರ ಹಾಗೂ ಅವನ ಕುಟುಂಬದ ಸದಸ್ಯರು ತಮ್ಮ ಖಾಸಗಿ ಕೆಲಸ ಕಾರ್ಯಗಳ ನಿಮಿತ್ಯ ಬೇರೆ ಊರುಗಳಿಗೆ ಹೋದಾಗ ಅಲ್ಲಿ ಇ.ಎಸ್.ಐ. ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಬಹುದೆ?**

**ಉತ್ತರ:** ಅವಶ್ಯವಾಗಿ. ಇದರಲ್ಲಿ ಯಾವುದೇ ಗೊಂದಲವಿಲ್ಲ. ವಿಮಾದಾರ ತನ್ನ ಇ.ಎಸ್.ಐ. ಇ:ಪೆಹಚಾನ ಕಾರ್ಡ್‌ನಲ್ಲಿರುವ ಕುಟುಂಬದ

ಅವಲಂಬಿತ ಸದಸ್ಯರು ಬೇರೆ ಊರುಗಳಿಗೆ ಹೋದಾಗ ಅಲ್ಲಿಯೂ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ಅವಕಾಶವಿದೆ ಅದಕ್ಕೇನೇ ಇ.ಎಸ್.ಐ. ನ ಒಂದು ಘೋಷ ವಾಕ್ಯ ಜನಪ್ರಿಯವಾಗಿದೆ. "ಕಹೀಂ ಭೀ, ಕಭೀ ಭೀ" ಅಂದರೆ, "ಎಲ್ಲಿಯಾದರೂ ಸರಿ ಯಾವಾಗ ಬೇಕಾದರೂ ಸರಿ" ಅಂತ.

**ಪ್ರಶ್ನೆ: ಅದಕ್ಕೆ ಏನನ್ನು ಮಾಡಬೇಕು ?**

**ಉತ್ತರ:** ಎಲ್ಲಕಿಂತ ಮುಖ್ಯವಾಗಿ ತಾತ್ಕಾಲಿಕವಾಗಿ ವೈಯಕ್ತಿಕ ಕಾರ್ಯ, ಕಾರ್ಯಕ್ರಮಕ್ಕಾಗಿ ಬೇರೆ ಊರುಗಳಿಗೆ ಹೊರಡುವಾಗ ಇ:ಪೆಹಚಾನ ಕಾರ್ಡನ್ನು ಜೊತೆಗೆ ತೆಗೆದುಕೊಂಡು ಹೋಗಬೇಕು ಇನ್ನೊಂದು ಮುಖ್ಯವಾದ ವಿಷಯವೆಂದರೆ, ವಿಮಾದಾರನು ತನ್ನ ಆಡಳಿತ ಮಂಡಳಿಯಿಂದ ಇ.ಎಸ್.ಐ. ನ ಫಾರ್ಮ: 105 ನ್ನು ಜಾರಿ ಮಾಡಿಸಿಕೊಂಡು ತೆಗೆದುಕೊಂಡು ಹೋಗಬೇಕು. ಅದರ ಆಧಾರದ ಮೇಲೆ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳುವುದಕ್ಕೆ ಅವಕಾಶವಿದೆ.

**ಪ್ರಶ್ನೆ: ವಿಮಾದಾರ ಹಾಗೂ ಅವನ ಕುಟುಂಬದ ಅವಲಂಬಿತ ಸದಸ್ಯರುಗಳು ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳುವುದಕ್ಕೆ ಅವಕಾಶವಿದೆ ಒಂದು ವೇಳೆ ಅವರಿಗೆ ಬೇಕಾದ ಸೌಲಭ್ಯ ಇ.ಎಸ್.ಐ. ಆಸ್ಪತ್ರೆಯಲ್ಲಿ ಇಲ್ಲದೇ ಇದ್ದ ಸಂದರ್ಭದಲ್ಲಿ ಸ್ವಂತ ಖರ್ಚಿನಲ್ಲಿ ಬೇರೆ ಕಡೆಗೆ ಚಿಕಿತ್ಸೆ ಪಡೆದುಕೊಳ್ಳಬೇಕಾಗುತ್ತಲ್ಲ ?**

**ಉತ್ತರ:** ಇದೇ ಕಾರಣಕ್ಕಾಗಿ ಇ.ಎಸ್.ಐ. ಒಂದು ಹೆಜ್ಜೆ ಮುಂದೆ ಹೋಗಿ ತನ್ನ ವಿಮಾದಾರರ ಹಿತರಕ್ಷಣೆಗಾಗಿ ಒಡಂಬಡಿಕೆಯ ವ್ಯವಸ್ಥೆಯನ್ನು ಮಾಡಿದೆ.

**ಪ್ರಶ್ನೆ: ಇದೇನು ಒಡಂಬಡಿಕೆ ವ್ಯವಸ್ಥೆ ? ಸ್ವಲ್ಪ ಬಿಡಿಸಿ ಹೇಳಿ.**

**ಉತ್ತರ:** ಇ.ಎಸ್.ಐ. ಇಲಾಖೆ ತನ್ನ ವಿಮಾದಾರರಿಗೆ ಶೇಕಡ ನೂರಕ್ಕೆ ನೂರು ವೈದ್ಯಕೀಯ ಸೌಲಭ್ಯವನ್ನು ಒದಗಿಸಿ ಕೊಡುವುದಾಗಿ ಆಶ್ವಾಸನೆ ನೀಡಿದೆ. ಹೀಗಿರುವಾಗ ತನ್ನ ಚಿಕಿತ್ಸಾಲಯ ಹಾಗೂ ಆಸ್ಪತ್ರೆಗಳಲ್ಲಿ ಕೆಲವು ಕಾಯಿಲೆ ಹಾಗೂ ಆರೈಕೆಯ ವ್ಯವಸ್ಥೆಗಾಗಿ ಏನು ಮಾಡಬೇಕು ? ಈ

ಸಮಸ್ಯೆಗೆ ಪರಿಹಾರವೇ ಒಡಂಬಡಿಕೆಯ ವ್ಯವಸ್ಥೆ. ಈ ಮೂಲಕ ದೇಶದಾದ್ಯಂತ ಆಯ್ದ ಖಾಸಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವಿಮಾದಾರರು ಹಾಗೂ ಅವರ ಕುಟುಂಬದ ಸದಸ್ಯರುಗಳಿಗೆ ನಗದು ರಹಿತ ಅಂದರೆ, ಕ್ಯಾಶ್‌ಲೆಸ್ ವೈದ್ಯಕೀಯ ಸೌಲಭ್ಯ ನೀಡಲಾಗುತ್ತದೆ. ಅದರ ವೆಚ್ಚವನ್ನು ನೇರವಾಗಿ ಇ.ಎಸ್.ಐ. ಇಲಾಖೆ ಸಂದಾಯ ಮಾಡುತ್ತದೆ.

**ಪ್ರಶ್ನೆ: ಇಂತಹ ಆಸ್ಪತ್ರೆಗಳಿಗೆ ಕುಟುಂಬದ ಸದಸ್ಯರು ನೇರವಾಗಿ ಹೋಗಬಹುದೆ?**

**ಉತ್ತರ:** ತುರ್ತು ಸಂದರ್ಭದಲ್ಲಿ ಒಡಂಬಡಿಕೆಗೆ ಒಳಪಟ್ಟ ಆಸ್ಪತ್ರೆಗಳಿಗೆ ನೇರವಾಗಿ ಹೋಗಿ ಭರ್ತಿಯಾಗಬಹುದು ಆದರೆ, ಅದರ ಸೂಚನೆಯನ್ನು 24 ಗಂಟೆಯ ಒಳಗಾಗಿ ಸಂಬಂಧಪಟ್ಟ ಇ.ಎಸ್.ಐ. ಚಿಕಿತ್ಸಾಲಯಕ್ಕೆ ಸೂಚನೆ ನೀಡಬೇಕು. ಇನ್ನು ಸಾಮಾನ್ಯ ಸಂದರ್ಭದಲ್ಲಿ ಇ.ಎಸ್.ಐ. ಚಿಕಿತ್ಸಾಲಯಕ್ಕೆ ಹೋಗಿ ಅವರ ಶಿಫಾರಸಿನ ಪತ್ರದೊಂದಿಗೆ ಅವರು ಸೂಚಿಸಿದ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಹೋಗಬಹುದು.

**ಪ್ರಶ್ನೆ: ಇ.ಎಸ್.ಐ. ವೈದ್ಯಾಧಿಕಾರಿಗಳು ಸೂಚಿಸಿದ ಒಡಂಬಡಿಕೆಯ ಆಸ್ಪತ್ರೆ ವಿಮಾದಾರರ ವಾಸಸ್ಥಾನದಿಂದ ದೂರ ಪ್ರದೇಶದಲ್ಲಿದ್ದರೆ, ಹೋಗಿ ಬರುವ ಖರ್ಚು ಹೆಚ್ಚು ಬರುವ ಭಯದಿಂದ ಅವರು ಹೋಗಲು ಹಿಂದೇಟು ಹಾಕುತ್ತಾರೆ. ಹೀಗಾಗಿ ಅವರು ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗುವ ಸಂಭವವಿದೆ ಅಲ್ಲವೆ?**

**ಉತ್ತರ:** ವಿಮಾದಾರರ ಈ ಸಮಸ್ಯೆಗೆ ಪರಿಹಾರವನ್ನು ಇ.ಎಸ್.ಐ. ಇಲಾಖೆ ಸೂಚಿಸಿದೆ. ದೂರದ ಊರುಗಳಿಗೆ ವೈದ್ಯಕೀಯ ಸೌಲಭ್ಯ ಪಡೆದುಕೊಳ್ಳಲು ಹೋಗುವ ವ್ಯಕ್ತಿ ಹಾಗೂ ಅವರೊಂದಿಗೆ ಹೋಗುವ ಮತ್ತೊಬ್ಬ ವ್ಯಕ್ತಿ ಇಬ್ಬರೂ ಹೋಗಿ ಬರುವ ಪರಿವಹನದ ಖರ್ಚನ್ನೂ ಇ.ಎಸ್.ಐ. ಇಲಾಖೆ ಸಂದಾಯ ಮಾಡುತ್ತದೆ. ಉದಾಹರಣೆಗೆ ವಿಮಾದಾರನೊಬ್ಬ ತನ್ನ ತಾಯಿಗೆ ಚಿಕಿತ್ಸೆ ಕೊಡಿಸಲು ಇ.ಎಸ್.ಐ. ವೈದ್ಯಾಧಿಕಾರಿಗಳ ಶಿಫಾರಸಿನ ಮೇರೆಗೆ ತನ್ನ ಸ್ವಂತದ ಊರಿನಿಂದ

ದೂರದ ಬೆಂಗಳೂರಿಗೆ ಕರೆದುಕೊಂಡು ಹೋಗ್ತಾನೆ ಅಂದ್ಕೊಳ್ಳಿ. ಆಗ ವಿಮಾದಾರ ಹಾಗೂ ಅವನ ತಾಯಿಗೆ ಬೆಂಗಳೂರಿಗೆ ಹೋಗಿ ಬರುವ ಪರಿವಹನದ ಖರ್ಚನ್ನು ಇ.ಎಸ್.ಐ. ಇಲಾಖೆ ಸಂದಾಯ ಮಾಡುತ್ತದೆ. ಇನ್ನು ಚಿಕಿತ್ಸೆಯು ನಿಃಶುಲ್ಕ ಅಂದರೆ, ಕ್ಯಾಶ್‌ಲೆಸ್ ಇದ್ದೇ ಇದೆ.

**ಪ್ರಶ್ನೆ: ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಅಪಘಾತಕ್ಕೆ ಈಡಾಗಿ ವಿಮಾದಾರ ಗಾಯಗೊಂಡರೆ ಇ.ಎಸ್.ಐ. ಆಸ್ಪತ್ರೆ ಹಾಗೂ ಒಡಂಬಡಿಕೆಯ ಆಸ್ಪತ್ರೆಗಳಲ್ಲಿ ಆರೈಕೆಗೆ ಮಾಡಿಕೊಳ್ಳುವ ವ್ಯವಸ್ಥೆ ಇದೆ ಈಗ ನನ್ನದು ಬೇರೆಯದೇ ಪ್ರಶ್ನೆ** ?

**ಉತ್ತರ:** ನೀವು ಕೇಳುವ ಮೊದಲೇ ಉತ್ತರಿಸುತ್ತೇನೆ. ಕಾರ್ಯಸ್ಥಳದಿಂದ ಇ.ಎಸ್.ಐ. ಹಾಗೂ ಇ.ಎಸ್.ಐ. ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಂಡ ಆಸ್ಪತ್ರೆಗಳು ದೂರದಲ್ಲಿವೆ. ಅವುಗಳನ್ನು ಹುಡುಕಿಕೊಂಡು ಹೋದರೆ ರೋಗ ಉಲ್ಬಣವಾಗಿ ಪರಿಸ್ಥಿತಿ ಕೈಮೀರುವ ಸಂದರ್ಭವಿರುತ್ತದೆ. ಅಂತಹ ಸಂದರ್ಭದಲ್ಲಿ ವಿಮಾದಾರರು ಗಾಬರಿಯಾಗುವ ಅವಶ್ಯಕತೆಯೇ ಇಲ್ಲ ತಕ್ಷಣವೇ ತಮಗೆ ಹತ್ತಿರವಿರುವ ಅತ್ಯುತ್ತಮವೆನ್ನಿಸುವ ಯಾವುದೇ ಖಾಸಗಿ ಆಸ್ಪತ್ರೆಗೆ ಹೋಗಿ ಆರೈಕೆ ಮಾಡಿಕೊಳ್ಳಬಹುದು ಆದರೆ, ಇದರ ಸೂಚನೆಯನ್ನು 24 ಗಂಟೆಯ ಒಳಗಡೆ ಸಂಬಂಧಪಟ್ಟ ಇ.ಎಸ್.ಐ. ಚಿಕಿತ್ಸಾಲಯಕ್ಕೆ ತಿಳಿಸಬೇಕು. ಈ ಸಂದರ್ಭವನ್ನು ತಮಗೆ ಒಂದು ಉದಾಹರಣೆಯೊಂದಿಗೆ ವಿವರಿಸುತ್ತೇನೆ. ಬಾಗಲಕೋಟ ಪಟ್ಟಣದಲ್ಲಿ ಒಬ್ಬ ವಿಮಾದಾರನ ಕುಟುಂಬ ವಾಸವಾಗಿದೆ. ದುರ್ದೈವವಶಾತ್ ವಿಮಾದಾರನ ತಾಯಿಗೆ ಮಧ್ಯರಾತ್ರಿಯಲ್ಲಿ ಎದೆಯಲ್ಲಿ ನೋವು ಕಾಣಿಸಿತು ಎಂದುಕೊಳ್ಳೋಣ. ಮೇಲ್ನೋಟಕ್ಕೆ ಇದು ಹೃದಯಾಘಾತದ ಲಕ್ಷಣ ಅಂತಲೇ ಗೋಚರವಾಗುತ್ತದೆ. ಆ ತಾಯಿಯನ್ನು ತಕ್ಷಣ ಆಸ್ಪತ್ರೆಗೆ ಸೇರಿಸಬೇಕು. ಬಾಗಲಕೋಟಗೆ ಹತ್ತಿರವೆಂದರೆ ಇ.ಎಸ್.ಐ. ಹುಬ್ಬಳ್ಳಿ ಆಸ್ಪತ್ರೆ ಅದು ಬಾಗಲಕೋಟದಿಂದ 110 ಕಿ.ಮೀ ಇನ್ನು ಇ.ಎಸ್.ಐ. ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಂಡ ಶ್ರೀ ಕುಮಾರೇಶ್ವರ ಆಸ್ಪತ್ರೆಯ ದೂರವೂ ಮನೆಯಿಂದ 3 ಕಿಲೋ ಮೀಟರ್ ಟ್ಯಾಕ್ಸಿ ಮಾಡಿ

ಅಲ್ಲಿಗೆ ತಲುಪುವುದರಲ್ಲಿ ಪ್ರಾಣಕ್ಕೆ ಕುತ್ತು ಅಂತ ಅನ್ನಿಸಿದಾಗ ಮನೆಯ ಹತ್ತಿರವಿರುವ ಕೆರೂಡಿ ಆಸ್ಪತ್ರೆಗೆ ಸೇರಿಸಿ ಆರೈಕೆ ಮಾಡಿಸಬೇಕು. ನೆನಪಿರಲಿ, ಈ ವಿಷಯವನ್ನು 24 ಗಂಟೆಯ ಒಳಗಾಗಿ ಸಂಬಂಧಪಟ್ಟ ಅಂದರೆ, ಬಾಗಲಕೋಟದಲ್ಲಿರುವ ಇ.ಎಸ್.ಐ. ಚಿಕಿತ್ಸಾಲಯಕ್ಕೆ ಇದರ ಸೂಚನೆಯನ್ನು ಕೊಡಬೇಕು.

**ಪ್ರಶ್ನೆ: ಆ ಖಾಸಗಿ ಆಸ್ಪತ್ರೆಯ ಖರ್ಚಿಗೆ ಪರಿಹಾರ ?**

**ಉತ್ತರ:** ಖಾಸಗಿ ಆಸ್ಪತ್ರೆಯಲ್ಲಿ ಆರೈಕೆ ಮಾಡಿಸಿಕೊಂಡು ವಿಮಾದಾರರು ಖಾಸಗಿ ಆಸ್ಪತ್ರೆಗೆ ಬಿಲ್ಲನ್ನು ಸಂದಾಯ ಮಾಡಿ ಆಸ್ಪತ್ರೆಗೆ ದಾಖಲಾದ ಹಾಗೂ ಅಲ್ಲಿಂದ ಬಿಡುಗಡೆಯಾದ ಮೂಲ ಪ್ರಮಾಣ ಪತ್ರಗಳೊಂದಿಗೆ ಖರ್ಚು ಮಾಡಿದ ಪಾವತಿ ರಶೀದಿಗಳೊಂದಿಗೆ ಸಂಬಂಧಪಟ್ಟ ಇ.ಎಸ್.ಐ. ಚಿಕಿತ್ಸಾಲಯಕ್ಕೆ ಪ್ರಸ್ತುತ ಪಡಿಸಬೇಕು. ಕೇಂದ್ರ ಸರಕಾರದ ಆರೋಗ್ಯ ಸೇವೆಯ ದರದಂತೆ ಹಣವನ್ನು ಸಂದಾಯ ಮಾಡುತ್ತದೆ ಇ.ಎಸ್.ಐ. ಇಲಾಖೆ.

**ಪ್ರಶ್ನೆ: ವಿಮಾದಾರ ಕೆಲಸದ ಸಂದರ್ಭದಲ್ಲಿ ಅಪಘಾತಕ್ಕೀಡಾಗಿ ವಿಕಲಾಂಗನಾದರೆ?**

**ಉತ್ತರ:** ಇ.ಎಸ್.ಐ. ವೈದ್ಯಕೀಯ ಮಂಡಳಿಯ ಶಿಫಾರಸಿನ ಮೇರೆಗೆ ವಿಮಾದಾರರಿಗೆ ಶಾಶ್ವತ ವಿಕಲಾಂಗತೆಯ ಹಿತಲಾಭದ ರೂಪದಲ್ಲಿ ಜೀವನ ಪರ್ಯಂತ ಪಿಂಚಣಿ ನೀಡುತ್ತದೆ. ಇದಕ್ಕೆ ಶಾಶ್ವತ ವಿಕಲಾಂಗತೆಯ ಫಲಾನುಭವ ಎಂದು ಕರೆಯುತ್ತಾರೆ.

**ಪ್ರಶ್ನೆ: ಈ ವೈದ್ಯಕೀಯ ಮಂಡಳಿ ಯಾವ ಊರಿನಲ್ಲಿರುತ್ತದೆ? ವಿಮಾದಾರರು ಸ್ವತಃ ಹೋಗಬೇಕೆ ?**

**ಉತ್ತರ:** ಹೌದು, ಸ್ವತಃ ವಿಮಾದಾರರು ವೈದ್ಯಕೀಯ ಮಂಡಳಿಯ ಎದುರು ಹಾಜರಾಗಬೇಕಾಗುತ್ತದೆ. ಸಾಮಾನ್ಯವಾಗಿ ಆಯಾ ರಾಜ್ಯದ ರಾಜ್ಯ ಚಿಕಿತ್ಸಾ ಆಯುಕ್ತರು, ನಿರ್ದೇಶಕರು (ವೈದ್ಯಕೀಯ ಸೇವೆ) ಹಾಗೂ ಚಿಕಿತ್ಸಾ ನಿರ್ದೇಶಕರನ್ನೊಳಗೊಂಡ ಈ ಸಮಿತಿ ನಿಗದಿತ ಸ್ಥಳದಲ್ಲಿ ತಿಂಗಳಿಗೊಮ್ಮೆ ಸೇರಿ ಇಂತಹ ಅಹವಾಲುಗಳನ್ನು ವಿಲೇವಾರಿ ಮಾಡುತ್ತದೆ.

**ಪ್ರಶ್ನೆ: ಸಾಮಾನ್ಯವಾಗಿ ಸಮಿತಿಯು ಸೇರುವ ಸ್ಥಳ ದೊಡ್ಡ ಊರೇ ಆಗಿರುತ್ತದೆ ಅಂದ್ಕೊಳ್ತೀನಿ, ಅಲ್ಲಿಗೆ ಹೋಗಿ-ಬರಲು ವಿಮಾದಾರ ಪರಿವಹನಕ್ಕೆಂದು ಖರ್ಚು ಮಾಡಬೇಕಾಗುತ್ತದೆ. ಹೀಗಾಗಿ ಅವನು ಹೋಗದೇ ಇರುವ ಸಂದರ್ಭವೂ ಬರುತ್ತದೆ.**

**ಉತ್ತರ:** ವಿಮಾದಾರರು ಈ ವಿಷಯವಾಗಿ ಯೋಚಿಸಬೇಕಾದುದಿಲ್ಲ ಕಾರಣ ವೈದ್ಯಕೀಯ ಮಂಡಳಿಯ ಮುಂದೆ ಹಾಜರಾಗಲು ಹೋಗಿ ಬರುವ ಪರಿವಹನದ ಖರ್ಚನ್ನು ಇ.ಎಸ್.ಐ. ಇಲಾಖೆಯು ಸಂದಾಯ ಮಾಡುತ್ತದೆ ಹಾಗೂ ಅಂದಿನ ಅವನ ಸಂಬಳವನ್ನು ಸಹ ಇ.ಎಸ್.ಐ. ಇಲಾಖೆಯು ಸಂದಾಯ ಮಾಡಲಾಗುತ್ತದೆ.

**ಪ್ರಶ್ನೆ: ವಿಕಲಾಂಗತೆ ಹೆಚ್ಚಾಗಿದ್ದು ಸಾಮಾನ್ಯ ಬಸ್ಸು ಅಥವಾ ರೈಲಿನಲ್ಲಿ ಪ್ರಯಾಣಿಸಲು ಆಗದೇ ಇದ್ದರೆ ?**

**ಉತ್ತರ:** ಅಂತಹ ಸಂದರ್ಭದಲ್ಲಿ ವಿಮಾದಾರರಿಗೆ ಸರಕಾರಿ ದರದಲ್ಲಿ ಟ್ಯಾಕ್ಸಿಗೆ ತಗಲುವ ವೆಚ್ಚವನ್ನು ಸಂದಾಯ ಮಾಡಲಾಗುತ್ತದೆ ಹೀಗಾಗಿ ಯೋಚಿಸಬೇಕಾದುದಿಲ್ಲ. ಹಾಗೆಯೇ ಅಂದಿನ ದಿನದ ಸಂಬಳವನ್ನೂ ಅವರಿಗೆ ಸಂದಾಯ ಮಾಡಲಾಗುತ್ತೆ.

**ಪ್ರಶ್ನೆ: ಪ್ರಪಂಚದಲ್ಲಿಯೇ ಹಿರಿದಾದ ಸಾಮಾಜಿಕ ಸುರಕ್ಷಾ ಯೋಜನೆಯ ಪ್ರಮುಖವಾದ ಫಲಾನುಭವಗಳಾದ ವೈದ್ಯಕೀಯ, ಚಿಕಿತ್ಸಾ, ಮಾತೃತ್ವ, ಆಶ್ರಿತ ಜನರ ಹಾಗೂ ಶಾಶ್ವತ ವಿಕಲಾಂಗತೆಗಳಿಗೆ ಸಂಬಂಧಪಟ್ಟ ಹಿತಲಾಭ ಹಾಗೂ ಫಲಾನುಭವಗಳೂ ಸೇರಿದಂತೆ ಇ.ಎಸ್.ಐ. ಅಧಿನಿಯಮದಡಿ ಘಟಕವೊಂದನ್ನು ನೋಂದಾಯಿಸಿ ಹಲವು ಸಮಸ್ಯೆಗಳ ಚಿಂತೆಯಿಂದ ಮುಕ್ತರಾಗುವುದು ಹೇಗೆ ಎಂಬ ವಿಷಯವನ್ನು ಸೂಚ್ಯವಾಗಿ ತಿಳಿಸಿದ್ರಿ. ಪ್ರಾಸ್ತಾವಿಕದಲ್ಲಿ ಐದು ಪ್ರಮುಖ ಹಿತಲಾಭಗಳೂ ಸೇರಿದಂತೆ ಚಿಕ್ಕ-ಪುಟ್ಟ ಸೌಲಭ್ಯಗಳೂ ಇ.ಎಸ್.ಐ. ಇಲಾಖೆಯಿಂದ ವಿಮಾದಾರರಿಗೆ ಸಿಗುತ್ತವೆ ಎನ್ನುವ ಮಾತನ್ನು ನೀವು ಹೇಳಿದ್ರಿ. ನಿಮ್ಮ ಮಾತು ನಿಜವಾಗಿದ್ದರೆ, ಅಂತಹ ಪುಟ್ಟ ಸೌಲಭ್ಯಗಳ ಬಗ್ಗೆ ತಿಳಿಸಿಕೊಡ್ತೀರಾ?**

**ಉತ್ತರ:** ಖಂಡಿತವಾಗಿಯೂ ತಿಳಿಸಿಕೊಡ್ತೀನಿ. 'ಪಂಚದೀಪ'ವನ್ನು ತನ್ನ ಲಾಂಛನವನ್ನಾಗಿ ಇರಿಸಿಕೊಂಡು ಅಧಿಕತಮ ಮಾಸಿಕ 21,000=00

ರೂಪಾಯಿ ಸಂಬಳ ಪಡೆಯುತ್ತಿರುವ ಕಾರ್ಮಿಕರು, ನೌಕರರು ಹಾಗೂ ಸಿಬ್ಬಂದಿಗೆ ಪ್ರಮುಖ ಐದು ಫಲಾನುಭವಗಳನ್ನು ಕೊಡುತ್ತಿರುವ ಇ.ಎಸ್.ಐ. ಇಲಾಖೆಯು ಚಿಕ್ಕಪುಟ್ಟ ಫಲಾನುಭವಗಳನ್ನು ನೀಡುತ್ತದೆ.

**ಪ್ರಶ್ನೆ: ಅದರಲ್ಲಿ ಮೊದಲನೆಯದು ಯಾವುದು ?**

**ಉತ್ತರ:** ಮೊದಲನೆಯ ಫಲಾನುಭವದ ಹೆಸರು 'ಸೇವಾ ನಿವೃತ್ತಿಯ ನಂತರವೂ ವೈದ್ಯಕೀಯ ಸೌಲಭ್ಯ'. ವಿಮಾದಾರರು ಸೇವಾ ನಿವೃತ್ತಿ ಹೊಂದಿದರೆ, ಹಾಗೂ ಸ್ವಯಂ ನಿವೃತ್ತಿ ಪಡೆದುಕೊಂಡರೆ ದಂಪತಿಗಳಿರ್ವರೂ ಇ.ಎಸ್.ಐ. ಇಲಾಖೆಯಿಂದ ವೈದ್ಯಕೀಯ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಅಂದರೆ, ಪುರುಷ ವಿಮಾದಾರ ಹಾಗೂ ಅವನ ಮಡದಿ ಹಾಗೂ ಮಹಿಳಾ ವಿಮಾದಾರಳು ಹಾಗೂ ಆಕೆಯ ಗಂಡ ಸಂಪೂರ್ಣ ವೈದ್ಯಕೀಯ ಫಲಾನುಭವಕ್ಕೆ ಅರ್ಹರಾಗಿರುತ್ತಾರೆ. ಇಲ್ಲಿ ಕುಟುಂಬದ ಆಶ್ರಿತ ಸದಸ್ಯರಿಗೆ ಅವಕಾಶವಿಲ್ಲವೆನ್ನುವುದನ್ನು ಮರೆಯಬಾರದು.

**ಪ್ರಶ್ನೆ: ಪರ್ವಾ ಇಲ್ವೆ. ಮುಪ್ಪಿನಲ್ಲಿ ಸಾಮಾನ್ಯವಾಗಿ ಮನುಷ್ಯನಿಗೆ ಕಾಯಿಲೆಗಳು ಮುತ್ತಿಕೊಳ್ಳುತ್ತವೆ. ಬಹುಪಾಲು ಹಣ-ಆಸ್ಪತ್ರೆ-ಔಷಧಿಗಳಿಗೇನೇ ಖರ್ಚಾಗುವುದರಿಂದ ಮುಪ್ಪು ಅವರಿಗೆ ಭಾರವಾಗಿ ಪರಿಣಮಿಸುತ್ತದೆ. ಹೀಗಿರುವಾಗ ಸಾಮಾಜಿಕ ಭದ್ರತೆಯ ಅಭಯವನ್ನು ನೀಡುವ ಇ.ಎಸ್.ಐ. ಯೋಜನೆಯಲ್ಲಿ ಇದೊಂದು ಶ್ಲಾಘನೀಯ ಸಂಗತಿ. ಇಲ್ಲಿ ನನ್ನದೊಂದು ಪುಟ್ಟ ಪ್ರಶ್ನೆ.**

**ಉತ್ತರ:** ಹೇಳಿ ಏನು ನಿಮ್ಮ ಪ್ರಶ್ನೆ ?

**ಪ್ರಶ್ನೆ: ಇದು ಸಾರಾಸಗಟಾಗಿ ಎಲ್ಲ ವಿವಾದಾರರಿಗೂ ಅನ್ವಯವಾಗುತ್ತದೆಯೋ ಅಥವಾ ಯಾವುದಾದರೂ ಷರತ್ತು ಇದೆಯೇ ?**

ಉತ್ತರ: ನಿಮ್ಮ ಶಂಕೆ ಹಾಗೂ ಊಹೆ ಸರಿಯಾಗಿಯೇ ಇದೆ. ಇದಕ್ಕೊಂದು ಷರತ್ತು ಉಂಟು. ವಿಮಾದಾರನೊಬ್ಬ ಸೇವಾ ನಿವೃತ್ತಿ ಅಥವಾ ಸ್ವಯಂ ನಿವೃತ್ತಿ ಹೊಂದುವ ಪೂರ್ವದಲ್ಲಿ ಕನಿಷ್ಠಪಕ್ಷ 5